# ಕಾರ್ಮಿಕ ದೃಷ್ಟಿಕೋನ

ಡಿಸೆಂಬರ್ 2025 ಬೆಲೆ: ರೂ. 7/-

ಸಂಪುಟ: 38 ಸಂಚಿಕೆ: 10


ಒಳ ಪುಟಗಳಲ್ಲಿ............


ಪುಟ-2 ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ 15% ಎನ್‌ಆರ್‌ಐ (NRI) ಕೋಟಾ ಹಿಂಪಡೆಯಿರಿ!

ಪುಟ-4 ಯಾವುದು ನಿಜವಾದ ದೇಶಪ್ರೇಮ, ಯಾವುದು ನಿಜವಾದ ರಾಷ್ಟ್ರವಾದ

ಪುಟ-6 ಸುರಂಗ ರಸ್ತೆ ವಿರೋಧಿಸಿ ಜನಸಮಾವೇಶ

ಪುಟ-7 ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿರ್ಮೂಲನಾ ದಿನ

ಪುಟ-8 350 ವರ್ಷದ ಬಂಡವಾಳವಾದ V/s 30 ವರ್ಷದ ಸಮಾಜವಾದ

ಪುಟ-9 ನುಸುಳುಕೋರರು ಭಾರತವನ್ನೇ ಬದಲಿಸುತ್ತಿದ್ದಾರೆ ಎಂಬ ಹುಸಿ ಸಂಕಥನ

ಪುಟ-11 ಜಿಮ್ಮರ್‌ವಾಲ್ಡ್ ಸಮ್ಮೇಳನದಲ್ಲಿ ಎಸ್‌ಯುಸಿಐ(ಸಿ) ಭಾಗಿ



ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ SUCI(C) ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ


## ಎಐಡಿವೈಓ: ಖಾಲಿ ಹುದ್ದೆಗಳ ಭರ್ತಿಗಾಗಿ ಸಹಿ ಸಂಗ್ರಹ ಅಭಿಯಾನ

ನಮ್ಮ ರಾಜ್ಯದಲ್ಲಿ 2.84ಲಕ್ಷ ಹುದ್ದೆಗಳು, ಕೇಂದ್ರದಲ್ಲಿ 9.79 ಲಕ್ಷ ಹುದ್ದೆಗಳು ಖಾಲಿ ಇವೆ. ಆದರೆ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಸರ್ಕಾರಗಳು ಹತ್ತಾರು ವರ್ಷಗಳಿಂದ ನೇಮಕಾತಿಗಳನ್ನೇ ಮಾಡದೆ ಸಮಯ ತಳ್ಳುವ ಕೆಲಸ ಮಾಡುತ್ತಿವೆ. ಈ ಬಿಕ್ಕಟ್ಟನ್ನು ಪರಿಹರಿಸಲು ಅವರು ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ, ಬದಲಿಗೆ ಕಾರ್ಪೊರೇಟ್ ಪರ ನೀತಿಗಳನ್ನು ಜಾರಿಗೊಳಿಸಿ, ಅದನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿವೆ. ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲದೆ ಹಲವು ರಾಜ್ಯಗಳಲ್ಲಿ ಉದ್ಯೋಗಾಕಾಂಕ್ಷಿಗಳು ಪ್ರತಿಭಟಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಜನಾಭಿಪ್ರಾಯವನ್ನು ರೂಪಿಸಿ, ಆಳುವ ಸರ್ಕಾರಗಳ ಮೇಲೆ ಒತ್ತಡ ಹೇರಲು ಎಐಡಿವೈಓ ಯುವಜನ ಸಂಘಟನೆಯ ಅಖಿಲ ಭಾರತ ಸಮಿತಿಯು ಸಹಿ ಸಂಗ್ರಹ ಅಭಿಯಾನಕ್ಕೆ ಕರೆ ನೀಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತಕ್ಷಣವೇ ಭರ್ತಿ ಮಾಡಬೇಕು, ನೇಮಕಾತಿ ಪ್ರಕ್ರಿಯೆ ಸಂಪೂರ್ಣ ಪಾರದರ್ಶಕವಾಗಿ ನಡೆಯಬೇಕು ಎಂಬ ಇನ್ನಿತರ ಹಕ್ಕೊತ್ತಾಯಗಳ ಕರಪತ್ರಗಳನ್ನು ವ್ಯಾಪಕವಾಗಿ ಸಾರ್ವಜನಿಕರಿಗೆ ವಿತರಿಸಲಾಯಿತು. ಬಹಳಷ್ಟು ಜನ ಹಿರಿಯರು ತಮ್ಮ ಕಳವಳವನ್ನು ವ್ಯಕ್ತಪಡಿಸಿ ಈ ಚಳುವಳಿ ಯಶಸ್ವಿಯಾಗಲಿ ಎಂದು ಹರಸಿದರು. ಉದ್ಯೋಗ ಆಕಾಂಕ್ಷಿ ಯುವಜನರು ಸಾವಿರಾರು ಸಂಖ್ಯೆಯಲ್ಲಿ ಸಹಿ ಮಾಡಿ ಬೆಂಬಲಿಸಿದರು.

ಬೆಂಗಳೂರಿನಲ್ಲಿ ನಡೆದ ಸಹಿ ಸಂಗ್ರಹ ಅಭಿಯಾನದ ಸಂದರ್ಭದಲ್ಲಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ. ಟಿ. ಆರ್. ಚಂದ್ರಶೇಖರ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಎಸ್. ಜಿ. ಸಿದ್ದರಾಮಯ್ಯ, ಖ್ಯಾತ ವಿಮರ್ಶಕರಾದ ಡಾ. ಎಂ. ಎಸ್. ಆಶಾದೇವಿ, ಖ್ಯಾತ ಗಾಯಕಿ ಎಂ. ಡಿ. ಪಲ್ಲವಿ, ಬಳ್ಳಾರಿಯಲ್ಲಿ ನಡೆದ ಸಹಿಸಂಗ್ರಹ ಅಭಿಯಾನದಲ್ಲಿ ಖ್ಯಾತ ಕತೆಗಾರರಾದ ಕುಂ.ವೀರಭದ್ರಪ್ಪ, ಖ್ಯಾತ ಸಂಗೀತ ನಿರ್ದೇಶಕರಾದ ಡಾ.ಹಂಸಲೇಖ, ಹೋರಾಟಗಾರರಾದ ಉಗ್ರ ನರಸಿಂಹೇಗೌಡ, ಇನ್ನು ಹಲವಾರು ಜನ ಗಣ್ಯರು ಸಹಿ ನೀಡಿ ಬೆಂಬಲಿಸಿದರು. ಮೈಸೂರು, ಎಚ್.ಡಿ.ಕೋಟೆ, ರಾಯಚೂರು, ವಿಜಯಪುರ, ಕೊಪ್ಪಳ, ವಿಜಯನಗರ ಜಿಲ್ಲೆಯ ಹೊಸಪೇಟೆ, ಮುಂತಾದ ಹಲವು ಜಿಲ್ಲೆಗಳಲ್ಲಿ ಈ ಸಹಿಸಂಗ್ರಹ ಅಭಿಯಾನ ನಡೆಯಿತು.ಈ ಅಭಿಯಾನವು 2026ರ ಫೆಬ್ರುವರಿ ಕೊನೆಯ ವಾರದವರೆಗೂ ಮುಂದುವರೆಯುತ್ತದೆ.

2ನೇ ಪುಟಕ್ಕೆ....

### ಧಾರವಾಡದಲ್ಲಿ ಪ್ರತಿಭಟನೆ ನಡೆಸಿದ ಉದ್ಯೋಗಾಕಾಂಕ್ಷಿಗಳ ಬಂಧನ



ಹೋರಾಟದ ಹಕ್ಕನ್ನು ನಿರಾಕರಿಸಿದ ಪೊಲೀಸರು: ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಹಾಗೂ ಜನಸಾಮಾನ್ಯರ ವೇದಿಕೆ ನೇತೃತ್ವದಲ್ಲಿ ಶಾಂತಿಯುತವಾಗಿ ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾದ ಯುವಜನರನ್ನು ಪೊಲೀಸರು ಚದುರಿಸಿ, ಅವರ ನಾಯಕರನ್ನು ಬಂಧಿಸಿದರು.

### ಕೆಪಿಎಸ್–ಮ್ಯಾಗ್ನೆಟ್ ಯೋಜನೆ:

## ಸರ್ಕಾರಿ ಶಾಲೆಗಳಿಗೆ ಆಗದಿರಲಿ ಮರಣ ಶಾಸನ!

ಬೆಂಗಳೂರು: ಕೆಪಿಎಸ್–ಮ್ಯಾಗ್ನೆಟ್ ಶಾಲೆಗಳಲ್ಲಿ ಸುತ್ತಲಿನ ಶಾಲೆಗಳ ವಿಲೀನದೊಂದಿಗೆ 40,000ಕ್ಕೂ ಅಧಿಕ ಸರ್ಕಾರಿ ಶಾಲೆಗಳಿಗೆ ಕಂಟಕ ತಂದೊಡ್ಡಿರುವ ರಾಜ್ಯ ಸರ್ಕಾರದ ವಿರುದ್ಧ ಎಐಡಿಎಸ್‌ಓ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು. ಸಾವಿರಾರು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ವಿದ್ಯಾರ್ಥಿಗಳು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್ ಮಾತನಾಡಿ, "ಸರ್ಕಾರದ ಆದೇಶದ ಪ್ರಕಾರ, 800 ಶಾಲೆಗಳನ್ನು ಮ್ಯಾಗ್ನೆಟ್ ಶಾಲೆಗಳು ಎಂದು ಗುರುತಿಸಲಾಗಿದೆ. ಅಂದರೆ ಈ ಕರ್ನಾಟಕ ಪಬ್ಲಿಕ್ ಶಾಲೆ, ತನ್ನ ಸುತ್ತಮುತ್ತಲಿನ 1ರಿಂದ 5 ಕಿ.ಮೀ ವ್ಯಾಪ್ತಿಯ, 50ಕ್ಕಿಂತ ಕಡಿಮೆ ದಾಖಲಾತಿ ಹೊಂದಿರುವ ಶಾಲೆಗಳನ್ನು ತನ್ನಲ್ಲಿ ವಿಲೀನಗೊಳಿಸಿಕೊಳ್ಳಲಿದೆ. ಈ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತದೆ. ಈಗ ಸ್ಥಾಪಿಸಲಾಗುತ್ತಿರುವ ಚನ್ನಪಟ್ಟಣ ತಾಲೂಕಿನ ಹೊಂಗನೂರಿನ ಕೆಪಿಎಸ್ ಮಾಗ್ನೆಟ್ ಶಾಲೆಗೆ, ಹೊಂಗನೂರಿನ ಆರು ಕಿಮೀ ವ್ಯಾಪ್ತಿಯ 7 ಪ್ರಾಥಮಿಕ ಶಾಲೆಗಳನ್ನು ವಿದ್ಯಾರ್ಥಿ, ಉಪಾಧ್ಯಾಯರು ಮತ್ತು ಪರಿಕರಗಳ ಸಮೇತ ವಿಲೀನಗೊಳಿಸುವ ಸರ್ಕಾರದ ಆದೇಶದ ವಿರುದ್ಧ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದರಲ್ಲಿ 110ಕ್ಕೂ ಅಧಿಕ ಸಂಖ್ಯೆಯ ದಾಖಲಾತಿ ಹೊಂದಿರುವ ಶಾಲೆಗಳನ್ನೂ ಮುಚ್ಚಲು ಹೊರಟಿರುವುದು ಅತ್ಯಂತ ಖಂಡನೀಯ. ಕೆಪಿಎಸ್ ಶಾಲೆಗಳನ್ನು ತೆರೆಯುವುದಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಗ್ರಾಮ ಪಂಚಾಯಿತಿಗೆ ಒಂದು ಶಾಲೆಯನ್ನು ಮಾತ್ರ ತೆರೆಯುವುದನ್ನು ನಾವು ವಿರೋಧಿಸುತ್ತೇವೆ. ಏಕೆಂದರೆ, ಕರ್ನಾಟಕದಲ್ಲಿ ಒಟ್ಟು 49,600 ಸರ್ಕಾರಿ ಶಾಲೆಗಳಿದ್ದರೆ, ಗ್ರಾಮ ಪಂಚಾಯಿತಿಗಳು ಇರುವುದು 5,900; ಹೀಗಾದಲ್ಲಿ 5,900 ಶಾಲೆಗಳು ಮಾತ್ರ ಉಳಿಯುತ್ತವೆ. ಎಷ್ಟೋ ಹಳ್ಳಿಗಳಲ್ಲಿ ಬಸ್ ಸೌಕರ್ಯ ಇಲ್ಲ. ಸರ್ಕಾರವು ಪ್ರತಿ ಹಳ್ಳಿಗೆ ಬಸ್ ಬಿಡುತ್ತೇವೆ ಎಂದು ಹೇಳಿರುವುದನ್ನು ಹೇಗೆ ನಂಬುವುದು? ಹೀಗಿರುವಾಗ, 6–7 ಕಿಮೀ ದೂರದ ಶಾಲೆಯ ಬಡ ಮಕ್ಕಳು, ಅದರಲ್ಲೂ ಹೆಣ್ಣುಮಕ್ಕಳು ಶಿಕ್ಷಣದಿಂದ ದೂರ ಉಳಿಯುತ್ತಾರಷ್ಟೇ! ಈ ಯೋಜನೆಗೆ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ನಿಂದ ಈಗಾಗಲೇ ರೂ.2500 ಕೋಟಿ ಸಾಲ ಪಡೆದಿರುವ ಸರ್ಕಾರವು ಕಾರ್ಪೊರೇಟ್ ಹಿತಾಸಕ್ತಿ ಕಾಪಾಡಲು ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿದೆ. ನಮ್ಮ ದೇಶದ ನವೋದಯ ಚಳುವಳಿಯ ಹರಿಕಾರರಾದ ಈಶ್ವರಚಂದ್ರ ವಿದ್ಯಾಸಾಗರ್, ಜ್ಯೋತಿರಾವ್ ಫುಲೆ ಮುಂತಾದವರ ಮತ್ತು ಸ್ವಾತಂತ್ರ್ಯ ಸಂಗ್ರಾಮದ

12ನೇ ಪುಟಕ್ಕೆ....




ರಾಮನಗರ ಜಿಲ್ಲೆ, ಚನ್ನಪಟ್ಟಣ ತಾಲೂಕಿನ ಹೊಂಗನೂರು ಕೆಪಿಎಸ್ ಮಾಗ್ನೆಟ್ ಶಾಲೆಗೆ ಸುತ್ತಲಿನ ಏಳು ಗ್ರಾಮಗಳ ಸರ್ಕಾರಿ ಶಾಲೆಗಳ ವಿಲೀನ ಖಂಡಿಸಿ, ಸಾತನೂರು ವೃತ್ತದಲ್ಲಿ ಎಐಡಿಎಸ್‌ಓ ಏರ್ಪಡಿಸಿದ ಪ್ರತಿಭಟನಾ ಸಭೆಯಲ್ಲಿ ನೂರಾರು ಪೋಷಕರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಐಕೆಕೆಎಮ್‌ಎಸ್ ರೈತ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಎಚ್.ಪಿ.ಶಿವಪ್ರಕಾಶ್ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಉಪಾಧ್ಯಕ್ಷರಾದ ಎಂ.ಉಮಾದೇವಿ, ಎಐಡಿಎಸ್‌ಓ ರಾಜ್ಯ ಅಧ್ಯಕ್ಷರಾದ ಅಶ್ವಿನಿ.ಕೆ.ಎಸ್, ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್, ಸಾರ್ವಜನಿಕ ಶಿಕ್ಷಣ ಉಳಿಸಿ ಗ್ರಾಮ ಸಮಿತಿಯ ಶ್ರೀ ಮಂಜುನಾಥ್ ಮುಂತಾದವರು ಬೆಂಬಲಿಸಿ ಮಾತನಾಡಿದರು.

# ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ 15% ಎನ್ಆರ್ಐ (NRI) ಕೋಟಾ ಹಿಂಪಡೆಯಿರಿ!

## ಎಐಡಿಎಸ್ಓ ಸಂಘಟಿತ ವಿದ್ಯಾರ್ಥಿ ಸಮಾವೇಶದ ಆಗ್ರಹ!!




ವೇದಿಕೆ ಮೇಲೆ ಮಹಾಂತೇಶ ಬಿಳೂರ್, ಅಜಯ್ ಕಾಮತ್, ಮೃದುಲ್ ಸರ್ಕಾರ್, ಡಾ. ಮಧುಸೂದನ ಕಾರಿಗನೂರು, ಡಾ. ಶಶಿಧರ್ ಬಿಳಗಿ, ಅಭಯಾ ದಿವಾಕರ್, ಸುಭಾಷ್ ಬಿ.ಜೆ, ಹಾಗೂ ಇತರರು.

ಬೆಂಗಳೂರು: ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ 15% ಎನ್ಆರ್ಐ ಕೋಟಾ ಹಿಂಪಡೆಯುವಂತೆ ಆಗ್ರಹಿಸಿ ಎಐಡಿಎಸ್ಓ ನೇತೃತ್ವದಲ್ಲಿ ಗಾಂಧಿ ಭವನದಲ್ಲಿ ರಾಜ್ಯಮಟ್ಟದ ವಿದ್ಯಾರ್ಥಿಗಳ ಸಮಾವೇಶವನ್ನು ಸಂಘಟಿಸಲಾಗಿತ್ತು.

ಈ ಸಮಾವೇಶಕ್ಕೆ ಅತಿಥಿಗಳಾಗಿ ಖ್ಯಾತ ವೈದ್ಯರು, ಐಎಂಎ ಕೆಪಿಪಿಎಸ್‌ನ ಅಧ್ಯಕ್ಷರು ಹಾಗೂ ಐಎಂಎ ಕರ್ನಾಟಕ ಘಟಕದ ಮಾಜಿ ಅಧ್ಯಕ್ಷರಾದ ಡಾ. ಮಧುಸೂದನ ಕಾರಿಗನೂರು, ಖ್ಯಾತ ಮನೋವೈದ್ಯರಾದ ಡಾ. ಶಶಿಧರ್ ಎಸ್. ಬಿಳಗಿ, ಎಐಡಿಎಸ್ಓ ಕೇಂದ್ರ ಕೌನ್ಸಿಲ್ಲಿನ ಉಪಾಧ್ಯಕ್ಷರು ಹಾಗೂ ಪಶ್ಚಿಮ ಬಂಗಾಳದಲ್ಲಿ ಎನ್ಆರ್ಐ ಕೋಟಾ ವಿರುದ್ಧದ ಐತಿಹಾಸಿಕ ಹೋರಾಟದ ನಾಯಕರಾದ ಡಾ. ಮೃದುಲ್ ಸರ್ಕಾರ್ ಆಗಮಿಸಿ ಮಾತನಾಡಿದರು. ಎಲ್ಲಾ ಭಾಷಣಕಾರರು, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 15% ಎನ್ಆರ್ಐ ಕೋಟಾ ಜಾರಿಗೊಳಿಸುವ ಮೂಲಕ, ಪ್ರತಿ ವೈದ್ಯಕೀಯ ಸೀಟನ್ನು 25 ಲಕ್ಷ ರೂ. ಗಳಿಗೆ ನಿಗದಿ ಮಾಡುತ್ತಾ, ಸೇವೆಯಾದ ವೈದ್ಯಕೀಯ ಶಿಕ್ಷಣವನ್ನು ಸಂಪೂರ್ಣವಾಗಿ ವ್ಯಾಪಾರೀಕರಣಗೊಳಿಸುವ ಈ ನೀತಿಯನ್ನು ಕೂಡಲೇ ರಾಜ್ಯ ಸರ್ಕಾರ ಹಿಂಪಡೆಯಬೇಕೆಂದು ಆಗ್ರಹಿಸಿದರು.

ಡಾ. ಮಧುಸೂದನ್ ಕಾರಿಗನೂರು ಮಾತನಾಡುತ್ತಾ, ಹಿಂದೆ ವೈದ್ಯಕೀಯವು ಒಂದು ಸೇವಾ ಕ್ಷೇತ್ರವಾಗಿತ್ತು. ಆದರೆ ವೈದ್ಯಕೀಯ ಶಿಕ್ಷಣದ ಖಾಸಗೀಕರಣದ ಪರಿಣಾಮವಾಗಿ ಇಂದು ವೈದ್ಯರು ಮತ್ತು ರೋಗಿಗಳ ನಡುವಿನ ಸಂಬಂಧ ವ್ಯಾಪಾರದ ಸಂಬಂಧವಾಗಿ ಬದಲಾಗುತ್ತಿದೆ. ಇಂದು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 15% ಎನ್ಆರ್ಐ ಕೋಟಾ ತರುವುದರ ಮೂಲಕ ವೈದ್ಯಕೀಯ ಶಿಕ್ಷಣವನ್ನು ಸೂಪರ್ ಖಾಸಗೀಕರಣ ಮಾಡುವುದು ಸರ್ಕಾರದ ಹುನ್ನಾರವಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ನಡೆಸಲು ಹಣವಿಲ್ಲವೆಂಬ ವಾದ ನೀಡುತ್ತಿರುವ ಸರ್ಕಾರ, ಅಷ್ಟು ದಿವಾಳಿಯಾಗಿದೆಯೇ ಎಂದು ಪ್ರಶ್ನಿಸಿದರು.

ಡಾ. ಶಶಿಧರ್ ಎಸ್. ಬಿಳಗಿಯವರು, ಎನ್ಆರ್ಐ ಕೋಟಾದ ಮೂಲಕ ಸಮಾಜಕ್ಕೆ ನಿಜವಾಗಲೂ ಸೇವೆ ಸಲ್ಲಿಸಲು ಆಸಕ್ತರಾಗಿರುವ, ಬಡ ಪ್ರತಿಭಾವಂತ ವಿದ್ಯಾರ್ಥಿಗಳ ಸೀಟುಗಳನ್ನು ಸರ್ಕಾರ ಕಸಿದುಕೊಳ್ಳುತ್ತಿದೆ ಎಂಬ ಆತಂಕ ವ್ಯಕ್ತ ಪಡಿಸಿದರು.

ಎಐಡಿಎಸ್ಓದ ಅಖಿಲ ಭಾರತ ಉಪಾಧ್ಯಕ್ಷರಾದ ಡಾ.ಮೃದುಲ್ ಸರ್ಕಾರ್ ಮಾತನಾಡುತ್ತಾ, "ದೇಶದಲ್ಲಿ ಪ್ರಥಮ ಬಾರಿಗೆ ಪಶ್ಚಿಮ ಬಂಗಾಳದಲ್ಲಿ ಎನ್ಆರ್ಐ ಕೋಟಾವನ್ನು ಜಾರಿಗೊಳಿಸಿದಾಗ, ಎಐಡಿಎಎಸ್ಓ ನೇತೃತ್ವದಲ್ಲಿ ನಡೆದ ಹೋರಾಟದ ಪರಿಣಾಮವಾಗಿ ಅದನ್ನು ಹಿಂಪಡೆಯಲಾಯಿತು. ಅದೇ, ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ 2019ರಲ್ಲಿ ಈ ನೀತಿ ಜಾರಿ ಮಾಡಿದಾಗ, ವಿದ್ಯಾರ್ಥಿಗಳ ಹೋರಾಟದಿಂದಾಗಿ ಈ ನೀತಿಯನ್ನು ವಾಪಸ್ಸು ಮಾಡಲು ಸಾಧ್ಯವಾಯಿತು. ಈ ನೀತಿಗೆ ಹಣದ ಅಭಾವದ ಕಾರಣ ನೀಡುವ ಸರ್ಕಾರದ ಎಲ್ಲಾ ಸಚಿವರು ಮತ್ತು ಶಾಸಕರು ತಮ್ಮ ಸಂಬಳವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಒಂದೆಡೆ ಭ್ರಷ್ಟಾಚಾರ ಮತ್ತು ದುಂದುವೆಚ್ಚದಲ್ಲಿ ನಿರತರಾಗಿರುವ ಸರ್ಕಾರಗಳು ಇನ್ನೊಂದೆಡೆ ದೇಶದ ಕಾರ್ಪೊರೇಟ್ ಮನೆತಗಳ ತೆರಿಗೆ ಮನ್ನಾ ಮಾಡುತ್ತಿವೆ. ಅನೇಕ ಮಹನೀಯರ ತ್ಯಾಗ ಬಲಿದಾನದ ಮೇಲೆ ಬೆಳೆದಿದ್ದು, ಮಾನವನ ಏಳಿಗೆಗಾಗಿ ಮೀಸಲಿಡಬೇಕಾದ ವೈದ್ಯಕೀಯ ಕ್ಷೇತ್ರದಲ್ಲಿ ವ್ಯಾಪಾರೀಕರಣವನ್ನು ಎತ್ತಿ ಹಿಡಿಯುವ ಈ ನೀತಿಯ ವಿರುದ್ಧ ಹೋರಾಟವನ್ನು ಬಲಪಡಿಸಬೇಕು" ಎಂದು ಕರೆ ನೀಡಿದರು.

ಸಮಾವೇಶದ ಅಧ್ಯಕ್ಷತೆಯನ್ನು ಎಐಡಿಎಸ್ಓ ರಾಜ್ಯ ಖಜಾಂಚಿಗಳಾದ ಕಾ. ಸುಭಾಷ್ ಬಿ.ಜೆ. ವಹಿಸಿದ್ದರು. ಎಐಡಿಎಸ್ಓ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್, ಉಪಾಧ್ಯಕ್ಷರುಗಳಾದ ಕಾ. ಅಭಯಾ ದಿವಾಕರ್, ಕಾ. ಚಂದ್ರಕಲಾ, ರಾಜ್ಯ ಕಚೇರಿ ಕಾರ್ಯದರ್ಶಿಗಳಾದ ಕಾ.ಮಹಾಂತೇಶ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ.ವಿನಯ್ ಚಂದ್ರ ಉಪಸ್ಥಿತರಿದ್ದು, ರಾಜ್ಯದ ವಿವಿಧ ಜಿಲ್ಲೆಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ■




ಮೈಸೂರು: ರೈತರ ಮತ್ತು ಸಾಕು ಪ್ರಾಣಿಗಳ ಮೇಲೆ ದಾಳಿ ಮಾಡಿ ಜೀವಹಾನಿ ಉಂಟುಮಾಡಿದ ಹುಲಿಯನ್ನು ಹಿಡಿಯಬೇಕು, ಮಾನವ-ಕಾಡುಪ್ರಾಣಿಗಳ ನಡುವಿನ ಸಂಗರ್ಷವನ್ನು ತಡೆಯಬೇಕು ಎಂದು ಒತ್ತಾಯಿಸಿ ಎಐಕೆಕೆಎಮ್ಎಸ್ ನೇತೃತ್ವದಲ್ಲಿ ಸರಗೂರಿನಲ್ಲಿ ಪ್ರತಿಭಟನೆ. ಹೋರಾಟದ ನಂತರ ಅರಣ್ಯ ಇಲಾಖೆಯು ರೈಲುಕಂಬಿಯ ತಡೆಗೋಡೆ ನಿರ್ಮಾಣ ಕಾರ್ಯವನ್ನು ಆರಂಭಿಸಿದೆ.




ಮೆಕ್ಕೆಜೋಳ ಬೆಳೆಗೆ ಕ್ವಿಂಟಾಲಿಗೆ ರೂ. 3000 ಬೆಂಬಲ ಬೆಲೆ ನೀಡಿ, ಸರ್ಕಾರವೇ ಖರೀದಿಸುವಂತೆ ಒತ್ತಾಯಿಸಿ ಎಐಕೆಕೆಎಮ್ಎಸ್ ಬಳ್ಳಾರಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ನಡೆದ ಪ್ರತಿಭಟನೆ.





**13ನೇ ಕಲಬುರ್ಗಿ ಜಿಲ್ಲಾ ವಿದ್ಯಾರ್ಥಿ ಸಮ್ಮೇಳನ**

ಸಮ್ಮೇಳನದ ಉದ್ಘಾಟಕರಾಗಿ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರೊಫೆಸರ್ ಕಿರಣ್ ಗಾಜನೂರು, ಮುಖ್ಯ ಅತಿಥಿಗಳಾಗಿ ಕಾ.ಅಶ್ವಿನಿ ಕೆ.ಎಸ್ (ರಾಜ್ಯಾಧ್ಯಕ್ಷರು, ಎಐಡಿಎಸ್ಓ), ಕಾ.ಅಜಯ್‌ಕಾಮತ್( ರಾಜ್ಯ ಕಾರ್ಯದರ್ಶಿಗಳು), ಹಾಗೂ ಮುಖ್ಯ ಭಾಷಣಕಾರರಾಗಿ ಕಾ.ಅಭಯ ದಿವಾಕರ್ (ರಾಜ್ಯಉಪಾಧ್ಯಕ್ಷರು) ಮತ್ತು ಕಾ.ಸುಭಾಷ್ ಬಿ ಜೆ (ರಾಜ್ಯ ಖಜಾಂಚಿ) ಉಪಸ್ಥಿತರಿದ್ದರು.




ವಿಜಯಪುರ: ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿ ಕೈಬಿಟ್ಟು ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಒತ್ತಾಯಿಸಿ ನಡೆಯುತ್ತಿರುವ ಧರಣಿ 75 ದಿನ ಪೂರೈಸಿದ ನಂತರವೂ ರಾಜ್ಯ ಸರ್ಕಾರ ಒಪ್ಪದ ಹಿನ್ನೆಲೆಯಲ್ಲಿ 01.12.2025ರಂದು ಬೃಹತ್ ಜನಾಕ್ರೋಶ ರ‍್ಯಾಲಿ ಮತ್ತು ಬಹಿರಂಗ ಸಭೆ ಏರ್ಪಡಿಸಲಾಯಿತು. ಎಸ್‌ಯುಸಿಐ(ಸಿ) ಈ ಹೋರಾಟದ ಭಾಗವಾಗಿದ್ದು ಈ ಸಭೆಯನ್ನು ಉದ್ದೇಶಿಸಿ ಎಸ್‌ಯುಸಿಐ(ಸಿ) ಪಕ್ಷದ ರಾಜ್ಯ ಸೆಕ್ರೆಟೇರಿಯಟ್ ಸದಸ್ಯರಾದ ಡಾ. ಸುನೀತ್ ಕುಮಾರ್ ಮಾತನಾಡಿದರು.

...1ನೇ ಪುಟದಿಂದ

**ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಸಹಿ ಸಂಗ್ರಹ ಅಭಿಯಾನದಲ್ಲಿ ಸಹಿ ನೀಡುತ್ತಿರುವ ಗಣ್ಯರು ಮತ್ತು ಸಾರ್ವಜನಿಕರು**




ಹಿರಿಯ ಅಂಕಣಕಾರರು ಹಾಗೂ ಪತ್ರಕರ್ತರಾದ ಡಿ. ಉಮಾಪತಿ




ನಟ ಮತ್ತು ಸಾಮಾಜಿಕ ಚಿಂತಕರಾದ ಪ್ರಕಾಶ್ ರೈ



ಹಿರಿಯ ಸಾಹಿತಿಗಳಾದ ಡಾ. ಬರಗೂರು ರಾಮಚಂದ್ರಪ್ಪ



ಸಂಗೀತ ಸಂಯೋಜಕರಾದ ಡಾ. ಹಂಸಲೇಖ



ಸಹಿ ಮಾಡುತ್ತಿರುವ ಸಾರ್ವಜನಿಕರು

# ವಿಕೃತಿಯ ಪರಾಕಾಷ್ಠೆಯನ್ನು ತಲುಪಿರುವ ಮಹಿಳೆಯರ ಮೇಲಿನ ಘೋರ ಪಾತಕಗಳು:

## ಕಡಿವಾಣಕ್ಕೆ ಬೇಕು ಪ್ರಬಲ ಜನಾಂದೋಲನ!

ದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಅತ್ಯಂತ ವಿಕೃತ ರೂಪ ತಾಳುತ್ತಾ ತಮ್ಮ ಪರಾಕಾಷ್ಠೆಯನ್ನು ತಲುಪಿವೆ. ನಿರ್ಭಯಾ, ಅಸೀಫಾ, ಪ್ರಿಯಾಂಕಾ ರೆಡ್ಡಿ, ಅಭಯಾ, ಇವರೆಲ್ಲರ ಮೇಲೆ ನಡೆದ ಕ್ರೂರ ಅತ್ಯಾಚಾರ ಮತ್ತು ಕೊಲೆಗಳು, ಮಹಿಳಾ ಕುಸ್ತಿಪಟುಗಳ ಮೇಲಿನ ಅಗೌರವಗಳು, ಗುಜರಾತಿನ ಬಿಲ್ಕಿಸ್ ಬಾನು, ಉತ್ತರ ಪ್ರದೇಶದ ಉನ್ನಾವ್, ಹತ್ರಾಸ್ ಪ್ರಕರಣಗಳು, ಹಾಸನದ ಲೈಂಗಿಕ ಹಗರಣ, ಇವೆಲ್ಲವೂ ದೇಶದ ಜನತೆಯನ್ನು ಬೆಚ್ಚಿ ಬೀಳಿಸಿವೆ. ಕರ್ನಾಟಕದಲ್ಲೂ ಸೌಜನ್ಯ, ದಾನಮ್ಮ, ನೇಹಾ ಹಿರೇಮಠ್, ಅಂಜಲಿ, ಮಹಾಲಕ್ಷ್ಮಿ, ಯಾಮಿನಿಯಂತವರ ಘೋರ ಸಾವುಗಳು ನಾಗರಿಕರನ್ನು ಆಘಾತಕ್ಕೀಡು ಮಾಡಿವೆ. ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ಐದು ವರ್ಷದ ಕಂದಮ್ಮನ, ಮೈಸೂರು ದಸರಾದಲ್ಲಿ ಬಲೂನು ಮಾರಲು ಕುಟುಂಬದೊಂದಿಗೆ ಗುಳೆ ಬಂದ ಮಗುವಿನ ಮೇಲಿನ ಕ್ರೂರ ಅತ್ಯಾಚಾರ ಮತ್ತು ಕೊಲೆಗಳು ಹಾಗೂ ವಲಸೆ ಬಂದು ತೋರಣಗಲ್ಲಿನಲ್ಲಿ ನೆಲೆಸಿದ್ದ ಕುಟುಂಬದ ಆರು ವರ್ಷದ ಬಾಲಕಿಯ ಮೇಲಿನ ಅತ್ಯಾಚಾರ ಎಲ್ಲರ ಮನಸ್ಸನ್ನು ಕಲಕಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ(NCRB)ದ ವರದಿಯ ಪ್ರಕಾರ 2022ರಲ್ಲಿ 4.45 ಲಕ್ಷ ಮಹಿಳೆಯರ ಮೇಲಿನ ಅಪರಾಧಗಳು, 2019–2024ರ ಮೇ ವರೆಗೆ ಒಟ್ಟು 2.99 ಲಕ್ಷ ಮಕ್ಕಳ ಮೇಲಿನ ದೌರ್ಜನ್ಯ (POCSO) ಪ್ರಕರಣಗಳು ದಾಖಲಾಗಿವೆ. ಇನ್ನು ಕರ್ನಾಟಕದಲ್ಲಿ 2023–2025 ಜುಲೈ ವರೆಗಿನ ಅವಧಿಯಲ್ಲಿ 16,273 ಲೈಂಗಿಕ ದೌರ್ಜನ್ಯ, 5,456 ವರದಕ್ಷಿಣೆ ಕಿರುಕುಳ, 10,510 ಪೋಕ್ಸೋ, 417 ಬಾಲ್ಯ ವಿವಾಹಗಳ ಜೊತೆಗೆ ಇತರೆ ಸೇರಿದಂತೆ ಒಟ್ಟು 43,052 ಪ್ರಕರಣಗಳು ದಾಖಲಾಗಿವೆ. ಮಂಡ್ಯ, ಮೈಸೂರು ಮತ್ತು ಬೆಂಗಳೂರು ಭಾಗಗಳಲ್ಲಿ ಕೇವಲ ಎರಡು ವರ್ಷಗಳಲ್ಲಿ 900 ಹೆಣ್ಣು ಭ್ರೂಣಗಳನ್ನು ಶಿಶುವಾಗಿ ಅರಳುವ ಮುನ್ನವೇ ಚಿವುಟಿ ಹಾಕಲಾಯಿತು. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಪೋರ್ಟಲ್ ಪ್ರಕಾರ 80,813 ಕಿಶೋರಾವಸ್ತೆಯಲ್ಲಿನ ಗರ್ಭಿಣಿ ಪ್ರಕರಣಗಳು ದಾಖಲಾಗಿವೆ. ರಾಜ್ಯ ರಾಜಧಾನಿಯೇ ಈ ಕಿಶೋರ ಗರ್ಭಿಣಿಯರ ಪ್ರಕರಣಗಳಲ್ಲಿ ಮುಂಚೂಣಿಯಲ್ಲಿದೆ. ಸಮಾಜದ ಭವಿಷ್ಯವನ್ನು ರೂಪಿಸುವಂತಹ ಮಕ್ಕಳ ಭವಿಷ್ಯವೇ ನಾಶವಾಗುತ್ತಿರುವ ದುರಂತ ನಮ್ಮ ಮುಂದಿದೆ! 2019–2021ರ ವರೆಗೆ ಕೇವಲ ಎರಡು ವರ್ಷಗಳಲ್ಲಿ 40 ಸಾವಿರ ಹೆಣ್ಣು ಮಕ್ಕಳು ಕಾಣೆಯಾಗಿದ್ದಾರೆ. ಇನ್ನು ದಾಖಲಾಗದ ಪ್ರಕರಣಗಳು ಎಷ್ಟೋ! ಇಂತಹ ಪ್ರಕರಣಗಳು ಮಾಧ್ಯಮಗಳಲ್ಲಿ ವರದಿಯಾಗದ ದಿನವೇ ಇಲ್ಲ. ಸ್ತ್ರೀ ಭ್ರೂಣ ಹತ್ಯೆ, ಬಾಲ್ಯ ವಿವಾಹ, ಹದಿಹರೆಯದ ಗರ್ಭಧಾರಣೆ, ಲೈಂಗಿಕ ಕಿರುಕುಳ, ಅತ್ಯಾಚಾರ, ಗುಂಪು ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಮರ್ಯಾದೆಗೇಡು ಹತ್ಯೆಗಳು, ಸ್ಟಾಕಿಂಗ್, ಕೌಟುಂಬಿಕ ಹಿಂಸೆ, ಬೆತ್ತಲೆ ಮೆರವಣಿಗೆ, ಆಸಿಡ್ ದಾಳಿ, ಕಳ್ಳ ಸಾಗಾಣಿಕೆ, ಹೀಗೆ ಗರ್ಭದಿಂದ ಗೋರಿಯವರೆಗೆ 'ಹೆಣ್ಣು' ಎಂಬ ಏಕೈಕ 'ಅಪರಾಧ'ಕ್ಕಾಗಿ ಅವಳು ಹಲವಾರು ರೀತಿಯ ಪೈಶಾಚಿಕ ದಾಳಿಗಳಿಗೆ ತುತ್ತಾಗುತ್ತಿದ್ದಾಳೆ. ಜೊತೆಗೆ ಯುದ್ಧ, ದ್ವೇಷ ಅಥವಾ ಜನಾಂಗೀಯ ಕಲಹಗಳಿಗೆ ಕೆಳ ವರ್ಗದ ಮಹಿಳೆಯರು ಸೇರಿದಂತೆ ಎಲ್ಲಾ ವರ್ಗದ ಮಹಿಳೆಯರ ದೇಹ ಕದನದ ಮೈದಾನವಾಗಿಬಿಟ್ಟಿದೆ. ಶತ್ರುವಿನ ಮೇಲಿನ ಸೇಡು ತೀರಿಸಿಕೊಳ್ಳಲೂ ಸುಲಭವಾಗಿ ಸಿಗುವ ಬೇಟೆಯೆಂದರೆ ಹೆಣ್ಣಲ್ಲವೇ!!

ಮಹಿಳೆಯರ ಮೇಲಿನ ಅಪರಾಧಗಳು ನಡೆಯದ ಸ್ಥಳಗಳೇ ಇಲ್ಲ ಎಂದರೆ ತಪ್ಪಾಗಲಾರದು; ಮನೆಗಳಲ್ಲಿ, ಶಾಲಾ–ಕಾಲೇಜು, ಕಛೇರಿ–ಆಸ್ಪತ್ರೆ, ರೈಲು, ಬಸ್‌ಗಳು, ರಸ್ತೆ, ಹೀಗೆ ಯಾವ ಜಾಗವೂ ಸುರಕ್ಷಿತವಲ್ಲ; ಹಾಗೆಯೇ, ತಾತ, ತಂದೆ, ಸೋದರರು, ಪತಿ, ಇತರ ಸಂಬಂಧಿಗಳು, ಶಿಕ್ಷಕರು, ಸಹದ್ಯೋಗಿಗಳು, ಅಧಿಕಾರಿವರ್ಗ, ಕಾವಿಧಾರಿಗಳು, ಶಾಸಕರು, ಸಚಿವರು, ಪೊಲೀಸ್, ಮಿಲಿಟರಿ, ಹೀಗೆ ಯಾವ ಪುರುಷರೂ ಹೊರತಲ್ಲ.

### ಪುರುಷ ಪ್ರಧಾನ ಸಮಾಜದ ಬಲಿ ಮಹಿಳೆ

ಹೆಣ್ಣನ್ನು ಹಲವಾರು ಅಲಂಕಾರ ಲೇಪಿತ ಪದಪುಂಜಗಳಿಂದ ಪೂಜಿಸಲ್ಪಡುವ ಈ ದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳು ಅತ್ಯಂತ ಹೀನಾಯ ಸ್ಥಿತಿಗೆ ತಲುಪುತ್ತಿರುವುದೇಕೆ? ಪ್ರಾಣಿ ಪ್ರಪಂಚದಲ್ಲೂ ಜರುಗದ ಇಂತಹ ವಿಕೃತಿಗಳು ಮನುಷ್ಯ ಸಮಾಜದಲ್ಲಿ ಏಕೆ ಜರುಗುತ್ತಿವೆ? ಏಕೆಂದರೆ, ನವೋದಯದ ಪರಿಕಲ್ಪನೆಗಳಾದ ಸ್ವಾತಂತ್ರ್ಯ, ಸಮಾನತೆ, ಸೋದರತೆ ಮತ್ತು ಮಹಿಳಾ ವಿಮೋಚನೆಯ ಚಿಂತನೆಗಳು ನೆಲೆಗೊಳ್ಳಲು ಅವಶ್ಯವಾದ ಸಾಮಾಜಿಕ–ಸಾಂಸ್ಕೃತಿಕ ಆಂದೋಲನ ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆಯಲಿಲ್ಲ. ಹಾಗಾಗಿ, ಹೆಣ್ಣೆಂದರೆ ಪುರುಷನ ಆಸ್ತಿ, ಅವನ ಭೋಗದ ವಸ್ತು, ಎರಡನೇ ದರ್ಜೆ ಪ್ರಜೆ ಎಂಬ ಹಳೆಯ ಊಳಿಗಮಾನ್ಯ ಪುರುಷ ಪ್ರಧಾನ ವಿಚಾರಗಳೇ ಮುಂದುವರೆದವೇ ಹೊರತು, ಲಿಂಗ ಸಮಾನತೆಯ ಪ್ರಜಾತಾಂತ್ರಿಕ ಮೌಲ್ಯಗಳು ಇಲ್ಲಿ ಸ್ಥಾಪಿತಗೊಳ್ಳಲಿಲ್ಲ. ಸ್ವಾತಂತ್ರ್ಯವೆಂದರೆ, ವಾಸ್ತವದಲ್ಲಿ, ಬ್ರಿಟಿಷ್ ಸಾಮ್ರಾಜ್ಯಶಾಹಿ ಶೋಷಕ ವ್ಯವಸ್ಥೆಯ ಜಾಗದಲ್ಲಿ ಭಾರತದ ಶೋಷಕ ಬಂಡವಾಳಶಾಹಿ ವ್ಯವಸ್ಥೆ ಪ್ರತಿಷ್ಠಾಪನೆಗೊಂಡಿತಷ್ಟೇ. ಇಲ್ಲಿ, ಹೆಣ್ಣು ಸಹ ಒಂದು ಲಾಭದಾಯಕ ಸರಕು ಅಷ್ಟೇ. ಬಿಕ್ಕಟ್ಟು ಪೀಡಿತ ಬಂಡವಾಳಶಾಹಿ ವ್ಯವಸ್ಥೆಯ ಹಿತಾಸಕ್ತಿಯಲ್ಲಿ 1990ರ ದಶಕದಲ್ಲಿ ಜಾಗತೀಕರಣದ ನೀತಿಗಳು ಜಾರಿಗೆ ಬಂದ ನಂತರ ಈ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ, ಕೊಳೆತ ಪಾಶ್ಚಾತ್ಯ ಸಂಸ್ಕೃತಿಯ ದಾಳಿ ಯುವಜನರನ್ನು ದಿಕ್ಕು ತಪ್ಪಿಸಿದೆ. ಇತ್ತೀಚಿನ ಸೇರ್ಪಡೆಯೆಂದರೆ, ಸೈಬರ್ ಪಾತಕಗಳು.

### ಅಶ್ಲೀಲತೆ–ಹಿಂಸೆ ಪ್ರಸಾರ–ಯುವಜನತೆಯ ನೈತಿಕ ಅಧ:ಪತನಕ್ಕೆ ದಾರಿ!

ಇಂದಿನ ಸಮೂಹ ಮಾಧ್ಯಮಗಳಲ್ಲಿ, ಅದರಲ್ಲೂ ವಿದ್ಯುನ್ಮಾನ ಮಾಧ್ಯಮದಲ್ಲಿ, ಅಂದರೆ ಟಿವಿ, ಮೊಬೈಲ್ ಇಂಟರ್ನೆಟ್‌ಗಳಲ್ಲಿ ಅವ್ಯಾಹತವಾಗಿ ಹರಿದಾಡುತ್ತಿರುವ ಅಶ್ಲೀಲತೆ, ಕ್ರೌರ್ಯ, ನೀಲಿ ಚಿತ್ರ ಹಾಗೂ ಶಾರ್ಟ್ಸ್, ರೀಲ್ಸ್, ಇನ್ಸ್ಟಾಗ್ರಾಮ್‌ನಲ್ಲಿನ ಅಸಭ್ಯತೆ–ಅಶ್ಲೀಲತೆ, ಹದಿಹರೆಯದವರ ಮೇಲೆ ಕೆಟ್ಟ ಪ್ರಭಾವ ಬೀರಿವೆ. ಅವರಲ್ಲಿ ಮೂಲ ಪ್ರವೃತ್ತಿಯನ್ನು ಬಡಿದೆಬ್ಬಿಸಿ, ಅವರಲ್ಲಿ ಉಳಿದಿರುವ ಅಷ್ಟೋ, ಇಷ್ಟೋ ನೈತಿಕ ಮೌಲ್ಯಗಳನ್ನು ಹೊಸಕಿ ಹಾಕಿವೆ. ಜೊತೆಗೆ ಈ ಮಾಧ್ಯಮಗಳಲ್ಲಿ ಸತತವಾಗಿ ಬಿತ್ತರಗೊಳ್ಳುವ ಹಿಂಸೆ, ಪುರುಷರಲ್ಲಿ ಹಿಂಸಾನಂದ ಪ್ರವೃತ್ತಿಗೆ ಜನ್ಮ ಕೊಟ್ಟಿದೆ. ಅಷ್ಟಲ್ಲದೆ, ಎಲ್ಲೆಡೆ ಸುಲಭವಾಗಿ ದೊರಕುವ ಮದ್ಯ – ಮಾದಕ ವಸ್ತುಗಳು ಅವರಲ್ಲಿನ ವಿವೇಚನಾ ಶಕ್ತಿಗೆ ಕೊಡಲಿಯೇಟು ಹಾಕಿವೆ. ಇಂತಹ ಪರಿಸ್ಥಿತಿಯಲ್ಲಿ, ಪುರುಷರು ಹೆಣ್ಣುಮಕ್ಕಳನ್ನು ಲೈಂಗಿಕ ದೃಷ್ಟಿಯಿಂದ ಕಾಣುವುದು ಮಾತ್ರವಲ್ಲದೆ, ಹೆಚ್ಚೆಚ್ಚು ಆಕ್ರಮಣಕಾರಿಗಳಾಗುತ್ತಿದ್ದಾರೆ, ಹಿಂದೆಂದೂ ಕಂಡುಕೇಳರಿಯದಂತಹ ವಿಕೃತಿಯನ್ನು ಮೆರೆಯುತ್ತಿದ್ದಾರೆ. ವರದಿಯಾದಂತೆ, ಎಷ್ಟೋ ಅಪರಾಧಿಗಳು ತಾವು ಅತ್ಯಾಚಾರ ಎಸಗುವ ಮುನ್ನ ನೀಲಿ ಚಿತ್ರಗಳನ್ನು ವೀಕ್ಷಿಸಿದ್ದಾಗಿ ಒಪ್ಪಿಕೊಂಡಿದ್ದಾರೆ. ಇಂದು ಅಶ್ಲೀಲ ನೀಲಿ ಚಿತ್ರಗಳ ತಯಾರಿಕೆ ಮತ್ತು ವಿತರಿಸುವಿಕೆ ಒಂದು ಬೃಹತ್ ಲಾಭದ ಉದ್ಯಮವಾಗಿ ಮಾರ್ಪಾಡಾಗಿದ್ದು, ಈ ಶೋಷಕ, ಲಾಭಾಧಾರಿತ ಬಂಡವಾಳಶಾಹಿ ವ್ಯವಸ್ಥೆಯ ಸೇವಕ ಸರ್ಕಾರಗಳು ತಮ್ಮ ಮಾಲೀಕರ ಪರವಾಗಿ ನಿಂತಿರುವುದು



**ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ(NCRB)ದ ವರದಿಯ ಪ್ರಕಾರ 2022ರಲ್ಲಿ 4.45 ಲಕ್ಷ ಮಹಿಳೆಯರ ಮೇಲಿನ ಅಪರಾಧಗಳು, 2019–2024ರ ಮೇ ವರೆಗೆ ಒಟ್ಟು 2.99 ಲಕ್ಷ ಮಕ್ಕಳ ಮೇಲಿನ ದೌರ್ಜನ್ಯ (POCSO) ಪ್ರಕರಣಗಳು ದಾಖಲಾಗಿವೆ. ಇನ್ನು ಕರ್ನಾಟಕದಲ್ಲಿ 2023–2025 ಜುಲೈ ವರೆಗಿನ ಅವಧಿಯಲ್ಲಿ 16,273 ಲೈಂಗಿಕ ದೌರ್ಜನ್ಯ, 5,456 ವರದಕ್ಷಿಣೆ ಕಿರುಕುಳ, 10,510 ಪೋಕ್ಸೋ, 417 ಬಾಲ್ಯ ವಿವಾಹಗಳ ಜೊತೆಗೆ ಇತರೆ ಸೇರಿದಂತೆ ಒಟ್ಟು 43,052 ಪ್ರಕರಣಗಳು ದಾಖಲಾಗಿವೆ.**

ಅಚ್ಚರಿಯ ವಿಷಯವೇನಲ್ಲ.

ಜೊತೆಗೆ, ಇದಕ್ಕೆ ಇನ್ನೊಂದು ಆಯಾಮವೂ ಇದೆ. ಉನ್ನತ ನೈತಿಕ ಮಟ್ಟ ಇರುವ ಯುವಜನರೇ ನ್ಯಾಯಯುತ, ಶೋಷಕ ವ್ಯವಸ್ಥೆಯ ವಿರುದ್ಧ ಹೋರಾಡುವುದು, ಎಂಬ ಪಾಠವನ್ನು ನಮ್ಮ ಆಳ್ವಿಕರು ಇತಿಹಾಸದಿಂದ ಚೆನ್ನಾಗಿಯೇ ಕಲಿತಿದ್ದಾರೆ. ಹಾಗಾಗಿ, ತಮ್ಮ ವಿರುದ್ಧ ಸಿಡಿದೇಳದಂತೆ ಅವರ ನೈತಿಕ ಬೆನ್ನೆಲುಬಿಗೇ ಪ್ರಹಾರ ಮಡುವ ಹುನ್ನಾರ ಇಲ್ಲಿ ಅಡಗಿದೆ.

### ಕೊಳೆತ ಸಮಾಜದ ಮನಸ್ಥಿತಿ

ಅತ್ಯಾಚಾರಿಗಳ ಕ್ರೌರ್ಯಕ್ಕೆ ಬಲಿಯಾಗಿ ನರಳಾಡುತ್ತಿರುವ ಹೆಣ್ಣಿಗೆ ಸಾಂತ್ವನ, ಆತ್ಮವಿಶ್ವಾಸ, ಧೈರ್ಯ ನೀಡುವ ಬದಲಿಗೆ ಆ ಹೆಣ್ಣಿನ ಚಾರಿತ್ರ್ಯವನ್ನೇ ಪ್ರಶ್ನಿಸುವ ಸಮಾಜದ ಮನಸ್ಥಿತಿ ಅತ್ಯಂತ ವೇದನಾದಾಯಕವಾದದ್ದು. ಉನ್ನತ ಸ್ಥಾನದಲ್ಲಿರುವವರು ಕೂಡ ಯಾವುದೇ ಲಂಗು ಲಗಾಮಿಲ್ಲದೆ, ಸೂಕ್ಷ್ಮ ಸಂವೇದನೆಯಿಲ್ಲದೆ ಮಾತನಾಡುತ್ತಾರೆ. ಹೆಣ್ಣಿನ ಉಡುಪು, ಅವಳ ಓಡಾಟ, ಅವಳ ವರ್ತನೆ, ಇವುಗಳೇ ಅವಳ ಮೇಲಿನ ದೌರ್ಜನ್ಯಗಳಿಗೆ ಕಾರಣವೆಂದು ಆರೋಪಿಸುತ್ತಾರೆ. ಅಲ್ಲದೆ, ಅವಳ ಚಾರಿತ್ರ್ಯವಧೆಯೂ ನಡೆಯುತ್ತದೆ. ಇವೆಲ್ಲವನ್ನೂ ಮೀರಿ ಅವಳೇನಾದರೂ ಪೊಲೀಸರಿಗೆ ದೂರು ಕೊಟ್ಟರೂ, ನ್ಯಾಯ ಸಿಗುವ ಭರವಸೆ ಎಲ್ಲಿದೆ? ಕಟ್ಟುನಿಟ್ಟಿನ ಕಾನೂನುಗಳನ್ನು ಜಾರಿಗೆ ತಂದು ಇಂತಹ ಅಪರಾಧಗಳಿಗೆ ಕೊನೆ ಹಾಕುವಲ್ಲಿ ಇಂದಿನ ಪೊಲೀಸ್, ಆಡಳಿತಾಂಗ ಮತ್ತು ನ್ಯಾಯಾಂಗ ಸಂಪೂರ್ಣವಾಗಿ ಸೋತಿವೆ. ಅಲ್ಲದೆ, ಕೋರ್ಟಿನಲ್ಲಿ ನಡೆಯುವ ವಿಚಾರಣೆಯಲ್ಲೂ ಅವಳಿಗೆ ಎಷ್ಟು ಮಾನಸಿಕ ಹಿಂಸೆಯನ್ನು ಕೊಡಲಾಗುತ್ತದೆ ಎಂದರೆ, ಅದು 'ಎರಡನೇ ಅತ್ಯಾಚಾರ' ಕ್ಕೆ ಸಮನಾಗಿರುತ್ತದೆ. ಬದಲಿಗೆ, ಅಪರಾಧಿಗಳು ಕಿಂಚಿತ್ತೂ ಭಯವಿಲ್ಲದೆ ರಾಜಾರೋಷವಾಗಿ ಓಡಾಡಿಕೊಂಡು ಮೆರೆದಾಡುತ್ತಾರೆ. ಜೊತೆಗೆ, ಪಾತಕೀಕರಣಗೊಂಡ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ, ಕೀಳು ನೈತಿಕತೆಗೆ ಬಲಿಯಾದ ಯುವಕರನ್ನು ಗೂಂಡಾಗಳಾಗಿ ಬಳಸಿಕೊಳ್ಳುವುದೂ ಮಹಿಳೆಯರ ಮೇಲಿನ ಅತ್ಯಾಚಾರಗಳಿಗೆ ಎಡೆ ಮಾಡಿಕೊಡುತ್ತಿದೆ. ಇದರೊಟ್ಟಿಗೆ, ಭಾರತದ ರಾಜಕಾರಣದಲ್ಲಿ ಅಪರಾಧಿ ಹಿನ್ನೆಲೆಯುಳ್ಳ ಶಾಸಕರು ಮತ್ತು ಸಚಿವರ ಸಂಖ್ಯೆ ಹೆಚ್ಚುತ್ತಿದೆ. ಹೆಚ್ಚು ಕಡಿಮೆ ಎಲ್ಲಾ ರಾಜಕೀಯ ಪಕ್ಷಗಳು ಅಂತಹ ಅಭ್ಯರ್ಥಿಗಳಿಗೇ ಮಣೆ ಹಾಕುತ್ತಿವೆ.

### ಸುದೀರ್ಘ ಸಂಗ್ರಾಮಕ್ಕೆ ಇಂದಿನ ಘಳಿಗೆಯ ಕರೆ!

ಇಂತಹ ಪಾತಕೀ ವ್ಯವಸ್ಥೆಯ ವಿರುದ್ಧ ಅವಶ್ಯ, ಒಂದು ಸುದೀರ್ಘ, ಸಮರಶೀಲ ಸಂಗ್ರಾಮ. ಮೊದಲಿಗೆ, ಹಳೆಯ ಊಳಿಗಮಾನ್ಯ ಸಮಾಜದ ಪಳೆಯುಳಿಕೆಯಾಗಿ ಉಳಿದಿರುವ ಮೌಲ್ಯ, ಸಂಸ್ಕೃತಿಯ ಬದಲಿಗೆ ಪ್ರಜಾತಾಂತ್ರಿಕ, ಧರ್ಮನಿರಪೇಕ್ಷ, ವೈಜ್ಞಾನಿಕ ಮನೋಧರ್ಮವನ್ನು ಸಮಾಜದಲ್ಲಿ ನೆಲೆಗೊಳಿಸುವ ಅತ್ಯಂತ ಜರೂರಿನ ಕಾರ್ಯದಲ್ಲಿ ಸ್ತ್ರೀ–ಪುರುಷರಿಬ್ಬರೂ ಜೊತೆಗೂಡಿ ನಿರತರಾಗಬೇಕಿದೆ. ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ಎಲ್ಲಾ ರೀತಿಯ ಅಪರಾಧಗಳ ಪಾತಕಿಗಳಿಗೆ ಸೂಕ್ತ, ನಿದರ್ಶನಾತ್ಮಕ ಶಿಕ್ಷೆಯಾಗುವಂತೆ ಆಳುವವರ ಮೇಲೆ ಒತ್ತಡ ಹಾಕಬೇಕಿದೆ. ಎಲ್ಲಾ ರೀತಿಯ ಅಶ್ಲೀಲತೆಗೆ ಕೊನೆ ಹಾಕಿ ಉನ್ನತ ನೀತಿ–ಸಂಸ್ಕೃತಿ ಬೆಳೆಸಲು, ನವೋದಯದ ಹರಿಕಾರರಾದ ರಾಜಾ ರಾಮ್‌ಮೋಹನ್ ರಾಯ್, ಈಶ್ವರಚಂದ್ರ ವಿದ್ಯಾಸಾಗರ್, ಜ್ಯೋತಿಬಾ ಫುಲೆ, ಸಾವಿತ್ರಿ ಬಾಯಿ ಫುಲೆ, ಶರತ್‌ಚಂದ್ರ ಚಟರ್ಜಿ, ಪಂಡಿತ್ ತಾರಾನಾಥ್, ಕುದ್ಮುಲ್ ರಂಗಾರಾವ್ ಜೊತೆಗೆ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಧೀರ ಸೇನಾನಿಗಳಾದ ನೇತಾಜಿ, ಭಗತ್‌ಸಿಂಗ್, ಪ್ರೀತಿಲತಾ ವದ್ದೇದಾರ್, ವಿಜ್ಞಾನಿಗಳಾದ ಐನ್‌ಸ್ಟೀನ್, ಮೇಡಂ ಕ್ಯೂರಿ ಮುಂತಾದವರ ಉದಾತ್ತ ಆದರ್ಶಗಳ ಮೂಲಕ ಯುವಪೀಳಿಗೆಯನ್ನು ಪ್ರೇರೇಪಿಸಬೇಕಾಗಿದೆ.

ಇಂದು ಶೋಷಕ ಬಂಡವಾಳಶಾಹಿ ವ್ಯವಸ್ಥೆಯು ತನ್ನ ಆಳ್ವಿಕೆಯನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗುವ ಸಲುವಾಗಿ, ಒಂದೆಡೆ, ವಿದ್ಯಾರ್ಥಿ –ಯುವಜನರನ್ನು ಅನೈತಿಕತೆ – ಕುಸಂಸ್ಕೃತಿಗಳ ಪ್ರಪಾತಕ್ಕೆ ತಳ್ಳುವ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ. ಇನ್ನೊಂದೆಡೆ ಇತಿಹಾಸ ಕಂಡ ಆದರ್ಶ ಮಹನೀಯರ ಜೀವನ ಚಿತ್ರಗಳನ್ನು ಅವರಿಂದ ಮರೆಮಾಚಲು ಯತ್ನಿಸುತ್ತದೆ. ಕೆಲವೇ ವರ್ಷಗಳ ಹಿಂದೆಯಷ್ಟೇ ಅಂದಿನ ಕರ್ನಾಟಕ ರಾಜ್ಯ ಸರ್ಕಾರವು ಶಾಲಾ ಪಠ್ಯಗಳಿಂದ ಬಸವಣ್ಣ, ಭಗತ್‌ಸಿಂಗ್, ಅಂಬೇಡ್ಕರ್, ಕುವೆಂಪು ಮುಂತಾದ ಮಹಾನ್ ಚೇತನಗಳ ಪಠ್ಯಗಳನ್ನು ತೆಗೆದು ಹಾಕಲು ಯತ್ನಿಸಿದುದು, ನಂತರ, ನಮ್ಮ ವಿದ್ಯಾರ್ಥಿ ಸಂಘಟನೆ, ಎಐಡಿಎಸ್‌ಓ ನೇತೃತ್ವದ ವಿದ್ಯಾರ್ಥಿ ಹೋರಾಟಕ್ಕೆ ಮಣಿದು ಅವನ್ನು ಉಳಿಸಿಕೊಂಡದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಮಹಿಳೆಯರ ಮೇಲಿನ ದೌರ್ಜನ್ಯ–ಅತ್ಯಾಚಾರಗಳು ಈ ಕೊಳೆತ ಬಂಡವಾಳವಾದದ ಒಂದು ಚಿಹ್ನೆ ಮಾತ್ರ. ಹಾಗಾಗಿ, ಈ ಇಡೀ ವ್ಯವಸ್ಥೆಯನ್ನೇ ಬದಲಾಯಿಸಿ, ನೈಜ ಸಮಾನತೆ, ಸ್ವಾತಂತ್ರ್ಯ ಖಚಿತಪಡಿಸುವ ಸಮಾಜವಾದಿ ಸಮಾಜದ ಸ್ಥಾಪನೆಗೆ ಸ್ತ್ರೀ–ಪುರುಷರಿಬ್ಬರೂ ಒಂದಾಗಿ ಹೋರಾಡುವ ಕಾಲವೀಗ ಸನ್ನಿಹಿತವಾಗಿದೆ.

# ಯಾವುದು ನಿಜವಾದ ದೇಶಪ್ರೇಮ, ಯಾವುದು ನಿಜವಾದ ರಾಷ್ಟ್ರವಾದ

**ಭಾಗ–1**

ಯಾವುದೇ ದೇಶ ಅಭಿವೃದ್ಧಿಯಾಗಬೇಕೆಂದರೆ, ಪ್ರಗತಿಯ ಕಡೆಗೆ ಹೆಜ್ಜೆ ಹಾಕಬೇಕೆಂದರೆ, ಮುನ್ನಡೆಯನ್ನು ಸಾಧಿಸಬೇಕೆಂದರೆ, ಆ ದೇಶದ ಜನರಲ್ಲಿ ಉತ್ಕಟವಾದ ದೇಶಪ್ರೇಮ ಇರಲೇಬೇಕು. ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಎಳೆವಯಸ್ಸಿನ ಯುವಕರು ಸ್ವತಂತ್ರ ಭಾರತದ ಕನಸು ಕಾಣುತ್ತಾ, ಕನಸನ್ನು ಬೇರೆಯವರಲ್ಲಿ ಬಿತ್ತುತ್ತಾ, ನಗುನಗುತ್ತಾ ಗಲ್ಲಿಗೇರಿಂಭವನ್ನೇರಿದರು. ಇವರೆಲ್ಲರೂ ಸದಾ ದೇಶದ ಅಭಿವೃದ್ಧಿಗಾಗಿ ನಡೆಯುವ ಹೋರಾಟಕ್ಕೆ ಸ್ಫೂರ್ತಿಯ ಸೆಲೆ. ಆದರೆ ಸ್ವಾತಂತ್ರ್ಯಾನಂತರ ಅಧಿಕಾರಕ್ಕೆ ಬಂದ ಬಂಡವಾಳಶಾಹಿ ವರ್ಗ ಈ ಕನಸನ್ನು ನನಸು ಮಾಡುವುದಿರಲಿ, ದೇಶದ ಜನಸಾಮಾನ್ಯರನ್ನು ಅಧೋಗತಿಗೆ ತಳ್ಳುತ್ತಿದೆ. ದುಡಿಯುವ ಜನರನ್ನು ಶೋಷಣೆ ಮಾಡಿ ಅಗಾಧ ಸಂಪತ್ತನ್ನು ಪೇರಿಸಿಕೊಂಡಿದೆ. ಇಂತಹ ಸಂದರ್ಭದಲ್ಲಿ ನ್ಯಾಯಕ್ಕಾಗಿ, ಬದುಕಿಗಾಗಿ ಬಂಡವಾಳಶಾಹಿ ಆಳ್ವಿಕೆಯ ವಿರುದ್ಧ ಹೋರಾಡಬೇಕು. ಆದ್ದರಿಂದ ದೇಶಪ್ರೇಮ ಅತ್ಯಗತ್ಯವಾಗಿದೆ. ಆದರೆ ಇಂದು ವೈರಿಗಳಾಗಿ ವಿದೇಶಿಗರಾದ ಬ್ರಿಟಿಷರಿಲ್ಲ. ಭಾರತೀಯ–ರೇ ಅಧಿಕಾರಸ್ಥರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ದೇಶಪ್ರೇಮವೆಂದರೇನು? ರಾಷ್ಟ್ರವಾದದ ಪರಿಕಲ್ಪನೆ ಏನಾಗಬೇಕು? ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶಪ್ರೇಮ, ರಾಷ್ಟ್ರವಾದದ ಪರಿಕಲ್ಪನೆಗಳೇನು? ಯಾರು ಮತ್ತು ಯಾವ ಸಂಘಟನೆಗಳು ದೇಶಕ್ಕಾಗಿ ಶ್ರಮಿಸಿದವು? ಇದೆಲ್ಲದರ ಬಗ್ಗೆ ಕೂಲಂಕಷವಾದ ವಿಮರ್ಶೆ ಮಾಡಿ, ಅರ್ಥ ಮಾಡಿಕೊಳ್ಳಬೇಕು. ನಮ್ಮ ಸ್ವಾತಂತ್ರ್ಯ ಹೋರಾಟದ ಬಗ್ಗೆ ಸರಿಯಾದ ತಿಳುವಳಿಕೆಯೂ ಇಂದಿನ ಜನಾಂಗಕ್ಕೆ ಬೇಕು.

ಈ ವಿಷಯ ಈಗ ಚರ್ಚೆಗೆ ಬರಲು ಕಾರಣವೆಂದರೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಆಗಸ್ಟ್ 15 ರಂದು ದೇಶದ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ದೆಹಲಿಯ ಕೆಂಪು ಕೋಟೆಯ ವೇದಿಕೆಯಲ್ಲಿ ನಿಂತು ಭಾಷಣ ಮಾಡಿದರು; ಆಗ ಅವರು ಬೇರೆ ವಿಷಯಗಳ ಜೊತೆಗೆ ಇದನ್ನೂ ಹೇಳಿದರು: "ನಾನು ಬಹಳ ಹೆಮ್ಮೆಯಿಂದ... ಒಂದು ಸಂಸ್ಥೆಯ ಬಗ್ಗೆ ಹೇಳಲು ಬಯಸುತ್ತೇನೆ... ಅದು ರಾಷ್ಟ್ರೀಯ ಸ್ವಯಂಸೇವಕ ಸಂಘ... ರಾಷ್ಟ್ರ ನಿರ್ಮಾಣದ ನಿರ್ಧಾರದೊಂದಿಗೆ ಸ್ಥಾಪಿಸಲಾಯಿತು... ಸ್ವಯಂಸೇವಕರು ಒಂದು ಶತಮಾನಗಳ ಕಾಲ ಮಾತೃಭೂಮಿಯ ಕಲ್ಯಾಣಕ್ಕಾಗಿ ತಮ್ಮ ಜೀವಗಳನ್ನು ಮುಡುಪಾಗಿಟ್ಟಿದ್ದಾರೆ... ರಾಷ್ಟ್ರೀಯ ಸ್ವಯಂಸೇವಕ ಸಂಘವು ಒಂದು ಶತಮಾನ ಕಾಲದ ನಿಷ್ಠೆಯ ಇತಿಹಾಸ ಹೊಂದಿರುವ ವಿಶ್ವದ ಅತಿ ದೊಡ್ಡ ಎನ್‌ಜಿಓ... ರಾಷ್ಟ್ರಸೇವೆಯ ಒಂದು ಶತಮಾನ ಕಾಲದ ದೀರ್ಘ ಪಯಣ–ಕ್ಕೆ ಕಾಣಿಕೆ ನೀಡುವ ಎಲ್ಲಾ ಸ್ವಯಂಸೇವಕರಿಗೂ ಕೈ ಮುಗಿಯುತ್ತೇನೆ ಮತ್ತು ರಾಷ್ಟ್ರೀಯ ಸ್ವಯಂಸೇವಕರ ಈ ಅಮೋಘವಾದ ಮತ್ತು ಬದ್ಧತೆಯ ಪಯಣ–ಕ್ಕೆ ದೇಶವು ಹೆಮ್ಮೆ ಪಡುತ್ತದೆ, ಅದು ನಮಗೆ ಸ್ಫೂರ್ತಿ ತುಂಬುತ್ತಲೇ ಇರುತ್ತದೆ." ನಂತರ ಅವರು ನಮಗೆ ನೆನಪಿಸಿದರು, "ಈ ವರ್ಷವು, ...ಡಾಕ್ಟರ್ ಶಾಮ್ ಪ್ರಸಾದ್ ಮುಖರ್ಜಿ ಅವರ 125ನೇ ಜನ್ಮ ವಾರ್ಷಿಕ... ಅವರು ಭಾರತದ ಸಂವಿಧಾನಕ್ಕಾಗಿ ತನ್ನ ಜೀವವನ್ನೇ ಬಲಿದಾನ ಮಾಡಿದ, 370ನೇ ವಿಧಿಯ ಗೋಡೆಯನ್ನು ತೆಗೆದು ಹಾಕಿದ ಮತ್ತು ಒಂದು ದೇಶ ಒಂದು ಸಂವಿಧಾನದ ಮಂತ್ರವನ್ನು ವಾಸ್ತವ ರೂಪಕ್ಕಿಳಿಸಿದ ದೇಶದ ಮೊದಲ ಮಹಾನ್ ಚೇತನ." ಕೆಲವೇ ದಿನಗಳ ಹಿಂದೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) ಭಾರತದ ವಿಭಜನೆಯ ಬಗ್ಗೆ ವಿಶೇಷ ಪಠ್ಯ ಮಾದರಿಯನ್ನು ಬಿಡುಗಡೆಗೊಳಿಸಿದೆ. ಅದರಲ್ಲಿ ದೇಶವು ವಿಭಜನೆಯಾಗುವುದಕ್ಕೆ ಮೊಹಮ್ಮದ್ ಆಲಿ ಜಿನ್ನಾ, ಕಾಂಗ್ರೆಸ್ ಮತ್ತು ಲಾರ್ಡ್ ಮೌಂಟ್ ಬ್ಯಾಟನ್ ಕಾರಣ ಎಂದು ಆರೋಪಿಸಲಾಗಿದೆ. ಸ್ವಾತಂತ್ರ್ಯ ದಿನಾಚರಣೆಗೆ ಸಂಬಂಧಪಟ್ಟಂತೆ ಸಾಮಾಜಿಕ ಜಾಲತಾಣಗಳಲ್ಲಿ ಗಾಂಧಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಮತ್ತು ಭಗತ್ ಸಿಂಗ್ ಫೋಟೋಗಳ ಮೇಲೆ ಸಾವರ್ಕರ್ ಫೋಟೋ ಹಾಕಿರುವ ಪೋಸ್ಟರ್ ಹರಿದಾಡುತ್ತಿದೆ.

### ನಾಲ್ಕು ವಿಷಯಗಳು

ಇದಕ್ಕೆ ಸಂಬಂಧಪಟ್ಟಂತೆ ಒಟ್ಟಾರೆ ನಾಲ್ಕು ವಿಷಯಗಳಿವೆ. ಪ್ರಧಾನಮಂತ್ರಿ ಮೋದಿ ಎರಡು ವಿಷಯಗಳನ್ನು ಎತ್ತಿದ್ದಾರೆ. ಒಂದು, ರಾಷ್ಟ್ರ ನಿರ್ಮಾಣದಲ್ಲಿ ಆರ್‌ಎಸ್‌ಎಸ್ ವಹಿಸಿದ ಪಾತ್ರದ ಶ್ಲಾಘನೆ ಮತ್ತು ಇನ್ನೊಂದು, ದೇಶದ ಚೇತನವಾಗಿ ಶ್ಯಾಮ್ ಪ್ರಸಾದ್ ಮುಖರ್ಜಿಯ ಪಾತ್ರದ ಹೊಗಳಿಕೆ. ಮೂರನೆಯದು, ಎನ್‌ಸಿಇಆರ್‌ಟಿ ಎತ್ತಿರುವ ದೇಶದ ವಿಭಜನೆಯ ವಿಷಯ – ಇದು ಖಂಡಿತವಾಗಿಯೂ ಆರ್‌ಎಸ್‌ಎಸ್–ಬಿಜೆಪಿ ಸೂಚನೆಯ ಮೇರೆಗೆ. ಮತ್ತೆ ನಾಲ್ಕನೆಯದು, ಹಿಂದೂ ಮಹಾಸಭಾದ ಸ್ಥಾಪಕ ಮತ್ತು ಧರ್ಮಾಧಾರಿತ ಎರಡು ದೇಶಗಳ ತತ್ವವನ್ನು ಮೊಟ್ಟಮೊದಲ ಬಾರಿಗೆ ಪ್ರತಿಪಾದಿಸಿದ ವಿ.ಡಿ.ಸಾವರ್ಕರ್ ಚಿತ್ರವನ್ನು ನೇತಾಜಿ ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್ ಮತ್ತು ಗಾಂಧೀಜಿ ಫೋಟೋಗಳೊಂದಿಗೆ, ಅಷ್ಟೇ ಅಲ್ಲ, ಅವರಿಗಿಂತ ಮೇಲಿನ ಶ್ರೇಣಿಯಲ್ಲಿ ಹಾಕಿರುವುದು. ಆದರೆ ಇವುಗಳಲ್ಲಿ ಯಾವುದೂ ಅಧಿಕೃತ ಇತಿಹಾಸದಿಂದ ಖಚಿತವಾಗಿಲ್ಲ.

### ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾಗಳ ಅಭಿಪ್ರಾಯ

"ಅಸಂಖ್ಯಾತ ಜನ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವವನ್ನು ಬಲಿದಾನ ಮಾಡಿದ್ದಾರೆ, ಅವರು ತಮ್ಮ ಇಡೀ ಯೌವನವನ್ನು ಸ್ವಾತಂತ್ರ್ಯಕ್ಕಾಗಿ ಮುಡುಪಾಗಿಟ್ಟರು, ಜೀವನಪೂರ್ತಿ ಜೈಲಿನಲ್ಲಿ ಕಳೆದರು ಮತ್ತು ಗಲ್ಲಿಗೇರಿದರು. ಅದು ವೈಯಕ್ತಿಕ ಗಳಿಕೆಗಲ್ಲ, ಬದಲಿಗೆ ತಾಯಿ ಭಾರತಿಯ ಗೌರವಕ್ಕಾಗಿ, ಕೋಟ್ಯಂತರ ಜನರ ಸ್ವಾತಂತ್ರ್ಯಕ್ಕಾಗಿ, ಗುಲಾಮಗಿರಿಯ ಸಂಕೋಲೆಗಳನ್ನು ಮುರಿಯುವುದಕ್ಕಾಗಿ ಮತ್ತು ಅವರ ಹೃದಯದಲ್ಲಿ ಒಂದೇ ಒಂದು ಭಾವನೆ ಇತ್ತು – ಘನತೆ ಏಕೆ? ಸ್ವತಂತ್ರ ಭಾರತಕ್ಕಾಗಿ" ಎಂದೂ ಸಹ ಪ್ರಧಾನಿಗಳು ಹೇಳಿದರು. ಅಂದ–ರೆ, ಅವರು ಸ್ವಾತಂತ್ರ್ಯ ಸಂಗ್ರಾಮದ ಘನತೆಯನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಸ್ವಾತಂತ್ರ್ಯ ಸಂಗ್ರಾಮದ 75ನೇ ವಾರ್ಷಿಕದಲ್ಲಿ ಅಮೃತಕಾಲಕ್ಕೆ ಪ್ರವೇಶವೆಂದು ಘೋಷಿಸಿ, ಆಗಸ್ಟ್ 15, 1947 ರಂದು ಭಾರತ ಸ್ವಾತಂತ್ರ್ಯವನ್ನು ಪಡೆಯಿತೆಂದು ಒಪ್ಪಿಕೊಳ್ಳುತ್ತಾರೆ ಎಂದರ್ಥ. ಅವರು ರಾಷ್ಟ್ರಸೇವೆಗಾಗಿ ಒಂದು ಶತಮಾನದ ದೀರ್ಘ ಪಯಣಕ್ಕೆ ಕಾಣಿಕೆ ನೀಡಿದ ಎಲ್ಲಾ ಸ್ವಯಂಸೇವಕರನ್ನು ಉಲ್ಲೇಖಿಸಿದರು. ಸ್ವತಃ ಅವರೇ ಒಬ್ಬ ಸ್ವಯಂಸೇವಕ.

ಮೊಟ್ಟಮೊದಲಿಗೆ, ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾ – ಎರಡೂ ಸಂಘಟನೆಗಳು ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕರ ವಿರುದ್ಧ ದೇಶವು ಸ್ವಾತಂತ್ರ್ಯ ಚಳುವಳಿಯ ಕುಲುಮೆಯಲ್ಲಿ ಕುದಿಯುತ್ತಿದ್ದಾಗ ಸ್ಥಾಪಿತವಾದವು. ಅಲ್ಲಿ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ಭಾರತವನ್ನು ಒಂದು ದೇಶವನ್ನಾಗಿ ಕಟ್ಟುವ ಪ್ರಕ್ರಿಯೆಯೂ ನಡೆ–ಯುತ್ತಿತ್ತು. ಅಲ್ಲಿಯವರೆಗೂ ಭಾರತ ಇಂದಿನ ರೀತಿಯಲ್ಲಿ ಒಂದು ದೇಶವಾಗಿರಲಿಲ್ಲ. ವಿವಿಧ ಸಂಸ್ಥಾನಗಳಾಗಿ ರಾಜರ ಆಳ್ವಿಕೆಯಲ್ಲಿತ್ತು. ಬ್ರಿಟಿಷರು ಇಂದಿನ ಭಾರತದಡಿಯಿದ್ದ ಸಂಸ್ಥಾನಗಳನ್ನು ಒಂದು ಆಳ್ವಿಕೆಯಡಿ ತಂದರು. ಹಾಗಾಗಿ ವಿವಿಧ ಭಾಷೆಗಳನ್ನಾಡುವ, ವಿವಿಧ ರಾಷ್ಟ್ರೀಯತೆಯ ಜನರೆಲ್ಲರೂ ಒಂದಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯಿಂದ ಸ್ವಾತಂತ್ರ್ಯಕ್ಕಾಗಿ ಮತ್ತು ಭಾರತವನ್ನು ಒಂದು ದೇಶವಾಗಿ ಕಟ್ಟುವ ಹೋರಾಟಕ್ಕಿಳಿದರು. ಇತಿಹಾಸ ಮತ್ತು ರಾಜಕೀಯ ಅರ್ಥಶಾಸ್ತ್ರದ ವಿದ್ಯಾರ್ಥಿಗಳಾಗಿ ನಮಗೆ ತಿಳಿದಿರುವುದೇನೆಂದರೆ, ರಾಷ್ಟ್ರ ಎನ್ನುವುದು ಉದಯೋನ್ಮುಖ ಬಂಡವಾಳವಾದದ ನಿರ್ದಿಷ್ಟ ಕಾಲಘಟ್ಟಕ್ಕೆ ಸೇರಿದ ಚಾರಿತ್ರಿಕ ವಿಭಾಗ. ಅದು ಚಾರಿತ್ರಿಕವಾಗಿ ಜಮೀನ್ದಾರಿ ಪದ್ಧತಿಯನ್ನು ವಿರೋಧಿಸುತ್ತಾ ಬೂರ್ಜ್ವಾ ಕ್ರಾಂತಿಯ ಸಂದರ್ಭದಲ್ಲಿ ಹುಟ್ಟಿಕೊಂಡಿದ್ದು.

> ಸೋವಿಯತ್ ಒಕ್ಕೂಟದಲ್ಲಿ ಹೇಗೆ ದೇಶಪ್ರೇಮವನ್ನು ಮುಂದಿನ ಜನಾಂಗಕ್ಕೆ ತಲುಪಿಸಿದರು ಎನ್ನುವುದರ ಬಗ್ಗೆ ಕುವೆಂಪು ಮಾತುಗಳನ್ನು ನೆನಪಿಸಿಕೊಳ್ಳಬಹುದು: "ನಾನು ಸೋವಿಯತ್ ನಾಡಿನಿಂದ ಹೊರಡುವ ಅನೇಕ ಪತ್ರಿಕೆಗಳನ್ನು, ಮಾಸಪತ್ರಿಕೆಗಳನ್ನು ನೋಡುತ್ತಿರುತ್ತೇನೆ. ...ಈಗಿನ ಯುವಕರಿಗೆ 1917 ರಲ್ಲಿ ಅವರು ಮಹಾಕ್ರಾಂತಿಯನ್ನು ನಡೆಸಿ ತರುವಾಯ ನಾಲ್ಕೈದು ವರ್ಷ ಅಂತರ್ಯುದ್ಧದಲ್ಲಿ ಭಾಗಿಯಾಗಿ, ಹೋರಾಡಿ ಕಡೆಗೆ ಸೋವಿಯತ್ ದೇಶವನ್ನು ನಿರ್ಮಿಸಿದರು ಮತ್ತು ನಿರ್ಮಿಸುತ್ತಾ ಇದ್ದಾರೆ ಎಂಬುದನ್ನು ರಸವತ್ತಾಗಿ ತಿಳಿಸುತ್ತಾ ಇದ್ದಾರೆ. ಅವರೇನು ದೇವರು, ಧರ್ಮ ಮೊದಲಾದುವುವನ್ನೆಲ್ಲಾ ಬಿಟ್ಟಿದ್ದಾರೆ ಎಂದು ಹೇಳುತ್ತೀರಿ. ಆದರೆ ವಾಸ್ತವವಾಗಿ ಅವರು ದೇವರನ್ನು ಹೆಸರಿನಲ್ಲಿ ಮಾತ್ರವಲ್ಲ ಉಸಿರಿನಲ್ಲಿ ನಿಜವಾಗಿಯೂ ಆರಾಧಿಸುತ್ತಿದ್ದಾರೆ, ಅನುಸರಿಸುತ್ತಿದ್ದಾರೆ. ತಮ್ಮ ಯುವಕರಿಗೆ 1917ರ ತರುವಾಯ ಹುಟ್ಟಿದ ಎಷ್ಟೋ ಯುವಕರಿಗೆ ತಾವು ಏನಾಗಿದ್ದೆವು, ಎಷ್ಟು ಕಷ್ಟಪಟ್ಟು ಇದನ್ನು ಸಂಪಾದಿಸಿದೆವು ಎನ್ನುವುದನ್ನು ಮರೆಯಲಾಗದಂತೆ... ಅದರ ನೆನಪನ್ನು ಸದಾ ಹಸಿಯಾಗಿ ಇಟ್ಟಿರುವಂತೆ ಬರೆಯುತ್ತಾ ಇರುತ್ತಾರೆ." (ಆಗಸ್ಟ್ 15–17, 1973, ಲೇಖಕರ ಸಮ್ಮೇಳನದಲ್ಲಿ ಮಾಡಿದ ಉದ್ಘಾಟನಾ ಭಾಷಣ)

ರಾಷ್ಟ್ರ ಮೂಡಿಬರುವ ಪ್ರಕ್ರಿಯೆಯನ್ನು ವ್ಯಾಖ್ಯಾನಿಸುತ್ತಾ, ಕಾರ್ಮಿಕ ವರ್ಗದ ಮಹಾನ್ ನಾಯಕರಲ್ಲಿ ಒಬ್ಬರಾದ ಕಾಮ್ರೇಡ್ ಸ್ಟಾಲಿನ್ ಬರೆಯುತ್ತಾರೆ: "ರಾಷ್ಟ್ರವು ಮೂಲಭೂತವಾಗಿ ಒಂದು ಸಮುದಾಯ, ಒಂದು ನಿರ್ದಿಷ್ಟ ಜನ ಸಮುದಾಯ. ಈ ಸಮುದಾಯವು ಜನಾಂಗೀಯ ಅಥವಾ ಬುಡಕಟ್ಟಿನ ಸಮುದಾಯವಲ್ಲ. ಆಧುನಿಕ ಇಟಾಲಿಯನ್ ರಾಷ್ಟ್ರವು ರೋಮನ್ನರು, ಟ್ಯುಟಾನರು, ಎತ್ರುಸ್ಕನರು, ಗ್ರೀಕರು, ಅರಬರು, ಮುಂತಾದ ಜನರಿಂದ ರೂಪಿತವಾಗಿದೆ. ಗೇಲನ್ನರು, ರೋಮನ್ನರು, ಬ್ರಿಟನ್ನರು, ಟ್ಯುಟಾನರು ಹಾಗೂ ಇತರೇ ಜನರಿಂದ ಫ್ರೆಂಚ್ ರಾಷ್ಟ್ರ ರಚಿತವಾಗಿದೆ. ವಿಭಿನ್ನ ಜನಾಂಗಗಳು ಹಾಗೂ ಬುಡಕಟ್ಟಿನ ಜನರಿಂದ ರಾಷ್ಟ್ರಗಳಾಗಿ ರೂಪುಗೊಂಡ, ಬ್ರಿಟಿಷರು, ಜರ್ಮನರು ಹಾಗೂ ಇತರರಿಗೂ ಇದನ್ನೇ ಹೇಳಬೇಕು. ಆದ್ದರಿಂದ ಒಂದು ರಾಷ್ಟ್ರವು ಜನಾಂಗೀಯವೂ ಅಲ್ಲ ಅಥವಾ ಬುಡಕಟ್ಟೂ ಅಲ್ಲ, ಆದರೆ ಐತಿಹಾಸಿಕವಾಗಿ ರಚಿತವಾದ ಒಂದು ಜನಸಮುದಾಯ. ...ರಾಷ್ಟ್ರವು ಸಮಾನ ಭಾಷೆ, ಪ್ರಾಂತ್ಯ, ಆರ್ಥಿಕ ಜೀವನ ಮತ್ತು ಸಮಾನ ಸಂಸ್ಕೃತಿಯಲ್ಲಿ ಕಾಣಿಸಿಕೊಳ್ಳುವ ಮನೋಧರ್ಮಗಳ ಆಧಾರದ ಮೇಲೆ ರೂಪುಗೊಂಡ ಚಾರಿತ್ರಿಕವಾಗಿ ಸ್ಥಿರ ಜನ ಸಮುದಾಯದಿಂದ ರಚಿತವಾದದ್ದು." (ಮಾರ್ಕ್ಸ್‌ವಾದ ಮತ್ತು ರಾಷ್ಟ್ರದ ಪ್ರಶ್ನೆ)

ಮೂಲಭೂತವಾಗಿ ಆರ್‌ಎಸ್‌ಎಸ್–ಹಿಂದೂ ಮಹಾಸಭಾಗಳ ಸಿದ್ಧಾಂತಿಗಳು ಯಾವತ್ತೂ ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ಬೆಂಬಲಿಸಲಿಲ್ಲ. ಏಕೆಂದರೆ ಅವರಿಗೆ ಸ್ವಾತಂತ್ರ್ಯ ಮತ್ತು ರಾಷ್ಟ್ರ ನಿರ್ಮಾಣದ ಬಗ್ಗೆ ಮೇಲೆ ವಿವರಿಸಿದ ಪರಿಕಲ್ಪನೆಗೆ ಮತ್ತು ಸ್ವಾತಂತ್ರ್ಯ ಚಳುವಳಿಯನ್ನು ನಡೆಸುತ್ತಿದ್ದ ಭಗತ್ ಸಿಂಗ್, ನೇತಾಜಿ ನೇತೃತ್ವದ ಕ್ರಾಂತಿಕಾರಿ ಪಂಥ ಅಥವಾ ಗಾಂಧಿ ನೇತೃತ್ವದ ರಾಜಿಪರ ಪಂಥದ ಅಭಿಪ್ರಾಯಗಳಿಗೆ ಭಿನ್ನವಾದ ಅಭಿಪ್ರಾಯವಿತ್ತು. ಆದ್ದರಿಂದ ಆರ್‌ಎಸ್‌ಎಸ್ ಸಿದ್ಧಾಂತಿಯಾದ ಎಂ.ಎಸ್.ಗೋಲ್ವಾಲ್ಕರ್ ಮೇಲೆ ವಿವರಿಸಿದ ರಾಷ್ಟ್ರ ನಿರ್ಮಾಣದ ಚಾರಿತ್ರಿಕ ನೋಟವನ್ನು ವಿರೋಧಿಸಿದರು. ಅವರ ಪ್ರಕಾರ, "ನಮ್ಮ ದೇಶದ ಪರಿಕಲ್ಪನೆಗೆ ಅಡಿಪಾಯವಾದ ಭೌಗೋಳಿಕ ರಾಷ್ಟ್ರವಾದದ ಮತ್ತು ಸಮಾನ ಅಪಾಯದ ತತ್ವವು ನಮ್ಮ ನಿಜವಾದ ಹಿಂದೂ ರಾಷ್ಟ್ರೀಯತೆಯ ಸಕಾರಾತ್ಮಕ ಮತ್ತು ಸ್ಫೂರ್ತಿದಾಯಕ ಪರಿಕಲ್ಪನೆಯಿಂದ ನಮ್ಮನ್ನು ವಂಚಿತರನ್ನಾಗಿ ಮಾಡಿದೆ ಮತ್ತು ಹಲವಾರು ಸ್ವಾತಂತ್ರ್ಯ ಚಳುವಳಿಗಳನ್ನು ವಾಸ್ತವದಲ್ಲಿ ಬ್ರಿಟಿಷ್ ವಿರೋಧಿ ಚಳುವಳಿಗಳನ್ನಾಗಿ ಮಾಡಿದೆ. ಬ್ರಿಟಿಷ್ ವಿರೋಧವನ್ನು ದೇಶಪ್ರೇಮ ಮತ್ತು ರಾಷ್ಟ್ರವಾದದೊಂದಿಗೆ ಸರಿಸಮಾನವಾಗಿ ನೋಡಲಾಯಿತು. ಈ ಪ್ರತಿಗಾಮಿ ನೋಟವು ಇಡೀ ಸ್ವಾತಂತ್ರ್ಯ ಚಳುವಳಿಯ ಗತಿಯ ಮೇಲೆ ಅದರ ನಾಯಕರ ಮತ್ತು ಸಾಮಾನ್ಯ ಜನರ ಮೇಲೆ ವಿನಾಶಕಾರಿ ಪ್ರಭಾವಗಳನ್ನು ಬೀರಿತು. ... ಯಾರು ಹಿಂದೂ ಜನಾಂಗ ಮತ್ತು ರಾಷ್ಟ್ರವನ್ನು ತಮ್ಮ ಹೃದಯದಾಳದಿಂದ ವೈಭವೀಕರಿಸಲು ಬಯಸುತ್ತಾರೋ, ಆ ಗುರಿಯನ್ನು ಸಾಧಿಸಲು ಕ್ರಿಯೆಗೆ ಇಳಿಯುತ್ತಾರೋ ಮತ್ತು ಪ್ರಯತ್ನಪಡುತ್ತಾರೋ ಅವರು ಮಾತ್ರ ರಾಷ್ಟ್ರವಾದಿ ದೇಶಪ್ರೇಮಿಗಳು. ಉಳಿದವರೆಲ್ಲರೂ ದೇಶದ್ರೋಹಿಗಳು ಮತ್ತು ರಾಷ್ಟ್ರ ಹಿತಾಸಕ್ತಿಯ ವೈರಿಗಳು..." (ನಮ್ಮ ಅಥವಾ ನಮ್ಮ ರಾಷ್ಟ್ರವಾದದ ವ್ಯಾಖ್ಯಾನ)

ಇನ್ನು ದೇಶಪ್ರೇಮದ ಬಗ್ಗೆ ಅವರ ಪರಿಕಲ್ಪನೆಯೇನು? ಬ್ರಿಟಿಷರ ವಿರುದ್ಧ ಹೋರಾಡಿ ಜೈಲುವಾಸ ಅನುಭವಿಸಿದ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾತನಾಡುತ್ತಾ, ಆರ್‌ಎಸ್‌ಎಸ್ ಸ್ಥಾಪಕ ಸದಸ್ಯರಾದ ಕೆ.ಬಿ. ಹೆಗ್ಡೆವಾರ್ ಹೇಳಿದರು: "ದೇಶಪ್ರೇಮವೆಂದರೆ ಕೇವಲ ಜೈಲಿಗೆ ಹೋಗುವುದಲ್ಲ. ಅಂತಹ ಮೇಲುಮೇಲಿನ ದೇಶಪ್ರೇಮದಲ್ಲಿ ತೇಲಿ ಹೋಗುವುದು ಸರಿಯಲ್ಲ." (ಸಿ.ಪಿ. ಭಿಶಿಕರ್, ಸಂಘ್ ವೃಕ್ಷ ಕೆ ಬೀಜ್, ಡಾ. ಕೇಶವರಾವ್ ಹೆಗ್ಡೆವಾರ್, ಸುರುಚಿ, 1994, ಪುಟ–21) ಆದ್ದರಿಂದ ಆರ್‌ಎಸ್‌ಎಸ್ ಸ್ಥಾಪಕರ ಪ್ರಕಾರ ಬ್ರಿಟಿಷ್ ವಿರೋಧಿ ಸ್ವಾತಂತ್ರ್ಯ ಚಳುವಳಿಯು ರಾಷ್ಟ್ರವಾದ ಅಥವಾ ದೇಶಪ್ರೇಮದಿಂದ ಹುಟ್ಟಲಿಲ್ಲ; ಮಾತೃಭೂಮಿಯನ್ನು ಸ್ವತಂತ್ರಗೊಳಿಸಲು ಹೋರಾಡಿದ ನೇತಾಜಿ ಸುಭಾಷ್‌ಚಂದ್ರ ಬೋಸ್, ದೇಶಬಂಧು ಚಿತ್ತರಂಜನ್ ದಾಸ್, ಬಾಲ ಗಂಗಾಧರ್ ತಿಲಕ್, ಲಾಲಾ ಲಜಪತ್ ರಾಯ್, ಖುದಿರಾಮ್ ಬೋಸ್, ಭಗತ್ ಸಿಂಗ್, ಸೂರ್ಯ ಸೆನ್ ಮತ್ತು ಗಾಂಧೀಜಿಯೂ ಸಹ, ಹಾಗೆಯೇ ಮಾಮೂಲಿ ಜೀವನದ ಸುಖ, ಸುರಕ್ಷತೆಗಳನ್ನು ತೆ–ೂರೆದು ಗುಂಡುಗಳಿಗೆ ಎದೆಕೊಟ್ಟ, ಗಲ್ಲಿಗೇರಿಂಬವನ್ನೇರಿದ ಹದಿಹರೆಯದ ಯುವಕರೆಲ್ಲರೂ ದೇಶದ್ರೋಹಿಗಳು ಮತ್ತು ಮೇಲು ಮೇಲಿನ ಹುತಾತ್ಮರೇ?

### ಸ್ವಾತಂತ್ರ್ಯ ಚಳುವಳಿಯಲ್ಲಿ ಆರ್‌ಎಸ್‌ಎಸ್– ಹಿಂದೂ ಮಹಾಸಭಾದ ಪಾತ್ರ

ಆರ್‌ಎಸ್‌ಎಸ್ ಮತ್ತು ಹಿಂದೂ ಮಹಾಸಭಾ ಸ್ವಾತಂತ್ರ್ಯ ಚಳುವಳಿಯನ್ನು ವಿರೋಧಿಸಿದ್ದಷ್ಟೇ ಅಲ್ಲದೆ ಬ್ರಿಟಿಷರಿಗೆ ತಮ್ಮ ಬೆಂಬಲ ಮತ್ತು ನಿಷ್ಠೆಯನ್ನು ಘೋಷಿಸಿದರು. ಅವರು 1942ರ ಭಾರತ ಬಿಟ್ಟು ತೊಲಗಿ ಚಳುವಳಿಯನ್ನು ವಿರೋಧಿಸಿದರು. ಆರ್‌ಎಸ್‌ಎಸ್ 'ಅಸಹಕಾರ ಚಳುವಳಿ' ಮತ್ತು 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲೂ ಸಹ ಭಾಗವಹಿಸಲಿಲ್ಲ. ಹಾಗೆಯೇ ಹಿಂದೂ ಮಹಾಸಭಾ ಕೂಡ ಭಾಗವಹಿಸಲಿಲ್ಲ. ಗೋಲ್‌ವಾಲ್ಕರ್ ಅವರಿಗೆ ಭಾರತೀಯರು ಅಮಾನುಷ 5ನೇ ಪುಟಕ್ಕೆ....

# ಯುದ್ಧ: ಜನರ ಸಮಾಧಿ ಮೇಲೆ 'ಬೆಳೆಯುತ್ತಿರುವ ಉದ್ಯಮ'

ಪ್ಯಾಲೇಸ್ತೇನ್‌ನ ಗಾಜಾದ ಮೇಲೆ ಇಸ್ರೇಲ್ ನಡೆಸುತ್ತಿರುವ ಯುದ್ಧ ದಾಳಿ, ಸಾವಿರಾರು ಮಕ್ಕಳನ್ನು ಒಳಗೊಂಡ 60,000 ಮುಗ್ಧ ಜನರ ಕಗ್ಗೊಲೆ ಇಡೀ ಜಗತ್ತಿನಾದ್ಯಂತ ತಲ್ಲಣ ಮೂಡಿಸಿದೆ. ಲಕ್ಷೋಪಾದಿಯಲ್ಲಿ ಜನ ರಸ್ತೆಗೆ ಇಳಿದು ಈ ಕ್ರೌರ್ಯದ ವಿರುದ್ಧ ಧ್ವನಿ ಎತ್ತುತ್ತಿದ್ದಾರೆ. ಇದಲ್ಲದೆ ರಷ್ಯಾ ದೇಶ, ಉಕ್ರೇನ್ ಮೇಲೆ ನಡೆಸುತ್ತಿರುವ ದಾಳಿ ಕೂಡ ನಿರಂತರ ಸಾಗುತ್ತಲೇ ಇದೆ. ಈ ಹಿಂದೆ ಅಮೇರಿಕಾ ಕುಂಟು ನೆಪಗಳನ್ನು ನೀಡಿ, ಅಫ್ಘಾನಿಸ್ತಾನ್, ಇರಾಕ್, ಲೆಬನಾನ್, ಸಿರಿಯಾ ದೇಶಗಳ ಮೇಲೆ ನಡೆಸಿದ್ದ ಬಾಂಬ್ ದಾಳಿಯನ್ನು ಇನ್ನೂ ಜನ ಮರೆತಿಲ್ಲ. ಈ ಹಿಂದೆ ಎರಡು ವಿಶ್ವ ಯುದ್ಧಗಳೂ ಜರುಗಿ, ಕೋಟ್ಯಾಂತರ ಜನರ ಜೀವ–ಜೀವನ ಸರ್ವನಾಶವಾಯಿತು. ಆದರೆ ಈ ಯುದ್ಧಗಳಿಂದ ಜನರ ಬದುಕು ಒಂದೆಡೆ ಮೂರಾಬಟ್ಟೆಯಾದರೆ, ಶಸ್ತ್ರಾಸ್ತ್ರ ಕಂಪನಿಗಳಿಗಂತೂ ಭರ್ಜರಿ ಲಾಭವಾಗಿದೆ. ಜನರ ಸಮಾಧಿಯ ಮೇಲೆ ವ್ಯಾಪಾರ ನಡೆಸಿ, ಬಿಲಿಯಾಂತರ ಡಾಲರ್ ಲಾಭವನ್ನು ಈ ಕಂಪನಿಗಳು ಕಬಳಿಸಿವೆ. ಆರ್ಥಿಕ ಬಿಕ್ಕಟ್ಟು, ದುಬಾರಿ ಶಿಕ್ಷಣ–ಆರೋಗ್ಯ, ನಿರುದ್ಯೋಗ, ಹಣದುಬ್ಬರ, ಬೆಲೆ ಏರಿಕೆ, ಕಾರ್ಮಿಕ–ರೈತರ ತೀವ್ರತರ ಶೋಷಣೆ ಇಂತಹ ಅನೇಕ ಸಮಸ್ಯೆಗಳು ಜಗತ್ತಿನಾದ್ಯಂತ ದುಡಿಯುವ ಜನರನ್ನು ಕಿತ್ತು ತಿನ್ನುತ್ತಿವೆ. ಈ ಸಮಸ್ಯೆಗಳಿಗೆ ಯಾವುದೇ ಪರಿಹಾರ ನೀಡದ ಸಾಮ್ರಾಜ್ಯಶಾಹಿ ದೇಶಗಳು, ತಮ್ಮ ಬಂಡವಾಳಶಾಹಿ ಮಾರುಕಟ್ಟೆಯನ್ನು ಕಾಪಾಡುವುದಕ್ಕಾಗಿ ಯುದ್ಧಗಳಿಗೆ ಮೊರೆ ಹೋಗುತ್ತಿವೆ. ಬಂಡವಾಳಶಾಹಿ ಶೋಷಣೆಯಿಂದ ಜನರ ಕೊಂಡುಕೊಳ್ಳುವ ಶಕ್ತಿ ಕುಸಿಯುತ್ತಿರುವಾಗ, ದಿನಬಳಕೆ ವಸ್ತುಗಳಿಗೆ ಬೇಡಿಕೆ ಕಡಿಮೆಯಾಗುತ್ತಿರುವಾಗ, ಈ ಸಾಮ್ರಾಜ್ಯಶಾಹಿ ದೇಶಗಳು ಭೌಗೋಳಿಕ–ರಾಜಕೀಯ ಸಂಘರ್ಷಗಳನ್ನು ಸೃಷ್ಟಿಸಿ ಯುದ್ಧಗಳಿಗೆ ಮೊರೆಹೋಗುತ್ತಿವೆ. ಈ ಯುದ್ಧಗಳ ಹೆಸರಿನಲ್ಲಿ, ಬಿಲಿಯಾಂತರ ಡಾಲರ್ ಮೊತ್ತದ ಶಸ್ತ್ರಾಸ್ತ್ರಗಳನ್ನು ಖಾಸಗಿ ಕಂಪನಿಗಳಿಂದ ಸರ್ಕಾರಗಳೇ ಖರೀದಿಸುತ್ತವೆ. ಈ ಮೂಲಕ ಖಾಸಗಿ ಕಂಪನಿಗಳಿಗೆ ಒಂದು ಕೃತಕ ಮಾರುಕಟ್ಟೆ ಸೃಷ್ಟಿಸಲಾಗುತ್ತದೆ. ಮತ್ತಷ್ಟು ಉದಾಹರಣೆಗಳ ಮೂಲಕ ಈ ವಿಚಾರವನ್ನು ವಿಶ್ಲೇಷಣೆ ಮಾಡೋಣ.

### ಯುದ್ಧದಿಂದ ಬಹುರಾಷ್ಟ್ರೀಯ ಕಂಪನಿಗಳಿಗೆ ಭರ್ಜರಿ ಲಾಭ

ಸ್ಟಾಕ್‌ಹೋಮ್ ಇಂಟರ್‌ನ್ಯಾಷನಲ್ ಪೀಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ (SIPRI) ಪ್ರಕಾರ, ವಿಶ್ವದ ಅಗ್ರ 100 ಶಸ್ತ್ರಾಸ್ತ್ರ ಕಂಪನಿಗಳ ಒಟ್ಟು ಆದಾಯವು 2023 ರಲ್ಲಿ ಶೇ. 4.2 ರಷ್ಟು ಏರಿಕೆಯಾಗಿ, $ 632 ಬಿಲಿಯನ್ (ಸುಮಾರು ರೂ.62,45,600 ಕೋಟಿ) ಡಾಲರ್ಸ್ ನಷ್ಟು ಬೆರಗುಗೊಳಿಸುವ ಮೊತ್ತವನ್ನು ತಲುಪಿದೆ. ಇದು ಕೇವಲ ಒಂದು ನಿಷ್ಕ್ರಿಯ ಮಾರುಕಟ್ಟೆಯ ಏರಿಳಿತವಲ್ಲ; ಯುದ್ಧಕ್ಕೂ ಹಾಗೂ ಅತೀ ಹೆಚ್ಚು ಲಾಭ ಗಳಿಕೆಗೂ ನೇರ ಸಂಬಂಧವಿದೆ. ಬಂಡವಾಳಶಾಹಿ ನಿಯಮಗಳಿಂದಾಗಿಯೇ, ಆಹಾರ ಪದಾರ್ಥಗಳು ಸೇರಿದಂತೆ ದಿನಬಳಕೆ ವಸ್ತುಗಳ ಬೇಡಿಕೆಯು ದಿನೇ ದಿನೇ ಕುಸಿಯುತ್ತಿರುವಾಗ, ಅತಿ ಹೆಚ್ಚು ಲಾಭವನ್ನು ಗಳಿಸಲು ಹತಾಶರಾಗಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಯುದ್ಧವು ಅತ್ಯಂತ ಲಾಭದಾಯಕವಾಗಿದೆ.

ಯುದ್ಧದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ತೊಡಗಿರುವ ಸಾಮ್ರಾಜ್ಯಶಾಹಿ ದೇಶಗಳ ಆಳ್ವಿಕರಿಗೆ ಅತ್ಯಂತ ಗಮನಾರ್ಹ ಲಾಭಗಳು ದೊರೆತಿವೆ. ಉಕ್ರೇನ್ ವಿರುದ್ಧ ಯುದ್ಧ ಸಾಮಗ್ರಿಗಳನ್ನು ನೀಡುತ್ತಿರುವ ರಷ್ಯಾದ ಶಸ್ತ್ರಾಸ್ತ್ರ ಕಂಪನಿಗಳ ಆದಾಯವು 2023 ರಲ್ಲಿ ಬೆರಗುಗೊಳಿಸುವಷ್ಟು, ಶೇ. 40 ರಷ್ಟು ಹೆಚ್ಚಾಗಿದೆ. ಗಾಜಾ ಯುದ್ಧವನ್ನು



ಬಂಡವಾಳ ಮಾಡಿಕೊಂಡ ಇಸ್ರೇಲಿ ಶಸ್ತ್ರಾಸ್ತ್ರ ಉತ್ಪಾದಕರು ದಾಖಲೆಯ ಮಾರಾಟವನ್ನು ವರದಿ ಮಾಡಿದ್ದಾರೆ. ಉಕ್ರೇನ್‌ನಲ್ಲಿನ ಸಂಘರ್ಷವನ್ನು ರಫ್ತು ಅವಕಾಶಗಳಿಗಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಟರ್ಕಿಶ್ ಕಂಪನಿಗಳು ಶೇ. 24 ರಷ್ಟು ಆದಾಯ ಹೆಚ್ಚಳವನ್ನು ಅನುಭವಿಸಿವೆ.

ಈಗ ಅಮೆರಿಕನ್ ದೈತ್ಯರೇ ಮಾರುಕಟ್ಟೆಯ ಮೇಲೆ ಪ್ರಾಬಲ್ಯ ಹೊಂದಿದ್ದಾರೆ. ಲಾಕ್‌ಹೀಡ್ ಮಾರ್ಟಿನ್, ಆರ್‌ಟಿಎಕ್ಸ್ (ಹಿಂದಿನ ರೇಥಿಯಾನ್), ನಾರ್ತ್ರೋಪ್ ಗ್ರುಮ್ಮನ್, ಬೋಯಿಂಗ್ ಮತ್ತು ಜನರಲ್ ಡೈನಾಮಿಕ್ಸ್ ಜಾಗತಿಕವಾಗಿ ಮೊದಲ ಐದು ಸ್ಥಾನಗಳನ್ನು ಆಕ್ರಮಿಸಿಕೊಂಡಿವೆ. ಇದು 2024 ರಲ್ಲಿ ಪೆಂಟಗನ್‌ನ 997 ಬಿಲಿಯನ್ ಡಾಲರ್ಸ್ ಮಿಲಿಟರಿ ಬಜೆಟ್‌ನ ಅಗಾಧ ಪ್ರಮಾಣಕ್ಕೆ ಸಾಕ್ಷಿಯಾಗಿದೆ. ಇದು ಆ ವರ್ಷದ ಒಟ್ಟು ಜಾಗತಿಕ ಮಿಲಿಟರಿ ವೆಚ್ಚದ ಶೇ. 37 ರಷ್ಟು ಆಗಿತ್ತು ಮತ್ತು ಹಿಂದಿನ ವರ್ಷಕ್ಕಿಂತ ಶೇ. 5.7 ರಷ್ಟು ಹೆಚ್ಚಳವಾಗಿತ್ತು. ಅಮೇರಿಕಾದ ಬಂಡವಾಳಶಾಹಿ ಮಾರುಕಟ್ಟೆಯು ಶಸ್ತ್ರಾಸ್ತ್ರ ಉದ್ಯಮಗಳ ಮೇಲೆ ತೀವ್ರವಾಗಿ ಅವಲಂಬಿತವಾಗಿದೆ. ಅದನ್ನು ಉಳಿಸಿಕೊಳ್ಳಲು ಎಂತಹ ಯುದ್ಧಗಳಿಗೂ ಅಮೇರಿಕಾ ಸಜ್ಜಾಗುತ್ತದೆ. ವಾಸ್ತವವಾಗಿ, ಯುದ್ಧವನ್ನು ನಿಲ್ಲಿಸುವುದೆಂದರೆ, ಅದು ಅಮೇರಿಕಾ ಆರ್ಥಿಕತೆಯ ವಿರುದ್ಧ ಪರೋಕ್ಷ ಯುದ್ಧವೆಂದೇ ಅರ್ಥ.

### ಏಷ್ಯಾದಲ್ಲೂ ಈ ಶಸ್ತ್ರಾಸ್ತ್ರ ವ್ಯಾಪಾರ ಬಲು ಜೋರು

ಪ್ರತಿ–ಕ್ರಾಂತಿಯ ನಂತರ ಪ್ರಬಲ ಸಾಮ್ರಾಜ್ಯಶಾಹಿ ಶಕ್ತಿಯಾಗಿರುವ ಚೀನಾ ಈಗ ಶಸ್ತ್ರಾಸ್ತ್ರ ಉದ್ಯಮದಿಂದ ಗಳಿಸಿದ ಒಟ್ಟು ಆದಾಯದ ದೃಷ್ಟಿಯಿಂದ ಅಮೇರಿಕಾ ನಂತರದ ಎರಡನೇ ಸ್ಥಾನದಲ್ಲಿದೆ. ಇದು ಖಾಸಗಿ–ಸಾರ್ವಜನಿಕ ಸಹಭಾಗಿತ್ವದ ಸರ್ಕಾರಿ ನಿಯಂತ್ರಿತ ಮಾದರಿಯನ್ನು ನಿರ್ವಹಿಸುತ್ತದೆ. ಚೀನೀ ಶಸ್ತ್ರಾಸ್ತ್ರ ಉದ್ಯಮವು ನೊರಿಂಕೊ ಗ್ರೂಪ್, ಏವಿಯೇಷನ್ ಇಂಡಸ್ಟ್ರಿ ಕಾರ್ಪೊರೇಷನ್ ಆಫ್ ಚೀನಾ (AVIC), ಮತ್ತು ಚೀನಾ ಸ್ಟೇಟ್ ಶಿಪ್‌ಬಿಲ್ಡಿಂಗ್ ಕಾರ್ಪೊರೇಷನ್ (CSSC) ನಂತಹ ದೊಡ್ಡ ಸರ್ಕಾರಿ–ಮಾಲೀಕತ್ವದ ಉದ್ಯಮಗಳಿಂದ (SOEs) ಪ್ರಾಬಲ್ಯ ಹೊಂದಿದೆ. ಕೆಲವು ಸಣ್ಣ ಶಸ್ತ್ರಾಸ್ತ್ರ ಕಂಪನಿಗಳು ರಕ್ಷಣೆಗಾಗಿ ಘಟಕಗಳು ಮತ್ತು ವಸ್ತುಗಳ ತಯಾರಿಕೆಯಲ್ಲಿ ತೊಡಗಿವೆ.

ಮತ್ತೊಂದು ಸಾಮ್ರಾಜ್ಯಶಾಹಿ ಶಕ್ತಿಯಾದ ಭಾರತ ಕೂಡ 74 ಬಿಲಿಯನ್ ಡಾಲರ್ ಗಿಂತ ಹೆಚ್ಚಿನ ರಕ್ಷಣಾ ಬಜೆಟ್‌ನೊಂದಿಗೆ ಒಂದು ಶಕ್ತಿ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಪ್ರಮುಖ ಖಾಸಗಿ ಭಾರತೀಯ ಶಸ್ತ್ರಾಸ್ತ್ರ ಕಂಪನಿಗಳಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (TASL), ಲಾರ್ಸೆನ್ & ಟೂಬ್ರೊ (L&T), ಮಹೀಂದ್ರಾ ಡಿಫೆನ್ಸ್ ಸಿಸ್ಟಮ್ಸ್, ಭಾರತ್ ಫೋರ್ಜ್ (ಕಲ್ಯಾಣಿ ಗ್ರೂಪ್‌ನ ಭಾಗ) ಮತ್ತು ಪಾರಸ್ ಡಿಫೆನ್ಸ್ ಅಂಡ್ ಸ್ಪೇಸ್ ಟೆಕ್ನಾಲಜೀಸ್ ಸೇರಿವೆ. ಅವುಗಳಲ್ಲಿ ಕೆಲವು ಲಾಕ್‌ಹೀಡ್ ಮಾರ್ಟಿನ್, ಶೀಲ್ಡ್ ಎಐ, ಜನರಲ್ ಅಟಾಮಿಕ್ಸ್, ಬೋಯಿಂಗ್, ಸ್ಕೈಡಿಯೊ ಮತ್ತು ಎಎಂ ಜನರಲ್‌ನಂತಹ ಅಮೇರಿಕಾ ರಕ್ಷಣಾ ದೈತ್ಯರೊಂದಿಗೆ ಜಂಟಿ ಉದ್ಯಮಗಳನ್ನು ಸಹ ಹೊಂದಿವೆ.

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (HAL) ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (BEL) ನಂತಹ ಸರ್ಕಾರಿ ಮಾಲೀಕತ್ವದ ಉದ್ಯಮಗಳು, ಏರುತ್ತಿರುವ ಶಸ್ತ್ರಾಸ್ತ್ರ ರಫ್ತುಗಳು ಮತ್ತು ಶಸ್ತ್ರಾಸ್ತ್ರಗಳ ದೇಶೀಯ ಉತ್ಪಾದನೆಗೆ ಸರ್ಕಾರ ನೀಡುತ್ತಿರುವ ಒತ್ತಿನಿಂದ ಉತ್ತೇಜಿತಗೊಂಡು, ಬೃಹತ್ ಬೆಳವಣಿಗೆಗೆ ಸಿದ್ಧವಾಗಿವೆ.

### ಶಿಕ್ಷಣಕ್ಕೆ ಹಣವಿಲ್ಲ, ಯುದ್ಧ ವ್ಯಾಪಾರಿಗಳಿಗೆ ಹಣದ ಹೊಳೆ!

ಜಾಗತಿಕ ಮಿಲಿಟರಿ ವೆಚ್ಚದ ಕೇವಲ ಶೇ.3 ರಷ್ಟು ಮಾತ್ರ ಪರಿಗಣಿಸಿದರೂ ಜಗತ್ತಿನಾದ್ಯಂತ ಎಲ್ಲಾ ಮಕ್ಕಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಪಡೆಯಬಹುದು ಎಂದು ವಿಶ್ವಸಂಸ್ಥೆ ಅಂದಾಜು ಮಾಡಿದೆ. ಒಂದು ಎಫ್–35 ಸ್ಟೆಲ್ತ್ ಫೈಟರ್ ಜೆಟ್‌ನ ವೆಚ್ಚ, ಸರಿ ಸುಮಾರು 80 ಮಿಲಿಯನ್ ಡಾಲರ್ಸ್, ಇದು 2,00,000 ಮಕ್ಕಳ ವಾರ್ಷಿಕ ಶಿಕ್ಷಣ ಬಜೆಟ್‌ಗೆ ಸಮಾನವಾಗಿದೆ. ಕೇಂದ್ರ ಸರ್ಕಾರವು ಫ್ರಾನ್ಸ್ ಮೂಲದ ರಾಫೆಲ್ ಕಂಪನಿಯೊಂದಿಗೆ 26 ವಿಮಾನಗಳನ್ನು ಖರೀದಿಸಲು ರೂ.63,000 ಕೋಟಿ ಮೌಲ್ಯದ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿತು. ಆದರೆ ಹೆಚ್ಚಿನ ಸಂಖ್ಯೆಯ ಬಡವರಿಗೆ, ಒಂದು ವರ್ಷದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ರೂ.86,000 ಕೋಟಿ ಒದಗಿಸಲು, ಕೇಂದ್ರ ಬಿಜೆಪಿ ಸರ್ಕಾರ ಮೀನಾಮೇಷ ಎಣಿಸುತ್ತದೆ.

### ಯುದ್ಧಗಳಿಲ್ಲದೆ ಬಲಾಢ್ಯ ದೇಶಗಳ ಆರ್ಥಿಕತೆ ಸಾಯುತ್ತದೆ. ಏಕೆ ಇಂತಹ ಪರಿಸ್ಥಿತಿ ?

ಆದರೆ ಈ ಶಸ್ತ್ರಾಸ್ತ್ರ ತಯಾರಿಕೆಯ ಹುಚ್ಚುತನ ಏಕೆ? ಸಾಮ್ರಾಜ್ಯಶಾಹಿ ಮಹಾಶಕ್ತಿಗಳು ಯುದ್ಧಗಳನ್ನು ಸಂಘಟಿಸದೆ ಅಥವಾ ಉತ್ತೇಜಿಸದೆ ಏಕೆ ಬದುಕಲು ಸಾಧ್ಯವಿಲ್ಲ? ಯುದ್ಧದ ಉದ್ವಿಗ್ನತೆಗಳು, ನಾಗರಿಕರ ಹತ್ಯೆ, ಹಸಿವು, ಉಪವಾಸ, ಕ್ಷಾಮಗಳು, ನಿರುದ್ಯೋಗ, ಕನಿಷ್ಠ ಶಿಕ್ಷಣ ಮತ್ತು ಆರೋಗ್ಯದ ಕೊರತೆಯಿಂದ ಜನರು ನರಳುತ್ತಿರುವಾಗ, ಶಸ್ತ್ರಾಸ್ತ್ರ ಉದ್ಯಮಗಳಿಂದ ಅತಿ ಹೆಚ್ಚು ಲಾಭಗಳಿಸುವುದಕ್ಕೆ ಅವರು ಏಕೆ ಒಲವು ತೋರುತ್ತಾರೆ?

ಎಸ್‌ಯುಸಿಐ(ಸಿ)ಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಮತ್ತು ಈ ಯುಗದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಹೇಳಿದಂತೆ, ಬಂಡವಾಳಶಾಹಿ ಬಿಕ್ಕಟ್ಟು ಹೆಚ್ಚಾದಂತೆ, ಎಲ್ಲಾ ಮುಂದುವರಿದ ಅಥವಾ ಹಿಂದುಳಿದ ಬಂಡವಾಳಶಾಹಿ ರಾಷ್ಟ್ರಗಳು, ಆರ್ಥಿಕತೆಯನ್ನು ಮಿಲಿಟರೀಕರಣಗೊಳಿಸುವ ಮೂಲಕ ಬದುಕಲು ಪ್ರಯತ್ನಿಸುತ್ತವೆ. ಕಾ.ಘೋಷ್ ಅವರ ಭಾಷೆಯಲ್ಲಿ ಹೇಳುವುದಾದರೆ "...ಸಾಮ್ರಾಜ್ಯಶಾಹಿಗಳು... ವ್ಯಾಪಕವಾಗಿ ಶಸ್ತ್ರಾಸ್ತ್ರಗಳನ್ನು ಸಜ್ಜುಗೊಳಿಸುವುದು ಮತ್ತು ಕೈಗಾರಿಕೆಗಳ ಮಿಲಿಟರೀಕರಣಕ್ಕೆ ಮೊರೆಹೋಗುವ ಮೂಲಕ ಸಂಕಷ್ಟಗಳನ್ನು ಸರಿದೂಗಿಸಲು ಪ್ರಯತ್ನಿಸುತ್ತಿದ್ದಾರೆ..." "ಬಿಕ್ಕಟ್ಟಿನಿಂದಾಗಿ ಮಾರುಕಟ್ಟೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗದ ಕಾರಣ, ಅದನ್ನು ಕೃತಕವಾಗಿ ಉತ್ತೇಜಿಸಲು ಪ್ರಯತ್ನಗಳು ನಡೆಯುತ್ತಿವೆ. ಇದರರ್ಥ, ಜನರ ಹಣದಿಂದ ಕೂಡಿದ ಸರ್ಕಾರಿ ಬಜೆಟ್‌ನಿಂದ ಹಣವನ್ನು ತೆಗೆದುಕೊಂಡು ಸರ್ಕಾರವೇ ಖರೀದಿದಾರನಾಗಿ ಮಾರುಕಟ್ಟೆಯಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಸರ್ಕಾರ ಏನು ಖರೀದಿಸುತ್ತದೆ? ಆ ವಸ್ತುಗಳು ಯಾವ ಉಪಯೋಗಕ್ಕೆ ಬರಬಹುದು? ಆದ್ದರಿಂದ, ಅವರು ಮಿಲಿಟರಿ ಶಕ್ತಿಯನ್ನು ಹೆಚ್ಚಿಸುತ್ತಾರೆ ಮತ್ತು ಅಲ್ಲಿ–ಇಲ್ಲಿ ಯುದ್ಧವನ್ನು ಪ್ರಚೋದಿಸುತ್ತಾರೆ. ಅವರು ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುತ್ತಲೇ ಇರುತ್ತಾರೆ, ಮಿಲಿಟರಿ ಶಕ್ತಿಯನ್ನು ಹೆಚ್ಚಿಸುತ್ತಾರೆ ಮತ್ತು ರಕ್ಷಣಾ ಕೈಗಾರಿಕೆಗಳನ್ನು ನಿರ್ಮಿಸುತ್ತಾರೆ. ಇದುವೇ ಆರ್ಥಿಕತೆಯ ಮಿಲಿಟರೀಕರಣವಾಗಿದ್ದು, ಉತ್ಪಾದನಾ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮಿಲಿಟರಿ ಉತ್ಪಾದನೆಯೊಂದಿಗೆ ಸರಿ ಹೊಂದಿಸುವುದನ್ನು ಕೈಗಾರಿಕೆಗಳ ಮಿಲಿಟರೀಕರಣ ಎನ್ನುತ್ತೇವೆ. ಈ ಮಿಲಿಟರೀಕರಣವು ಬಂಡವಾಳಶಾಹಿ ವಿರೋಧಾಭಾಸಗಳು ಮತ್ತು ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದೆ. ಮತ್ತು ಬಿಕ್ಕಟ್ಟು ಎಷ್ಟು ತೀವ್ರವಾಗುತ್ತದೆಯೋ, ಆರ್ಥಿಕತೆಯು ಅಷ್ಟೇ ಹೆಚ್ಚು ಮಿಲಿಟರೀಕರಣಗೊಳ್ಳುತ್ತದೆ. ಹೀಗಾಗಿ ಈ ವಿಷ ವರ್ತುಲ ಸಾಗುತ್ತಲೇ ಇದ್ದು, ಅನಿಯಂತ್ರಿತ ಶಸ್ತ್ರಾಸ್ತ್ರ ಸ್ಪರ್ಧೆಗೆ ಎಡೆ ಮಾಡಿಕೊಟ್ಟಿದೆ."

ಆದ್ದರಿಂದ ಹೆಚ್ಚಿದ ಆರ್ಥಿಕತೆಯ ಮಿಲಿಟರೀಕರಣ ಮತ್ತು ನಂತರ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ವಿಲೇವಾರಿ ಮಾಡುವ ಅವಶ್ಯಕತೆಯು, ಸಾಮ್ರಾಜ್ಯಶಾಹಿಗಳಿಗೆ ಯುದ್ಧವನ್ನು ಹುಟ್ಟುಹಾಕಲು ಪ್ರಚೋದಿಸುತ್ತದೆ. ಹೆಚ್ಚು ಯುದ್ಧಗಳಾದಷ್ಟೂ, ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಹೆಚ್ಚುತ್ತದೆ ಮತ್ತು ಅದರೊಂದಿಗೆ ರಕ್ಷಣಾ ಕೈಗಾರಿಕೆಗಳಿಗೆ ಉತ್ತೇಜನ ದೊರೆಯುತ್ತದೆ. ಇದು ಮೂಲ ಕಾರಣವಾಗಿದೆ.

## ಯಾವುದು ನಿಜವಾದ ದೇಶಪ್ರೇಮ

...4ನೇ ಪುಟದಿಂದ

ಬ್ರಿಟಿಷ್ ಆಳ್ವಿಕರ ಕರಾಳ ಮತ್ತು ದಮನಕಾರಿ ಕಾನೂನುಗಳನ್ನು ಗೌರವಿಸುವುದು ಬೇಕಾಗಿತ್ತು. ಬ್ರಿಟಿಷ್ ಗುಪ್ತದಳದ ಒಂದು ವರದಿಯ ಪ್ರಕಾರ, "ಸಂಘವು ಬಹಳ ಎಚ್ಚರಿಕೆಯಿಂದ ಕಾನೂನಿನ ಮಿತಿಯೊಳಗಿತ್ತು ಮತ್ತು ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಆಗಸ್ಟ್, 1942 ರಲ್ಲಿ ಆರಂಭವಾದ ಚಳುವಳಿಗಳಲ್ಲಿ ಭಾಗವಹಿಸುವುದರಿಂದ ದೂರವಿತ್ತು." (ಆರ್ಡರ್ಸನ್, ವಾಲ್ಟರ್ ಕೆ ಮತ್ತು ದಾಂಬ್ಲೆ, ಶ್ರೀಧರ್ ಡಿ, "ಕೇಸರಿಯಲ್ಲಿ ಭ್ರಾತೃತ್ವ: ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಹಿಂದೂ ಪುನರುತ್ಥಾನ" ಪುಸ್ತಕದಲ್ಲಿ ಉಲ್ಲೇಖ, ಬೆಸ್ಟ್ ವ್ಯೂ ಪ್ರೆಸ್, 1987, ಪುಟ–44) ಬಹಳ ವಿಚಿತ್ರವಾಗಿ ಗೋಲ್‌ವಾಲ್ಕರ್ ಒಪ್ಪಿಕೊಂಡ ಕ್ವಿಟ್ ಇಂಡಿಯಾ ಚಳುವಳಿಯ ಕುರಿತಾದ ಈ ಬಗೆಯ ನಕಾರಾತ್ಮಕ ಧೋರಣೆಯು ಆರ್‌ಎಸ್‌ಎಸ್ ಕಾರ್ಯಕರ್ತರಿಗೆ ರುಚಿಸಲಿಲ್ಲ.(ಎಂ.ಎಸ್. ಗೋಲ್‌ವಾಲ್ಕರ್, 'ಶ್ರೀ ಗುರೂಜಿ ಸಮಗ್ರ ದರ್ಶನ', ಹಿಂದಿಯಲ್ಲಿ ಗೋಲ್‌ವಾಲ್ಕರ್ ಸಮಗ್ರ ಕೃತಿಗಳು, ಸಂಪುಟ 4, ಭಾರತೀಯ ವಿಚಾರ್ ಸದನ, ನಾಗಪುರ, ಪುಟ–40)

### ಬ್ರಿಟಿಷ್ ಆಳ್ವಿಕರೊಂದಿಗೆ ಕೈಜೋಡಿಸಿದರು

ಇನ್ನೊಂದು ಕಡೆ 1942ರಲ್ಲಿ ಕಾನ್ಪುರದಲ್ಲಿ ಹಿಂದೂ ಮಹಾಸಭಾದ 24ನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ವಿ.ಡಿ.ಸಾವರ್ಕರ್, ಬ್ರಿಟಿಷ್ ಆಳ್ವಿಕೆಯೊಂದಿಗೆ ಹಿಂದೂ ಮಹಾಸಭಾ ಹೇಗೆ ಸಹಕರಿಸಬೇಕೆನ್ನುವ ರಣತಂತ್ರದ ರೂಪುರೇಷೆಯನ್ನು ಕೆಳಗಿನ ಮಾತುಗಳಲ್ಲಿ ಹೇಳಿದರು: "ಎಲ್ಲಾ ಕಾರ್ಯವಾಸಿ ರಾಜಕೀಯದ ಮುಖ್ಯ ಸೂತ್ರವೆಂದರೆ ಸ್ಪಂದನಾತ್ಮಕ ಸಹಕಾರವೆಂದು ಹಿಂದೂ ಮಹಾಸಭಾ ಎತ್ತಿ ಹಿಡಿಯುತ್ತದೆ. ಬೇರೆಯವರ ನ್ಯಾಯಬದ್ಧ ಹಿತಾಸಕ್ತಿಗಳನ್ನು ಅತಿಕ್ರಮಿಸದೆ ಹಿಂದೂಗಳ ನ್ಯಾಯಬದ್ಧ ಹಿತಾಸಕ್ತಿಯನ್ನು ಕಾಪಾಡಲು ಮತ್ತು ಮುಂದೆ ತರಲು ಕೂಡ ಸರ್ಕಾರಿ ಅಧಿಕಾರದ ಕೇಂದ್ರಗಳನ್ನು ಉಪಯೋಗಿಸಿಕೊಳ್ಳುವ ದೃಷ್ಟಿಯಿಂದ ನಗರಸಭಾ ಸದಸ್ಯರು, ಮಂತ್ರಿಗಳು, ಶಾಸಕರು ಮತ್ತು ಯಾವುದೇ ಮುನಿಸಿಪಲ್ ಅಥವಾ ಯಾವುದೇ ಸರ್ಕಾರಿ ಸಮಿತಿಗಳಲ್ಲಿ ಕೆಲಸ ಮಾಡುತ್ತಿರುವ ಹಿಂದೂ ಸಂಘಿಗಳು ನಮ್ಮ ದೇಶಕ್ಕೆ ದೊಡ್ಡ ದೇಶಪ್ರೇಮಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಯಾವುದೇ ಷರತ್ತುಗಳಿಲ್ಲದ ಸಹಕಾರದಿಂದ ಸಕ್ರಿಯ ಮತ್ತು ಶಸ್ತ್ರಸಜ್ಜಿತ ವಿರೋಧದವರೆಗೂ, ದೇಶಪ್ರೇಮಿ ಚಟುವಟಿಕೆಗಳ ಸಂಪೂರ್ಣ ವ್ಯಾಪ್ತಿಯನ್ನು ಆವರಿಸಿಕೊಳ್ಳುವ ಸ್ಪಂದನಾತ್ಮಕ ಸಹಕಾರದ ನೀತಿಯು, ಸಮಯ ಸಂದರ್ಭಗಳ ತುರ್ತಿಗೆ, ನಮ್ಮ ಮುಂದಿರುವ ಸಂಪನ್ಮೂಲಗಳಿಗೆ ಮತ್ತು ನಮ್ಮ ರಾಷ್ಟ್ರದ ಹಿತಾಸಕ್ತಿಯ ಆದೇಶಗಳಿಗೆ ತನ್ನನ್ನು ಸರಿ ಹೊಂದಿಸಿಕೊಳ್ಳುತ್ತದೆ. (ವಿ.ಡಿ. ಸಾವರ್ಕರ್, ಸಮಗ್ರ ಸಾವರ್ಕರ್ ವಾಙ್ಮಯ ಕೃತಿಯಲ್ಲಿ ಉಲ್ಲೇಖ, ಸಂಪುಟ–6, ಮಹಾರಾಷ್ಟ್ರ ಪ್ರಾಂತಿಕ್ ಹಿಂದೂಸಭಾ ಪೂನಾ, 1963, ಪುಟ–474)

ಬ್ರಿಟಿಷ್ ಯಜಮಾನರೊಂದಿಗೆ ಸ್ಪಂದನಾತ್ಮಕ ಸಹಕಾರವು ಕೇವಲ ವೈಚಾರಿಕ ಬದ್ಧತೆಯಷ್ಟೇ ಆಗಿರಲಿಲ್ಲ. ಹಿಂದೂ ಮಹಾಸಭಾ ಬಂಗಾಳ, ಸಿಂದ್ ಮತ್ತು ವಾಯುವ್ಯ ಪ್ರಾಂತ್ಯಗಳಲ್ಲಿ ಸಮ್ಮಿಶ್ರ ಸರ್ಕಾರಗಳನ್ನು ಯಾರ ಜೊತೆ ನಡೆಸುತ್ತಿತ್ತೋ ಆ ಮುಸ್ಲಿಂಲೀಗ್ ಜೊತೆ ತಕ್ಷಣವೇ ಗುಂಪು ಕಟ್ಟಿ–ಕೊಂಡು ಅದನ್ನು ವಾಸ್ತವಕ್ಕಿಳಿಸಲು ಆರಂಭಿಸಿತು. ನೇತಾಜಿ ಇಂಡಿಯನ್ ನ್ಯಾಷನಲ್ ಆರ್ಮಿ (ಐಎನ್‌ಎ) ಸೈನ್ಯವನ್ನು ಮುನ್ನಡೆಸುತ್ತಾ ಸ್ವಾತಂತ್ರ್ಯವನ್ನು ಪಡೆಯುವ ಪ್ರಯತ್ನದಲ್ಲಿದ್ದಾಗ, ದಾಖಲೆಗಳು ಸ್ಪಷ್ಟವಾಗಿ ತೋರಿಸುವಂತೆ, ಸಾವರ್ಕರ್ ಹಿಂದೂಗಳ ಮಿಲಿಟರೀಕರಣಕ್ಕಾಗಿ ಸುತ್ತೋಲೆಗಳನ್ನು ಹೊರಡಿಸುತ್ತಿದ್ದರು. ಇದು ಸುಭಾಷ್ ಚಂದ್ರ ಬೋಸರ ಇಂಡಿಯನ್ ನ್ಯಾಷನಲ್ ಆರ್ಮಿ ಮುನ್ನಡೆಯುವುದಕ್ಕೆ ವಿರುದ್ಧವಾಗಿ ಬ್ರಿಟಿಷರಿಗೆ ಸಹಾಯ ಮಾಡುವುದು ಸ್ಪಷ್ಟವಾಗಿತ್ತು. (ದಿ ವೀಕ್, 24.01.16)

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು...)

### ಟ್ರಾಫಿಕ್ ಸಮಸ್ಯೆಯಿಂದ ಉಸಿರುಗಟ್ಟಿರುವ ಬೆಂಗಳೂರನ್ನು ವೆಂಟಿಲೇಟರ್‌ಗೆ ತಳ್ಳುವ

# ‘ಸುರಂಗ’ ರಸ್ತೆ ವಿರೋಧಿಸಿ ಜನಸಮಾವೇಶ

ಟ್ರಾಫಿಕ್ ಸಮಸ್ಯೆಯಿಂದ ಬೆಂಗಳೂರು ನಗರದ ಉಸಿರುಗಟ್ಟಿದೆ. ಸುರಂಗ ರಸ್ತೆಯಿಂದ ಮಾತ್ರವೇ ಈ ಸಮಸ್ಯೆಗೆ ಪರಿಹಾರ ಸಾಧ್ಯವೆಂದು ಜನರನ್ನು ನಂಬಿಸಲು ಸರ್ಕಾರ ಹೊರಟಿದೆ. ಕಳೆದ ಎರಡೂವರೆ ವರ್ಷಗಳಲ್ಲಿ ಈ ಯೋಜನೆಯ ಕುರಿತು ಮಾತುಕತೆಗಳು ಮುನ್ನೆಲೆಗೆ ಬಂದಾಗಲೆಲ್ಲಾ ಇದಕ್ಕೆ ವಿರುದ್ಧವಾಗಿ ತಜ್ಞರಿಂದ ಮತ್ತು ಜನರಿಂದ ತೀವ್ರವಾದ ಪ್ರತಿರೋಧಗಳೂ ಬಂದಿವೆ. ಅದರೂ ಸರ್ಕಾರ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಿಯೇ ತೀರುತ್ತೇನೆಂಬ ಹಠಕ್ಕೆ ಬಿದ್ದಿರುವ ಹಿಂದಿನ ಮರ್ಮವೇನು ಎಂಬುದು ಜನರನ್ನು ಕಾಡುತ್ತಿರುವ ಪ್ರಶ್ನೆ.

ನಗರದ ಟ್ರಾಫಿಕ್ ಸಮಸ್ಯೆಗೆ ಇನ್ನಿತರ ಅಗ್ಗದ, ಕ್ಷಿಪ್ರಗತಿಯ, ಸುರಕ್ಷಿತವಾದ ಮತ್ತು ದೀರ್ಘಕಾಲೀನ ಮಾರ್ಗೋಪಾಯಗಳು ಇದ್ದರೂ ಗಂಟೆಗೆ ಕೇವಲ 1800 ಕಾರುಗಳು ಮಾತ್ರ ಓಡಾಡಲು ಅವಕಾಶವಿರುವ ಈ ಸುರಂಗ ಮಾರ್ಗವನ್ನು, ಕೋಟ್ಯಂತರ ರೂ. ಹಣವನ್ನು ಸುರಿದು ನಿರ್ಮಾಣ ಮಾಡಬೇಕೆ? ಸಾಮಾನ್ಯ ಜನರಿಂದ ವಸೂಲು ಮಾಡುವ ತೆರಿಗೆ ಹಣವನ್ನು ಕೆಲವೇ ಕೆಲವು ಕಾರುಗಳು ಓಡಾಡಲು ಅನುಕೂಲವಾಗುವ ಸುರಂಗ ಮಾರ್ಗಕ್ಕೆ ಸುರಿಯುವ ಬದಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಬಹುದಲ್ಲವೇ? ಇನ್ನು ಈ ಸುರಂಗ ಮಾರ್ಗದಿಂದಾಗಿ ಪರಿಸರದ ಮೇಲಾಗುವ ಪರಿಣಾಮಗಳು ಇನ್ನೂ ಆತಂಕಕಾರಿ.

ಸುರಂಗ ಮಾರ್ಗಕ್ಕಾಗಿ ಹಲವಾರು ಎಕರೆ ಭೂಮಿಯನ್ನು ವಶಪಡಿಸಿಕೊಂಡು ಅದನ್ನು ಅಗೆದು–ಬಗೆದು ಅಲ್ಲಿರುವ ಹಸಿರನ್ನು ನಾಶಮಾಡಲಾಗುವುದು. ಲಾಲ್‌ಬಾಗ್‌ನಲ್ಲಿ 8 ಎಕರೆ ಭೂಮಿಯನ್ನು ಅಗೆಯಲಾಗುವುದು. ಸೊಂಪಾಗಿ ಬೆಳೆದಿರುವ ನೂರಾರು ಮರಗಳು ಅಲ್ಲಿ ಆಹುತಿಯಾಗುವುವು. ಇನ್ನು ಸ್ಯಾಂಕಿ ಕೆರೆ, ಹೆಬ್ಬಾಳ ಕೆರೆಗಳ ಮೇಲಾಗುವ ಪರಿಸರ ಹಾನಿಯ ಪರಿಣಾಮದ ಬಗ್ಗೆ ಅಧ್ಯಯನ ನಡೆದಿಲ್ಲ. ಬೆಂಗಳೂರಿನ ಕಟ್ಟಡಗಳು, ಮೆಟ್ರೋ ಮಾರ್ಗಗಳು, ಅಂತರ್ಜಲ ಪರಿಸ್ಥಿತಿ, ಪರಿಸರದ ಮೇಲೆ ಉಂಟಾಗುವ ಹಾನಿಕಾರಕ ಪರಿಣಾಮಗಳ ಜೊತೆಯಲ್ಲಿ ಭೂಸ್ಥಿರತೆ, ಮಣ್ಣಿನ ಗುಣ ಮತ್ತು ಭೂತಾಂತ್ರಿಕತೆ ಇನ್ನಿತರ ಅಧ್ಯಯನಗಳನ್ನು ಸರ್ಕಾರ ಕಡೆಗಣಿಸಿದೆ. ಒಟ್ಟಾರೆಯಾಗಿ ಬೆಂಗಳೂರಿನ ಜನತೆಗೆ ಯಾವುದೇ ಉಪಯೋಗವಿಲ್ಲದ, ಕೇವಲ ಕೆಲವರ ಖಜಾನೆ ತುಂಬಿಸುವ ಈ ಬಹುಕೋಟಿ ಯೋಜನೆಯ ವಿರುದ್ಧ ‘ಬೆಂಗಳೂರು ಉಳಿಸಿ ಸಮಿತಿ’ಯು ಜನ ಸಮಾವೇಶವನ್ನು ಹಮ್ಮಿಕೊಂಡಿತ್ತು.

30 ನವೆಂಬರ್ 2025ರಂದು ಬೆಂಗಳೂರಿನ ಎಸ್‌ಸಿಎಂ ಹಾಲ್‌ನಲ್ಲಿ ನಡೆದ ಈ ಸಮಾವೇಶದಲ್ಲಿ 200ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದು ಹಲವಾರು ಪರಿಸರ ವಿಜ್ಞಾನ, ಭೂವಿಜ್ಞಾನ ಮತ್ತು ನಾಗರಿಕ ಸಮಾಜದ ಪ್ರಮುಖ ತಜ್ಞರು ಭಾಗವಹಿಸಿದ್ದರು.

#### ಜನ ಸಮಾವೇಶದಲ್ಲಿ ಮೂಡಿ ಬಂದಿರುವ ತಜ್ಞರ ಅಭಿಪ್ರಾಯಗಳು

**ಪ್ರೊ. ಆಶೀಶ್ ವರ್ಮಾ, ಸಾರಿಗೆ ತಜ್ಞರು ಹಾಗೂ ಸಂಚಾಲಕರು, ಐಎಸ್‌ಟಿ ಲ್ಯಾಬ್, ಭಾರತೀಯ ವಿಜ್ಞಾನ ಸಂಸ್ಥೆ:**

ವಿಡಿಯೋ ಸಂದೇಶದ ಮೂಲಕ ಮಾತನಾಡಿದ ವರ್ಮಾ, ಸುರಂಗ ಯೋಜನೆಯನ್ನು ತೀವ್ರವಾಗಿ ಖಂಡಿಸಿ, ಇದು ಸಾರ್ವಜನಿಕ ಹಣದ ದುರ್ವ್ಯಯ ಮತ್ತು ತಲೆಮಾರುಗಳವರೆಗೆ ನಗರಕ್ಕೆ ಹಾನಿ ಮಾಡುವ ಯೋಜನೆ ಎಂದರು. ಈ ಯೋಜನೆಯು ಖಾಸಗಿ ವಾಹನ ಬಳಕೆಯನ್ನು ಉತ್ತೇಜಿಸುತ್ತದೆ, ಪ್ರತಿ ಟ್ರಿಪ್‌ಗೆ ರೂ.300 ವರೆಗೆ ಸುಂಕವನ್ನು ವಿಧಿಸುತ್ತಾ ಕೇವಲ ಶ್ರೀಮಂತರು ಮಾತ್ರ ಉಪಯೋಗಿಸಬಲ್ಲ ಯೋಜನೆಯಾಗುತ್ತದೆ. ಜೊತೆಗೆ ಪ್ರವಾಹ ಮತ್ತು ಮಣ್ಣಿನ ಅಸ್ಥಿರತೆ ಸೇರಿದಂತೆ ತೀವ್ರ ಪರಿಸರ ಹಾನಿಯನ್ನುಂಟು ಮಾಡುತ್ತದೆ ಎಂದು ವರ್ಮಾ ಎಚ್ಚರಿಸಿದರು.

**ಡಾ. ಟಿ.ವಿ. ರಾಮಚಂದ್ರ, ಸೈಂಟಿಫಿಕ್ ಆಫೀಸರ್, ಭಾರತೀಯ ವಿಜ್ಞಾನ ಸಂಸ್ಥೆ, ಪರಿಸರ ವಿಜ್ಞಾನಕೇಂದ್ರ:**

ಸುರಂಗ ಕೊರೆಯುವುದರಿಂದ ಜಲಚರಗಳು ಮತ್ತು ಅಂತರ್ಜಲ ಹರಿವು ತೊಂದರೆಗೊಳಗಾಗುವ ಅಪಾಯವಿದೆ. ಪರಿಸರಕ್ಕಾಗುವ ಈ ಅಪಾಯವು ಶಾಶ್ವತವಾಗಿರುತ್ತದೆ; ಇದು ನಗರದ ನೀರಿನ ಲಭ್ಯತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ತೀವ್ರವಾಗಿ ಹೆಚ್ಚುತ್ತಿರುವ ನಗರೀಕರಣ, ಸಸ್ಯವರ್ಗ ಮತ್ತು ಜಲಮೂಲಗಳ ನಾಶ ಮತ್ತು ಅನಿಯಂತ್ರಿತ ಕಾಂಕ್ರೀಟೀಕರಣ ಬೆಂಗಳೂರಿನ ಹವಾಮಾನದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ; ಒಬ್ಬ ವ್ಯಕ್ತಿಗೆ ಉಸಿರಾಡಲು ಅವಶ್ಯವಾದ ಉತ್ತಮ ಗಾಳಿಗೆ 7 ಮರಗಳ ಅವಶ್ಯಕತೆಯಿದೆ, ಆದರೆ ಮರಗಳ ನಾಶದಿಂದ ಇಂದು ಲಭ್ಯವಿರುವುದು, 7 ಜನರಿಗೆ ಒಂದು ಮರ ಮಾತ್ರ! ಇಂತಹ ಯೋಜನೆಗಳಿಂದ ಜನರು ಹಲವಾರು ಖಾಯಿಲೆಗಳಿಗೆ ತುತ್ತಾಗುತ್ತಿದ್ದಾ–ರೆ ಎಂದು ಡಾ. ಟಿ.ವಿ. ರಾಮಚಂದ್ರ ಆತಂಕ ವ್ಯಕ್ತ ಪಡಿಸಿದರು.

**ಪ್ರೊ. ಸಿ.ಪಿ. ರಾಜೇಂದ್ರನ್, ಪ್ರೊಫೆಸರ್, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು:**

ಈ ಯೋಜನೆಯು ಅಡ್ಡಪರಿಣಾಮಗಳನ್ನು ಬೀರುತ್ತದೆಯೇ ಹೊರತು, ಯಾವುದೇ ರೀತಿಯಲ್ಲೂ ಜನರಿಗೆ ಉಪಯೋಗವಿಲ್ಲದ್ದು. ಸೂಕ್ಷ್ಮ ಪ್ರದೇಶಗಳಲ್ಲಿ ದೊಡ್ಡ ಪ್ರಮಾಣದ ಸುರಂಗ ಮಾರ್ಗ ಯೋಜನೆಗಳು ಭೂವಿಜ್ಞಾನದ ದೃಷ್ಟಿಯಿಂದ ತುಂಬಾ ಅಪಾಯಕರ ಎಂದು ಪ್ರೊ. ಸಿ.ಪಿ. ರಾಜೇಂದ್ರನ್ ಎಚ್ಚರಿಕೆ ನೀಡಿದರು. ಅಂತಹ ಯೋಜನೆಗಳು ಸಾಮಾನ್ಯವಾಗಿ ಸ್ಥಳೀಯ ಭೂವಿಜ್ಞಾನ, ಜಲಭೂವಿಜ್ಞಾನ ಮತ್ತು ಭೂಕಂಪನ ಅಪಾಯಗಳ ಕುರಿತು ಗಮನ ಹರಿಸದೆ ನಿರ್ಲಕ್ಷಿಸುತ್ತವೆ ಎಂದವರು ಹೇಳಿದರು.

**ಪ್ರೊ. ಎಂ.ಎನ್. ಶ್ರೀಹರಿ, ಸ್ವತಂತ್ರ ನಗರ ಸಾರಿಗೆ ಯೋಜನಾ ತಜ್ಞರು, ಬೆಂಗಳೂರು:**

ಇದು ನಗರದ ಸಂಚಾರ ದಟ್ಟಣೆಯನ್ನು ಪರಿಹರಿಸಲು ದುಬಾರಿ ಮತ್ತು ಪರಿಣಾಮಕಾರಿಯಲ್ಲದ ವಿಧಾನವಾಗಿದೆ ಎಂದು ಪ್ರೊ. ಎಂ.ಎನ್. ಶ್ರೀಹರಿ ತೀವ್ರವಾಗಿ ಟೀಕಿಸಿದರು. ಇಂತಹ ಸುರಂಗ ಯೋಜನೆಗಳು ಮುಖ್ಯವಾಗಿ ಮುಂಬೈ, ಚೆನ್ನೈನಂತಹ ಕರಾವಳಿ ನಗರಗಳಿಗೆ ಸೂಕ್ತವಾಗುತ್ತವೆ. ಜನಸಾಮಾನ್ಯರ ಪರವಾಗಿಲ್ಲದ ಈ ಅನಗತ್ಯ ಯೋಜನೆಯನ್ನು ಕೈಬಿಟ್ಟು, ಸಮೂಹ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸುವಲ್ಲಿನ ಹೂಡಿಕೆಗಳಿಗೆ ಆದ್ಯತೆ ನೀಡಬೇಕೆಂದು ಅವರು ಒತ್ತಿ ಹೇಳಿದರು.




ಸಮಾವೇಶದಲ್ಲಿ ಮಾತನಾಡುತ್ತಿರುವ ಡಾ. ಜಿ.ಶಶಿಕುಮಾರ್ ಮತ್ತು ವೇದಿಕೆಯಲ್ಲಿ ಡಾ. ಟಿ.ವಿ.ರಾಮಚಂದ್ರ, ಪ್ರೊ. ಆಶಿಶ್ ವರ್ಮಾ, ಪ್ರೊ.ಸಿ.ಪಿ. ರಾಜೇಂದ್ರನ್, ಡಾ. ಸುಧಾ ಕಾಮತ್, ಶ್ರೀಮತಿ ಕಾತ್ಯಾಯಿನಿ ಮತ್ತು ಶ್ರೀ. ಎನ್.ರವಿ

**ಡಾ.ಸುಧಾ ಕಾಮತ್, ಪ್ಲಾಸ್ಟಿಕ್ ಸರ್ಜರಿ ತಜ್ಞರು, ಸಾಮಾಜಿಕ ಕಾರ್ಯಕರ್ತೆ:**

ಒಂದು ಕಾಲದಲ್ಲಿ ‘ನಿವೃತ್ತರ ಸ್ವರ್ಗ’ ಎನಿಸಿಕೊಂಡ ಬೆಂಗಳೂರು ಇಂದು ಅಸ್ತಮಾ ರೋಗದ ರಾಜಧಾನಿ ಆಗಿರುವ ಬಗ್ಗೆ ಖೇದ ವ್ಯಕ್ತ ಪಡಿಸಿದ ಡಾ.ಸುಧಾ ಕಾಮತ್, ಪರಿಸರ ಮಾಲಿನ್ಯದಿಂದ, ರೋಗಕಾರಕ ರಾಸಾಯನಿಕಗಳು ಜನರ ಶರೀರ ಸೇರುತ್ತಾ, ಕ್ಯಾನ್ಸರ್, ಹೃದ್ರೋಗ, ಶ್ವಾಸಕೋಶ, ಮೂತ್ರಪಿಂಡ ರೋಗಗಳು ಹೆಚ್ಚುತ್ತಿರುವುದರ ಬಗ್ಗೆ ವಿವರಿಸಿದರು.

**ಶ್ರೀಮತಿ ಕಾತ್ಯಾಯಿನಿ ಚಾಮರಾಜ್, ಸಿವಿಕ್ ಬೆಂಗಳೂರು ಸಂಸ್ಥೆ:**

ಇಂತಹ ದುಬಾರಿ, ಕಾರು ಕೇಂದ್ರಿತ ಯೋಜನೆಗಳ ಬದಲಿಗೆ, ಬಸ್‌ಗಳ ಸೇವೆಯನ್ನು, ಉಪನಗರ ರೈಲುಗಳನ್ನು ಮತ್ತು ಮೆಟ್ರೋ ರೈಲನ್ನು ವಿಸ್ತರಿಸುವುದು, ಕೊನೆಯ ಮೈಲಿ ಸಂಪರ್ಕವನ್ನು ಖಚಿತಪಡಿಸುವುದು ಮತ್ತು ಸಾರ್ವಜನಿಕ ಸಾರಿಗೆಯನ್ನು ಕೈಗೆಟಕುವಂತೆ ರೂಪಿಸಬೇಕೆಂದು ಶ್ರೀಮತಿ ಕಾತ್ಯಾಯಿನಿ ಚಾಮರಾಜ್ ಒತ್ತಾಯಿಸಿದರು.

**ಪ್ರೊ. ರೇಣುಕಾ ಪ್ರಸಾದ್, ಭೂವಿಜ್ಞಾನ ಭಾಗದ ನಿಕಟಪೂರ್ವ ಮುಖ್ಯಸ್ಥರು, ಬೆಂಗಳೂರು ವಿಶ್ವವಿದ್ಯಾಲಯ:**

ಬೆಂಗಳೂರು ಸುರಂಗ ರಸ್ತೆ ಯೋಜನೆಗೆ ಒಂದು ಸಮಗ್ರ ಭೂವೈಜ್ಞಾನಿಕ ಸಮೀಕ್ಷೆ ಇಲ್ಲದಿರುವುದು ಆಘಾತಕಾರಿ ಎಂದ ಪ್ರೊ. ರೇಣುಕಾ ಪ್ರಸಾದ್, ಈ ಪ್ರಮಾಣದ ಯೋಜನೆಗಳು ಸಾಮಾನ್ಯವಾಗಿ ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ಬೈಪಾಸ್ ಮಾಡುವುದಲ್ಲದೇ, ನಗರದ ಭೂರಚನೆಯ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ ಎಂದು ಎಚ್ಚರಿಸಿದರು.

**ಡಾ. ಜಿ. ಶಶಿಕುಮಾರ್, ಸಂಚಾಲಕರು, ಬೆಂಗಳೂರು ಉಳಿಸಿ ಸಮಿತಿ:**

ಡಾ. ಜಿ. ಶಶಿಕುಮಾರ್, ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ, ಈ ಯೋಜನೆಯು ಅವೈಜ್ಞಾನಿಕವಾದುದಲ್ಲದೇ, ಆರ್ಥಿಕವಾಗಿಯೂ ಹಾಗೂ ಪರಿಸರ ಸಂರಕ್ಷಣೆಯ ದೃಷ್ಟಿಯಿಂದಲೂ ದುಷ್ಪರಿಣಾಮವನ್ನು ಬೀರುತ್ತದೆ. ಈ ಯೋಜನಾ ವೆಚ್ಚವು ರೂ. 70,000 ಕೋಟಿ–ಗಿಂತ ಹೆಚ್ಚಾಗಬಹುದು, ಇದರಿಂದಾಗಿ ಮುಂದಿನ 40 ವರ್ಷಗಳ ಕಾಲ ನಾಗರಿಕರು ತೆರಿಗೆ ಮತ್ತು ಟೋಲ್‌ಗಳ ಹೊರೆಯನ್ನು ಹೊರಬೇಕಾಗುತ್ತದೆ. ಈ ಸುರಂಗ ಯೋಜನೆಯಡಿಯಲ್ಲಿ ಗಂಟೆಗೆ ಕೇವಲ 1,800 ಕಾರು ಪ್ರಯಾಣಿಕರು ಪ್ರಯಾಣಿಸಿದರೆ, ಸಾರ್ವಜನಿಕ ಸಾರಿಗೆಗಳಾದ ಮೆಟ್ರೋನಲ್ಲಿ 69,000 ಮತ್ತು ಬಿಎಂಟಿಸಿ ಬಸ್‌ಗಳಲ್ಲಿ 1.75 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಾರೆ. ಹಾಗಾಗಿ, ನಗರದ ಟ್ರಾಫಿಕ್ ಸಮಸ್ಯೆಗೆ ಪರಿಹಾರ ಸ್ಪಷ್ಟವಾಗಿದ್ದರೂ, ಈ ಯೋಜನೆಯನ್ನು ಸರ್ಕಾರ ಮುಂದುವರೆಸಲು ಯತ್ನಿಸುತ್ತಿರುವ ಹಿಂದೆ ಹಣದ ಶಕ್ತಿಗಳ ಕೈವಾಡ ನಿಚ್ಚಳವಾಗಿ ಕಾಣಿಸುತ್ತಿದೆ ಎಂದು ವಿಶ್ಲೇಷಿಸಿದರು. ಸರ್ಕಾರವನ್ನು ಈ ಯೋಜನೆಯಿಂದ ಹಿಂದೆ ಸರಿಸುವ ಒಂದೇ ಮಾರ್ಗವೆಂದರೆ, ಅದು ಒಂದು ಪ್ರಬಲ ಜನ ಹೋರಾಟ ಎಂದವರು ಘೋಷಿಸಿದರು.

ಬೆಂಗಳೂರು ಉಳಿಸಿ ಸಮಿತಿಯ ಹಿರಿಯ ಸದಸ್ಯರಾದ ಶ್ರೀ. ಎನ್.ರವಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕರ್ನಾಟಕದ ಮಾಜಿ ಅಡ್ವೊಕೇಟ್ ಜನರಲ್ ಪ್ರೊ. ರವಿವರ್ಮ ಕುಮಾರ್, ಖ್ಯಾತ ಸಂಧಿವಾತ ತಜ್ಞ ಡಾ. ಧರ್ಮಾನಂದ ಮತ್ತು ಭೂವಿಜ್ಞಾನ ಪ್ರಾಧ್ಯಾಪಕ ಶ್ರೀ. ಶ್ರೀನಿವಾಸ್ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಶ್ರೀ. ರಾಜೇಶ್ ಭಟ್, ಸದಸ್ಯರು, ಬೆಂಗಳೂರು ಉಳಿಸಿ ಸಮಿತಿ:**

ನಗರದಲ್ಲಿ ಮೂರು ದಶಕಗಳಿಂದ ಸಕ್ರಿಯವಾಗಿರುವ ಬೆಂಗಳೂರು ಉಳಿಸಿ ಸಮಿತಿಯು ಕಳೆದ ಎರಡು ತಿಂಗಳಿನಿಂದ ಬೆಂಗಳೂರಿನ ಮೇಲೆ ಸುರಂಗ ಮಾರ್ಗದಿಂದಾಗುವ ಪ್ರತಿ–ಕೂಲ ಪರಿಸ್ಥಿತಿಯ ಕುರಿತು ಸಕ್ರಿಯವಾಗಿ ಪ್ರಚಾರ ಮಾಡುತ್ತಿದೆ ಎಂದ ಶ್ರೀ. ರಾಜೇಶ್ ಭಟ್, ಈ ಜನ ವಿರೋಧಿ ಯೋಜನೆಯು ಜಾರಿಯಾಗದಂತೆ ತಾನು ಹರಿಬಿಟ್ಟ ಈ ಜನಾಂದೋಲನವನ್ನು ಗಟ್ಟಿಗೊಳಿಸುವತ್ತ ಸಮಿತಿಯು ಮುನ್ನಡೆಯಿಡುತ್ತದೆ ಎಂದು ಹೇಳಿದರು.

ಬಂಡವಾಳಿಗರ ಸೇವೆಯಲ್ಲಿ ನಿರತವಾಗಿರುವ ಎಲ್ಲಾ ಸಂಸದೀಯ ರಾಜಕೀಯ ಪಕ್ಷಗಳೂ ಜನಹಿತವನ್ನು ಕಡೆಗಣಿಸಿ, ಪರಿಸರವನ್ನು ಹಾಳುಗೆಡವುತ್ತಾ, ಜನರ ಹಣವನ್ನು ಪೋಲುಮಾಡುವ, ತಮ್ಮ ಮಾಲೀಕರಿಗೆ ಬಂಡವಾಳ ತೊಡಗಿಸಿ ಅತ್ಯಧಿಕ ಲಾಭ ದೋಚಲು ಅನುವು ಮಾಡಿಕೊಡುವ ಯೋಜನೆಗಳನ್ನು ಜಾರಿಗೊಳಿಸುತ್ತಿರುವಾಗ, ಒಂದು ಸಮರಶೀಲ ಜನಶಕ್ತಿ ಮಾತ್ರವೇ ಇದಕ್ಕೆ ಕೊನೆ ಹಾಕಬಲ್ಲದು. ■

## ಬಳ್ಳಾರಿ: ಗಣಿ ಕಾರ್ಮಿಕರ ಸಮ್ಮೇಳನ






**ಎಐಯುಟಿಯುಸಿಗೆ** ಸಂಯೋಜನೆಗೊಂಡ ಸಂಯುಕ್ತ ಗಣಿ ಕಾರ್ಮಿಕರ ಬಳ್ಳಾರಿ ಜಿಲ್ಲಾ ಮಟ್ಟದ ಸಮ್ಮೇಳನವನ್ನು ಸಂಡೂರಿನ ಅಂಬೇಡ್ಕರ್ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮ್ಮೇಳನದ ಮುಖ್ಯ ಭಾಷಣಕಾರರಾಗಿ ಸಂಯುಕ್ತ ಗಣಿ ಕಾರ್ಮಿಕರ ಸಂಘದ ಅಧ್ಯಕ್ಷರು ಹಾಗೂ ಎಐಯುಟಿಯುಸಿಯ ರಾಜ್ಯಾಧ್ಯಕ್ಷರಾದ ಕೆ. ಸೋಮಶೇಖರ್ ಅವರು ಆಗಮಿಸಿದ್ದರು.

# ಎಐಎಂಎಸ್‌ಎಸ್: ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿರ್ಮೂಲನಾ ದಿನ

## ನವೆಂಬರ್ 25 ರಂದು ರಾಜ್ಯವ್ಯಾಪಿ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ

ಇಂದಿಗೂ ಮಹಿಳೆ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಭದ್ರತೆಗಳಿಂದ ವಂಚಿತಳಾಗಿದ್ದಾಳೆ. ಇನ್ನೊಂದೆಡೆ ಪ್ರತಿನಿತ್ಯ ಅತ್ಯಾಚಾರ–ಗುಂಪು ಅತ್ಯಾಚಾರ, ದೌರ್ಜನ್ಯ–ಹಿಂಸೆ, ಅಗೌರವ–ಅಪಮಾನಗಳಿಗೆ ಬಲಿಯಾಗುತ್ತಿದ್ದಾಳೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ವಿಕೃತ ಪಾತಕಗಳು ಪರಕಾಷ್ಠೆಯನ್ನು ತಲುಪಿವೆ. [ಇದನ್ನು ತಡೆಗಟ್ಟಲು ಪ್ರಬಲ ಆಂದೋಲನದ ಅಗತ್ಯ ತೀವ್ರವಾಗಿದೆ. ಈ ನಿಟ್ಟಿನಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ (ಎಐಎಂಎಸ್‌ಎಸ್) ಕರ್ನಾಟಕ ರಾಜ್ಯ ಸಮಿತಿಯು ಹೆಚ್ಚುತ್ತಿರುವ ದೌರ್ಜನ್ಯಗಳನ್ನು ನಿರ್ಮೂಲನೆ ಮಾಡಲು ಒತ್ತಾಯಿಸಿ ನವೆಂಬರ್ 25, 2025 ರಿಂದ ಮಾರ್ಚ್ 25, 2026 ರವರೆಗೆ ನಾಲ್ಕು ತಿಂಗಳ ಕಾಲ ರಾಜ್ಯದಾದ್ಯಂತ ಸಹಿ ಸಂಗ್ರಹ ಆಂದೋಲನ, ಪ್ರತಿಭಟನಾ ಸಭೆ, ಸಮಾವೇಶ, ಮೆರವಣಿಗೆಗಳನ್ನು ಸಂಘಟಿಸಲು ಕರೆ ನೀಡಿ. ಇದರ ಭಾಗವಾಗಿ, 'ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ನಿರ್ಮೂಲನ ದಿನವಾದ ನವೆಂಬರ್ 25 ರಂದು ವಿವಿಧ ಜಿಲ್ಲೆಗಳಲ್ಲಿ ವಿಭಿನ್ನ ಕಾರ್ಯಕ್ರಮಗಳ ಮೂಲಕ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ ನೀಡಲಾಯಿತು'.] ಅಂತರ್ಜಾಲ ಹಾಗೂ ಮಾಧ್ಯಮಗಳಲ್ಲಿನ ಅಶ್ಲೀಲತೆ, ಕ್ರೌರ್ಯದ ಬಿತ್ತರಣೆಯನ್ನು ತಡೆಗಟ್ಟಿ, ಮದ್ಯ–ಮಾದಕ ವಸ್ತುಗಳನ್ನು ನಿಷೇಧಿಸಿ, ಅತ್ಯಾಚಾರಿಗಳಿಗೆ ನಿದರ್ಶನೀಯ ಶಿಕ್ಷೆ ವಿಧಿಸಿ, ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ಭದ್ರತೆಯನ್ನು ಖಾತ್ರಿಪಡಿಸಿ, ಮೊದಲಾದ ಘೋಷಣೆಗಳೊಂದಿಗೆ ಈ ಆಂದೋಲನ ಪ್ರಾರಂಭವಾಗಿದೆ.

**ಕೊಪ್ಪಳದಲ್ಲಿ** ನಡೆದ ಸಾರ್ವಜನಿಕ ಸಭೆಯಲ್ಲಿ ಹಿರಿಯ ಸಾಹಿತಿಗಳು ಮತ್ತು ಹೋರಾಟಗಾರರಾದ ಶ್ರೀ.ಅಲ್ಲಮಪ್ರಭು ಬೆಟ್ಟದೂರು ಮತ್ತು ಎಐಎಂಎಸ್‌ಎಸ್ ರಾಜ್ಯಾಧ್ಯಕ್ಷರಾದ ಕಾ.ಎಂ.ಎನ್. ಮಂಜುಳಾರವರಿಂದ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ ದೊರಕಿತು.

**ಮೈಸೂರಿನ** ಚಿಕ್ಕ ಗಡಿಯಾರದ ಬಳಿ ಸಾರ್ವಜನಿಕ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. ಎಐಎಂಎಸ್‌ಎಸ್ ಜಿಲ್ಲಾ ಅಧ್ಯಕ್ಷರಾದ ಕಾ.ನಳಿನ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ ನೀಡಿದರು.

**ಬೆಂಗಳೂರು** ನಗರದ ಕೆ.ಆರ್.ವೃತ್ತದ ಬಳಿಯಿರುವ ಬಹುಮಹಡಿ ಕಟ್ಟಡದ ಹತ್ತಿರ ಮಹಾನ್ ವ್ಯಕ್ತಿಗಳ ಸೂಕ್ತಿ ಪ್ರದರ್ಶನ, ಮಹಾನ್ ವ್ಯಕ್ತಿಗಳ ಪುಸ್ತಕ ಮಾರಾಟ ಹಾಗೂ ಸಹಿ ಸಂಗ್ರಹ ಮಾಡಲಾಯಿತು.

**ಧಾರವಾಡದ** ಕೆ.ಇ.ಬೋರ್ಡ್ ಪದವಿ ಪೂರ್ವ ಕಾಲೇಜಿನಲ್ಲಿ ಸಮಾವೇಶ ನಡೆಯಿತು. ಇದ–ಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅಡ್ವೋಕೇಟ್ ಪ್ರತಾಪ್ ಜಾಧವ್ ಮತ್ತು ಎಐಎಂಎಸ್‌ಎಸ್ ಜಿಲ್ಲಾ ಅಧ್ಯಕ್ಷರಾದ ಮಧುಲತಾ ಗೌಡರ್ ಸಹಿ ಸಂಗ್ರಹದ ಉದ್ಘಾಟನೆಯನ್ನು ಮಾಡಿದರು.

**ತುಮಕೂರು** ನಗರದಲ್ಲಿರುವ ವಿದ್ಯೋದಯ ಕಾನೂನು ಮಹಾವಿದ್ಯಾಲಯದಲ್ಲಿ ಸಹಿ ಸಂಗ್ರಹದ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಎಐಎಂಎಸ್‌ಎಸ್ ಜಿಲ್ಲಾ ನಾಯಕರುಗಳಾದ ಕಲ್ಯಾಣಿ, ರತ್ನಮ್ಮ ಉಪಸ್ಥಿತರಿದ್ದರು.

**ಬಳ್ಳಾರಿ** ನಗರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿಗಳಾದ ಕಾ.ಶೋಭಾ ಎಸ್. ಸಹಿ ಹಾಕುವ ಮೂಲಕ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ ನೀಡಿದರು.

**ದಾವಣಗೆರೆಯಲ್ಲಿ** ಸಹಿ ಸಂಗ್ರಹ ಚಳುವಳಿಯನ್ನು ಬೀದಿ ಬದಿ ವ್ಯಾಪಾರಸ್ಥರ ಸಂಘದ ಮುಖ್ಯಸ್ಥರಾದ ಇಸ್ಮಾಯಿಲ್ ಚಾಲನೆ ಮಾಡಿದರು. ಎಐಎಂಎಸ್‌ಎಸ್ ಜಿಲ್ಲಾ ಕಾರ್ಯದರ್ಶಿಗಳಾದ ಭಾರತಿ, ಅಧ್ಯಕ್ಷರಾದ ರಶ್ಮಿ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಪಾಲ್ಗೊಂಡಿದ್ದರು.

**ಕಲಬುರ್ಗಿ** ಸೂಪರ್ ಮಾರ್ಕೆಟ್ ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹಿರಿಯ ಉಪನ್ಯಾಸಕರಾದ ಶ್ರೀಮತಿ ಸಂಧ್ಯಾ ಹೊಂಗುಂತಿಕರ್ ಸಹಿ ಸಂಗ್ರಹ ಆಂದೋಲನಕ್ಕೆ ಚಾಲನೆ ನೀಡಿದರು. ಜಿಲ್ಲಾ ನಾಯಕರುಗಳಾದ ಗುಂಡಮ್ಮ, ಸೀಮಾ ಉಪಸ್ಥಿತರಿದ್ದರು.

**ವಿಜಯಪುರ** ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಜನ ಸಾಮಾನ್ಯರಿಂದ ಸಹಿ ಪಡೆಯುವ ಮೂಲಕ ಸಹಿ ಆಂದೋಲನಕ್ಕೆ ಚಾಲನೆ ನೀಡಲಾಯಿತು. ಜಿಲ್ಲಾ ಎಐಎಂಎಸ್‌ಎಸ್ ಮುಖಂಡರಾದ ಶಿವಬಾಳಮ್ಮ, ಗೀತಾ ಮತ್ತು ಶಿವರಂಜಿನಿ ನೇತೃತ್ವ ವಹಿಸಿದ್ದರು.

**ರಾಯಚೂರು** ಸಿಯತಲಾಬ್ ಬಡಾವಣೆ ಹಾಗೂ ವೃತ್ತಿಪರ ಹಾಸ್ಟೆಲ್‌ನಲ್ಲಿ ಸಹಿ ಸಂಗ್ರಹ ಅಭಿಯಾನಕ್ಕೆ ಎಐಎಂಎಸ್‌ಎಸ್ ರಾಜ್ಯ ಕಚೇರಿ ಕಾರ್ಯದರ್ಶಿಯಾದ ಶಾಂತಾ ಎಸ್. ಚಾಲನೆ ನೀಡಿದರು. ■

ರಾಯಚೂರು




ಬಳ್ಳಾರಿ




# ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಪಿಹಿಯಾಗದ ಕಬ್ಬು ಬೆಳೆಗಾರರ ಹೋರಾಟ

ಇತ್ತೀಚೆಗೆ ರಾಜ್ಯದ ಕಬ್ಬು ಬೆಳೆಯುವ ರೈತರು ಬೆಳಗಾವಿ, ಬಾಗಲಕೋಟೆ, ಬಿಜಾಪುರ, ವಿಜಯನಗರ, ಹಾವೇರಿ ಮುಂತಾದ ಹಲವು ಜಿಲ್ಲೆಗಳಲ್ಲಿ ಕಬ್ಬಿಗೆ ಸೂಕ್ತ ದರ ನಿಗದಿಪಡಿಸಬೇಕೆಂದು ಹೋರಾಟ ನಡೆಸಿದರು. ವರ್ಷದ ದುಡಿಮೆಯಿಂದ ಕೈಗೆ ಬಂದಿರುವ ಕಬ್ಬನ್ನು ಸಕ್ಕರೆ ಕಾರ್ಖಾನೆಗೆ ಸಾಗಿಸಿ ಅದಕ್ಕೆ ಸೂಕ್ತ ಬೆಲೆ ಕೊಡಿ ಎಂದು ಅವರು ಆಗ್ರಹಿಸಿದರು. ವರ್ಷವಿಡಿ ಶ್ರಮ ಹಾಕಿ ಪೋಷಣೆ ಮಾಡಿ ಸಹಸ್ರಾರು ರೂ.ಗಳನ್ನು ಖರ್ಚುಮಾಡಿ ತೆಗೆದ ಬೆಳೆ ಅದು. ಅದಕ್ಕೆ ಒಂದು ವರ್ಷದಿಂದ ತೀವ್ರ ನಿಗಾವಹಿಸಿ ಬೆಳೆದಿದ್ದರು. ಆದ್ದರಿಂದ ಅದರ ಖರ್ಚು ಕಳೆದು ಪರಿಶ್ರಮದ ಫಲಿತಾಂಶವು ತಮಗೆ ದೊರಕಬೇಕು ಎಂದು ಅವರು ತಮ್ಮ ಬೇಡಿಕೆ ಮುಂದಿಟ್ಟರು. ಮಾರಾಟ ಮಾಡಿ ದೊರೆತ ಹಣದಿಂದ ಅವರು ಮಾಡಿದ ಖರ್ಚು ಅವರಿಗೆ ವಾಪಾಸು ದೊರೆಯಬೇಕು; ಹಾಗೂ ಅಲ್ಲದೆ ಅವರ ಕುಟುಂಬ ನಿರ್ವಹಣೆಯಾಗಬೇಕು. ಆದ್ದರಿಂದ ಅವರಿಗೆ ಯೋಗ್ಯ ಬೆಲೆ ದೊರೆಯಬೇಕು ಎಂಬ ಅವರ ನಿಲುವು ನ್ಯಾಯೋಚಿತವಾಗಿತ್ತು. ಆದರೆ ಫ್ಯಾಕ್ಟರಿ ಮಾಲೀಕರು ಸೂಕ್ತ ಬೆಲೆ ಕೊಡಲು ಒಪ್ಪಲಿಲ್ಲ. ರೈತರ ಆಗ್ರಹವನ್ನು ಅವರು ಧಿಕ್ಕರಿಸಿದರು. ರೈತರು ಇದಕ್ಕೆ ಅಂಜದೆ ಅವರು ಒಂದು ಟನ್ ಕಬ್ಬಿಗೆ 3,500 ರೂಪಾಯಿಗಳನ್ನಾದರು ಕೊಡಬೇಕು ಎಂದು ಪಟ್ಟು ಹಿಡಿದರು. ಆದರೆ ಮಾಲೀಕರು ತಾವು ಕೊಡುವುದೇ 3,000 ರೂ ಗಳು ಮಾತ್ರ, ನೀವು ಏನು ಬೇಕಾದರು ಮಾಡಿಕೊಳ್ಳಿ ಎಂದು ಹಠ ಹಿಡಿದರು.

ಮಾಲೀಕರ ಇಂತಹ ಧೋರಣೆಯಿಂದ ರೈತರಿಗೆ ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ಮಾಲೀಕರ ಮರ್ಜಿಗೆ ರೈತರನ್ನು ತಳ್ಳಲಾಗುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಕಾರ್ಖಾನೆ ಮಾಲೀಕರು ಮೇಲ್ಗೈ ಪಡೆದು ಕಬ್ಬು ಬೆಳೆದ ರೈತರು ಅಸಹಾಯಕರಾಗಿ ಮಾಲೀಕರ ಮುಂದೆ ದೀನರಾಗಬಾರದೆಂದೇ, ಈ ಹಿಂದೆಯೇ 1966ರಲ್ಲಿ ಕೇಂದ್ರ ಸರ್ಕಾರ ಸಕ್ಕ–ರೆ ನಿಯಂತ್ರಣ ಕಾಯ್ದೆ ರೂಪಿಸಿತ್ತು. ಈ ಕಾಯ್ದೆಗೆ ಅನುಗುಣವಾಗಿ ಕೃಷಿ ಆಯೋಗ ರಚಿಸಲಾಗಿದೆ. ಈ ಆಯೋಗವು ಪ್ರತಿವರ್ಷ ಬೆಳೆಯ ವೆಚ್ಚವನ್ನು ಪರಿಗಣಿಸಿ ದರ ನಿಗದಿ ಮಾಡಿ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಈ ಶಿಫಾರಸ್ಸಿನ ಆಧಾರದ ಮೇಲೆ ಸರ್ಕಾರದ ಆರ್ಥಿಕ ವ್ಯವಹಾರದ ಸಂಪುಟ ಸಮಿತಿ ಪ್ರಧಾನಿಯವರ ಅಧ್ಯಕ್ಷತೆಯಲ್ಲಿ ಬೆಲೆ ನಿಗದಿ ಮಾಡುತ್ತದೆ. ಇದನ್ನು ನ್ಯಾಯೋಚಿತ ಮತ್ತು ಲಾಭದಾಯಕ ಬೆಲೆ ಅಂದರೆ ಎಫ್‌ಆರ್‌ಪಿ (Fair and Remunerative price) ಎಂದು ಕರೆ–ಯುತ್ತಾರೆ. ಅಲ್ಲದೆ ಈ ಕಾಯ್ದೆಯ ಪ್ರಕಾರ ಫ್ಯಾಕ್ಟರಿಗೆ ಕಬ್ಬು ಸಾಗಣೆ ಮಾಡಿದ 14 ದಿನದೊಳಗೆ ರೈತನಿಗೆ ಬೆಲೆ ಪಾವತಿಸಬೇಕು. ತಪ್ಪಿದಲ್ಲಿ 15ನೇ ದಿನದಿಂದ ಶೇ. 15ರಷ್ಟು ಬಡ್ಡಿ ಸಮೇತ ಹಣವನ್ನು ಫ್ಯಾಕ್ಟರಿಯವರು ರೈತನಿಗೆ ನೀಡಬೇಕು. ಸರ್ಕಾರ ನಿಗದಿ ಮಾಡಿದ ಎಫ್ ಆರ್ ಪಿ ಗಿಂತ ಕಡಿಮೆ ಬೆಲೆಗೆ ಫ್ಯಾಕ್ಟರಿಯವರು ಖರೀದಿಸುವಂತಿಲ್ಲ. ಕೇಂದ್ರ ನಿಗದಿ ಮಾಡಿದ ಎಫ್ ಆರ್ ಪಿ ಬೆಲೆಯನ್ನು ಕೊಡಿಸುವ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿರುತ್ತದೆ.

ಈ ವರ್ಷ 2025–26ನೇ ಸಾಲಿನಲ್ಲಿ ಕೇಂದ್ರ ಸರ್ಕಾರ, ಶೇ.10.5 ರಷ್ಟು ಸಕ್ಕರೆ ಪ್ರಮಾಣವಿದ್ದಲ್ಲಿ ಒಂದು ಟನ್ ಕಬ್ಬಿಗೆ 3550 ರೂಪಾಯಿ ಎಫ್‌ಆರ್‌ಪಿ ಬೆಲೆಯನ್ನು ನಿಗದಿ ಮಾಡಿದೆ. ಇದರಲ್ಲಿ ಕಟಾವ್, ಲೋಡಿಂಗ್ ಮತ್ತು ಸಾಗಣಿಕೆ ವೆಚ್ಚ ಸೇರಿಸಲಾಗಿದೆ. ರೈತರು ಕಟಾವ್ ಮಾಡಿಕೊಂಡು ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ತುಂಬಿಕೊಂಡು ಮಾರಾಟಕ್ಕೆ ಕಾರ್ಖಾನೆಗೆ ತಂದಿದ್ದರು. ಹಾಗೂ ಈ ಕಬ್ಬಿನಲ್ಲಿ ಸಕ್ಕರೆ ಪ್ರಮಾಣ ಶೇ. 10.5 ಕ್ಕಿಂತ ಹೆಚ್ಚೇ ಇತ್ತು. ಆದ್ದ–ರಿಂದ ಮಾಲೀಕರು ಅದರಂತೆ ಒಂದು ಟನ್ ಕಬ್ಬಿಗೆ ರೂ. 3,550 ಕೊಡಬೇಕಿತ್ತು. ಆದರೆ ಮಾಲೀಕರು ಎಫ್‌ಆರ್‌ಪಿ ಯನ್ನು ಧಿಕ್ಕರಿಸಿ ರೂ.3,000 ಮಾತ್ರ ಕೊಡುವುದಾಗಿ ತಗಾದೆ ತೆಗೆದರು. ಇಂತಹ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಕಾರ್ಖಾನೆ ಮಾಲಿಕರ ಮೇಲೆ ಕ್ರಮ ಜರುಗಿಸಿ ಎಫ್‌ಆರ್‌ಪಿ ದರ ಕೊಡುವಂತೆ ತಾಕೀತು ಮಾಡಬೇಕಿತ್ತು. ಇಲ್ಲದೆ ಹೋದರೆ ಕಾರ್ಖಾನೆ ಮುಟ್ಟುಗೋಲು ಹಾಕಿಕೊಳ್ಳುತ್ತೇವೆ ಎಂದು ಎಚ್ಚರಿಸಬೇಕಿತ್ತು. ಆದರೆ ದುರಂತವೆಂದರೆ ರಾಜ್ಯ ಸರ್ಕಾರ ಮಾಲೀಕರ ಜೊತೆ ಸಭೆ ಹಾಗೂ ಮನವಿ ಮಾಡಿಕೊಳ್ಳುವುದರಲ್ಲಿಯೇ ಸಮಯ ಕಳೆಯಿತು. ಅವರ ಮೇಲೆ ಕ್ರಮ ಜರುಗಿಸುವ ದಿಟ್ಟತನ ತೋರಿಸಲಿಲ್ಲ.

ಹೋರಾಟದ ನಡುವೆ ಬಾಗಲಕೋಟೆ ಜಿಲ್ಲೆಯಲ್ಲಿ ಹೋರಾಟ ನಿರತ ರೈತರ ಕಬ್ಬಿನ ಟ್ರ್ಯಾಕ್ಟರ್‌ಗಳಿಗೆ ಸಮಾಜಘಾತುಕರಿಂದ ಬೆಂಕಿ ಹಚ್ಚಿಸಿ ಚಳುವಳಿಯ ದಿಕ್ಕು ತಪ್ಪಿಸಲು ಸಂಚು ಹೂಡಿದರು. ಚಳುವಳಿ ನಿರತ ರೈತರು ಹಿಂಸಾಚಾರಕ್ಕೆ ಇಳಿದಿದ್ದಾರೆ ಎಂದು ಪ್ರಚಾರ ಮಾಡಲು ಪ್ರಯತ್ನಿಸಲಾಯಿತು. ಆ ಪಿತೂರಿಗೆ ರೈತರು ಬಲಿಯಾಗಲಿಲ್ಲ. ಬದಲಿಗೆ ಶೀಘ್ರಕ್ರಮ ಕೈಗೊಂಡು ದುಷ್ಕರ್ಮಿಗಳನ್ನು ಬಂಧಿಸಬೇಕೆಂದು ರೈತರು ಆಗ್ರಹಿಸಿದರು.

ಫ್ಯಾಕ್ಟರಿ ಮಾಲೀಕರು ರೂ. 3,500 ಕೊಡುವುದು ತಮ್ಮಿಂದಾಗುವುದಿಲ್ಲವೆಂದೂ, ಅದರಿಂದ ತಮಗೆ ತೀವ್ರ ನಷ್ಟವಾಗುತ್ತದೆಯೆಂದು ಹೇಳಿದರು. ಇದು ಒಂದು ದೊಡ್ಡ ಸುಳ್ಳು. ಫ್ಯಾಕ್ಟರಿ ಮಾಡಿ ಕೆಲವೇ ವರ್ಷಗಳಲ್ಲಿ ಮತ್ತೆ ಎರಡನೆಯ, ಮೂರನೆಯ ಫ್ಯಾಕ್ಟರಿ ತೆರೆಯುತ್ತಾರೆ. ನಷ್ಟವಾಗುವುದಾದರೆ ಅದು ಹೇಗೆ ಸಾಧ್ಯ? ಇದಕ್ಕೆ ಮಾಲಿಕರು ಉತ್ತರಿಸುವುದಿಲ್ಲ!

ಮಾಲೀಕರಿಗೆ ಅತ್ಯಧಿಕ ಲಾಭವಾಗುತ್ತದೆ. ಕಬ್ಬನ್ನು ಸಂಸ್ಕರಿಸುವುದರಿಂದ ಸಕ್ಕರೆ ಮಾತ್ರ ದೊರೆಯುವುದಿಲ್ಲ. ಸಕ್ಕರೆ ಅದರ ಪ್ರಮುಖ ಉತ್ಪನ್ನ, ಅದಲ್ಲದೆ ಮಾಲೀಕನಿಗೆ ಲಾಭ ತಂದುಕೊಡುವಂತಹ ಇತರೆ ಹಲವಾರು ಉಪ ಉತ್ಪನ್ನಗಳು ಈ ಕಬ್ಬಿನ ಸಂಸ್ಕರಣೆಯಿಂದ ದೊರೆಯುತ್ತವೆ. ಅವೆಲ್ಲವೂ ಮಾಲೀಕನಿಗೆ ಆದಾಯ ತಂದುಕೊಡುತ್ತವೆ. ಈ ಸತ್ಯವನ್ನು ರೈತರಿಂದ ಮಾತ್ರವಲ್ಲ ಸಮಾಜದಿಂದಲೇ ಮರೆ ಮಾಚಲಾಗಿದೆ. ಈ ಕೆಳಗಿನ ಕೋಷ್ಟಕ ಗಮನಿಸಿ.

**ಒಂದು ಟನ್ ಕಬ್ಬಿನಿಂದ ಬರುವ ಆದಾಯವೆಷ್ಟು ಎಂಬುದನ್ನು ಪರಿಶೀಲಿಸಿ ನೋಡೋಣ.**

| ಉತ್ಪನ್ನ | ದೊರಕುವ ಪ್ರಮಾಣ | ಆದಾಯ | ಬಳಕೆ |
|---|---|---|---|
| 1. ಸಕ್ಕರೆ | 105 ರಿಂದ 120 ಕೆ ಜಿ | ರೂ 3,200ರಿಂದ 4,000 (ರೂ 33ರಿಂದ 35/ ಕೆ ಜಿ) | ನಿತ್ಯೋಪಯೋಗಿ ಆಹಾರ |
| 2. ಬಗಾಸೆ (ಕಬ್ಬಿನ ಸಿಪ್ಪೆ) | 300–340 ಕೆಜಿ (30–34%) | ರೂ 2,500ರಿಂದ 4,000 | ಇದನ್ನು ಇಂಧನವನ್ನಾಗಿ ಬಳಸಬಹುದು. ವಿದ್ಯುತ್ ಉತ್ಪಾದನೆ, ಪೇಪರ್, ಕಾರ್ಡ್‌ಬೋರ್ಡ್ ಇತ್ಯಾದಿ ತಯಾರಿಕೆಗೆ ಬಳಸಲಾಗುತ್ತೆ. |
| 3. ಮೊಲಾಯ್‌ಸಿಸ್ | 40–45 ಕೆಜಿ | ರೂ 10,000 | ಎಥನಾಲ್ ಉತ್ಪಾದನೆ, ವೈನ್ ತಯಾರಿಸಲು ಬಳಸಲಾಗುತ್ತದೆ. |
| 4. ಪ್ರೆಸ್ ಮಡ್ (ಕಬ್ಬುಹಿಂಡಿ ಮಣ್ಣು) | 30–35ಕೆಜಿ | 250 ರಿಂದ 500 ರೂಗಳು | ಜೈವಿಕಗೊಬ್ಬರ |

11ನೇ ಪುಟಕ್ಕೆ....

೩೫೦ ವರ್ಷದ ಬಂಡವಾಳವಾದ
V/s
೩೦ ವರ್ಷದ ಸಮಾಜವಾದ

# 350 ವರ್ಷಗಳಲ್ಲಿ ಬಂಡವಾಳವಾದ ಸಾಧಿಸಲಾಗದ್ದನ್ನು ಸಮಾಜವಾದಿ ಸೋವಿಯತ್ ಒಕ್ಕೂಟ ಕೇವಲ 30 ವರ್ಷಗಳಲ್ಲಿ ಸಾಧಿಸಿದ್ದು ಹೇಗೆ?

ಸುಮಾರು 25 ವರ್ಷಗಳ ಹಿಂದೆ, ನಾಗ್ಪುರದ ಹಿಂಗಣ ತಾಲ್ಲೂಕಿನ ನಲ್ಧೋಕ್ ಗ್ರಾಮದ ಕೈಗಾರಿಕಾ ಕಾರ್ಮಿಕ ಸುನಿಲ್ ಕಾಂಬ್ಳೆ ಅವರನ್ನು ಅವರ ಕೆಲಸದ ಸಮಯದ ಬಗ್ಗೆ ಕೇಳಿದಾಗ, "ನಾವು ಬೆಳಿಗ್ಗೆ 8 ಗಂಟೆಗೆ ಕಾರ್ಖಾನೆ ಪ್ರವೇಶಿಸುತ್ತೇವೆ, ಆದರೆ ಯಾವಾಗ ಕೆಲಸ ಮುಗಿಯುತ್ತದೆ ಎಂಬುದೇ ನಮಗೆ ಗೊತ್ತಿರುವುದಿಲ್ಲ. ಅದು 8 ಗಂಟೆಯೂ ಆಗಬಹುದು, 12 ಗಂಟೆಯೂ ಆಗಬಹುದು ಅಥವಾ 16 ಗಂಟೆಯೂ ಆಗಬಹುದು" ಎಂದು ಉತ್ತರಿಸಿದ್ದರು. ಆ ಕಾಲದಲ್ಲಿ ಮಹಾರಾಷ್ಟ್ರದ ಕೈಗಾರಿಕಾ ವಲಯದ ಪರಿಸ್ಥಿತಿ ಹೀಗಿತ್ತು. ಬಂಡವಾಳಶಾಹಿ ಆರ್ಥಿಕತೆಯ ಜಾಗತೀಕರಣದ ನಂತರ, ಇಂತಹ ಪರಿಸ್ಥಿತಿ ಭಾರತದಾದ್ಯಂತ ಸರ್ವೇಸಾಮಾನ್ಯವಾಗಿದೆ. ಕಾಲಗಳುರುಳುತ್ತಾ, ಖಾಯಂ ಉದ್ಯೋಗ ಬಹುತೇಕ ಕಣ್ಮರೆಯಾಗಿದೆ. ಅದರ ಬದಲಿಗೆ, ಖಾಯಂ ಕೆಲಸಗಳನ್ನೇ ಮಾಡಲು ಕಾರ್ಮಿಕರನ್ನು ಕಡಿಮೆ ಸಂಬಳಕ್ಕೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗುತ್ತಿದೆ. ಉದ್ಯೋಗದ ಭದ್ರತೆ ಇಲ್ಲದೇ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಕಾರ್ಮಿಕರು ಶ್ರಮವಹಿಸುತ್ತಿದ್ದಾರೆ. ಕಡಿಮೆ ಸಂಬಳದ ಈ ಗುತ್ತಿಗೆ ಕಾರ್ಮಿಕರ ಶೋಷಣೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇಂದು ನಿರ್ದಯವಾಗಿ ಸಾಗಿದೆ.

### ವಾರಕ್ಕೆ 70 ಅಲ್ಲ 90 ಗಂಟೆ ದುಡಿಯಿರಿ!

ಇತ್ತೀಚೆಗೆ, ಐಟಿ ದೈತ್ಯ ಇನ್ಫೋಸಿಸ್‌ನ ಸಂಸ್ಥಾಪಕ ನಾರಾಯಣ ಮೂರ್ತಿ ಅವರು ವಾರಕ್ಕೆ 70 ಗಂಟೆಗಳ ಕೆಲಸ, ಅಂದರೆ ದಿನಕ್ಕೆ 12 ಗಂಟೆಗಳು ಕಾರ್ಮಿಕರು ಕೆಲಸ ಮಾಡಬೇಕೆಂದು ಹೇಳಿಕೆ ನೀಡಿದರು. ಇನ್ಫೋಸಿಸ್‌ನ ಮಾಜಿ ಸಿಎಫ್‌ಒ ಮೋಹನ್‌ದಾಸ್ ಪೈ ಸಂಭಾಷಣೆಯೊಂದರಲ್ಲಿ, "ಭಾರತದ ಉತ್ಪಾದಕತೆ ವಿಶ್ವದಲ್ಲೇ ಅತ್ಯಂತ ಕಡಿಮೆ ಇದೆ. ಹಾಗಾಗಿ, ನಮ್ಮ ಯುವಕರು 'ಇದು ನನ್ನ ದೇಶ; ನಾನು ವಾರಕ್ಕೆ 70 ಗಂಟೆಗಳ ಕಾಲ ಕೆಲಸ ಮಾಡಲು ಇಷ್ಟಪಡುತ್ತೇನೆ' ಎಂದು ಹೇಳಬೇಕು" ಎಂದರು. ಇನ್ನೊಬ್ಬ ಪ್ರಮುಖ ಕೈಗಾರಿಕೋದ್ಯಮಿ ಮತ್ತು ಭಾರತದ ಪ್ರಮುಖ ಬಹುರಾಷ್ಟ್ರೀಯ ಸಂಸ್ಥೆಯಾದ ಲಾರ್ಸೆನ್ ಮತ್ತು ಟೂಬ್ರೊದ ಅಧ್ಯಕ್ಷರಾದ ಎಸ್.ಎನ್. ಸುಬ್ರಮಣ್ಯನ್ ಒಂದು ಹೆಜ್ಜೆ ಮುಂದೆ ಹೋಗಿ, ವಾರಕ್ಕೆ 90 ಗಂಟೆಗಳು ಕೆಲಸ ಮಾಡಬೇಕು ಎಂದಿದ್ದಾರೆ. ಭಾನುವಾರದಂದು ಕಾರ್ಮಿಕರನ್ನು ದುಡಿಸಲು ಸಾಧ್ಯವಾಗದ ಬಗ್ಗೆ ವಿಷಾದ ವ್ಯಕ್ತಪಡಿಸಿ, 90 ಗಂಟೆಗಳ ಕಾರ್ಮಿಕರನ್ನು ದುಡಿಸಲು ಸಾಧ್ಯವಾಗುತ್ತಿದ್ದರೆ ತಮಗೆ ಮತ್ತಷ್ಟು ಸಂತೋಷವಾಗುತ್ತಿತ್ತು ಎನ್ನುತ್ತಾರೆ! ಅವರೂ ವಾರದಲ್ಲಿ 90 ಗಂಟೆ ಕೆಲಸ ಮಾಡುತ್ತಾರಂತೆ! "ಮನೆಯಲ್ಲಿ ಕುಳಿತು ಏನು ಮಾಡುತ್ತೀರಿ? ನಿಮ್ಮ ಹೆಂಡತಿಯನ್ನಾಗಲಿ, ಮಕ್ಕಳನ್ನಾಗಲಿ ಎಷ್ಟು ಹೊತ್ತು ತಾನೇ ನೋಡುತ್ತೀರಿ? ಆಫೀಸಿಗೆ ಹೋಗಿ ಕೆಲಸ ಮಾಡಲು ಪ್ರಾರಂಭಿಸಿ... ನೀವು ವಿಶ್ವದಲ್ಲಿ ಅಗ್ರಸ್ಥಾನಕ್ಕೇರಬೇಕಿದ್ದರೆ, ವಾರಕ್ಕೆ 90 ಗಂಟೆಗಳ ಕಾಲ ಕೆಲಸ ಮಾಡಲೇಬೇಕು" ಎನ್ನುತ್ತಾರೆ.

### ಬಂಡವಾಳಶಾಹಿ ವರ್ಗದ ಹಿತಾಸಕ್ತಿಯನ್ನು ಕಾರ್ಯರೂಪಕ್ಕೆ ತರುತ್ತಿರುವ ಬಿಜೆಪಿ

ಭಾರತದ ಬಂಡವಾಳಶಾಹಿ ವರ್ಗ ಹಿತಾಸಕ್ತಿಯನ್ನು ಪೂರೈಸಲು, ಕೇಂದ್ರದ ಬಿಜೆಪಿ ಸರ್ಕಾರ ಈಗಾಗಲೇ ಬಹುತೇಕ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಿ, ದಿನಕ್ಕೆ 8 ಗಂಟೆಗಳ ಕೆಲಸದ ಹಳೆಯ ನಿಯಮವನ್ನು ಅಮಾನ್ಯಗೊಳಿಸಿದೆ. ಕಾರ್ಮಿಕರ ಹಿತಾಸಕ್ತಿಗಾಗಿಯೇ ಈ ಕಾನೂನುಗಳನ್ನು ದುರ್ಬಲಗೊಳಿಸಲಾಗಿದೆ ಎಂದು ಹೇಳಲಾಗುತ್ತಿದೆ! ಇವರಲ್ಲಿನ ದಾರ್ಷ್ಟ್ಯ ನೋಡಿ! ಖಾಯಂ ಉದ್ಯೋಗಗಳು ಕ್ರಮೇಣ ಕಡಿಮೆಯಾಗಿ, ಯಾವುದೇ ನಿಗದಿತ ಸಮಯದ ನಿರ್ಬಂಧನೆ ಇಲ್ಲದ, ಕಡಿಮೆ ಸಂಬಳದ ಗುತ್ತಿಗೆ ಉದ್ಯೋಗಗಳು ಇಂದಿನ ವಾಡಿಕೆಯಾಗಿವೆ.

ಇಂದು ಭಾರತದ ಅತಿದೊಡ್ಡ ಐಟಿ ಕಂಪನಿಯಾದ ಟಾಟಾ ಕನ್ಸಲ್ಟೆನ್ಸಿ ಸರ್ವಿಸ್ (ಟಿಸಿಎಸ್) ತನ್ನ ಲಾಭ ಹೆಚ್ಚುತ್ತಿದ್ದರೂ ಸಹ, ತನ್ನ ಒಟ್ಟು ಉದ್ಯೋಗಿಗಳಲ್ಲಿ ಶೇ 2% ರಷ್ಟು ಅಂದರೆ 12,000 ಖಾಯಂ ನೌಕರರನ್ನು ವಜಾಗೊಳಿಸಲು ನಿರ್ಧರಿಸಿದೆ. ಜೂನ್ 2025ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಅದು 12,760 ಕೋಟಿ ನಿವ್ವಳ ಲಾಭವನ್ನು ವರದಿ ಮಾಡಿದೆ, ಇದು ಕಳೆದ ವರ್ಷದ ಇದೇ ಅವಧಿಯ 12,104 ಕೋಟಿಗಿಂತ ಹೆಚ್ಚಾಗಿದೆ. ಈ ಕಾರ್ಪೊರೇಟ್ ದೈತ್ಯರು ಕಾರ್ಮಿಕರ ವೇತನದ ಒಂದು ದೊಡ್ಡ ಭಾಗವನ್ನು ಲಪಟಾಯಿಸಿ ದೊಡ್ಡ ಲಾಭ ಗಳಿಸುತ್ತಿರುವಾಗ, ಹೊಸದಾಗಿ ಅಭಿವೃದ್ಧಿಪಡಿಸಿದ ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನದ ಸಹಾಯದಿಂದ ತಮ್ಮ ಉತ್ಪಾದಕತೆಯನ್ನು ಇನ್ನಷ್ಟು ಹೆಚ್ಚಿಸಿಕೊಂಡಿಲ್ಲವೇ? ಒಂದೆಡೆ ಯಾವ ಹಿಂಜರಿಕೆಯೂ ಇಲ್ಲದೆ ಕೆಲಸದ ಅವಧಿ ಹೆಚ್ಚಿಸಲು ವಾದಿಸುತ್ತಿದ್ದಾರೆ, ಇನ್ನೊಂದೆಡೆ ಭಾರಿ ಪ್ರಮಾಣದಲ್ಲಿ ಸಿಬ್ಬಂದಿಗಳನ್ನು ಕೆಲಸದಿಂದ ವಜಾಗೊಳಿಸುತ್ತಿದ್ದಾರೆ. ಟಿಸಿಎಸ್ ಮಾತ್ರವಲ್ಲ, ಐಬಿಎಂ, ಇಂಟೆಲ್, ಮೈಕ್ರೋಸಾಫ್ಟ್, ಪ್ಯಾನಸೋನಿಕ್, ಟೆಸ್ಲಾ, ಸೋನಿ, ಕಾಗ್ನಿಜೆಂಟ್, ಗೂಗಲ್, ಆಕ್ಸೆಂಚರ್‌ನಂತಹ ಎಲ್ಲಾ ಜಾಗತಿಕ ಐಟಿ ದೈತ್ಯರೂ ಇದನ್ನೇ ಮಾಡುತ್ತಿದ್ದಾರೆ. ಈ ಪ್ರವೃತ್ತಿ ಹೀಗೆಯೇ ಮುಂದುವರಿದರೆ, ಕೃತಕ ಬುದ್ಧಿಮತ್ತೆ (AI) ಭವಿಷ್ಯದಲ್ಲಿ ಐಟಿ ಉದ್ಯಮಗಳ ಜೊತೆಗೆ ಇತರ ಕೈಗಾರಿಕೆಗಳಲ್ಲೂ ಭಾರಿ ನಷ್ಟಕ್ಕೆ ಕಾರಣವಾಗಲಿದೆ. ವಿಶ್ವದಾದ್ಯಂತ ಲಕ್ಷಾಂತರ ಕಾರ್ಮಿಕರು ಮತ್ತು ನೌಕರರು ತಮ್ಮ ಕೆಲಸ ಕಳೆದುಕೊಳ್ಳಲಿದ್ದಾರೆ.

ಕೃತಕ ಬುದ್ಧಿಮತ್ತೆ ಆಧುನಿಕ ವಿಜ್ಞಾನದ ವರ ಎಂದರೆ ಅದೇನೂ ಸುಳ್ಳಲ್ಲ! ನಾಗರಿಕ ಸಮಾಜವು ಈ ತಂತ್ರಜ್ಞಾನ ಬಳಸಿ ಕಾರ್ಮಿಕರ ದೈಹಿಕ ಮತ್ತು ಬೌದ್ಧಿಕ ಶ್ರಮವನ್ನು ಕಡಿಮೆ ಮಾಡಿ, ಅವರಿಗೆ ಹೆಚ್ಚಿನ ವಿರಾಮದ ಸಮಯವನ್ನು ಒದಗಿಸಬೇಕಿತ್ತು. ಆದರೆ, ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಆಧುನಿಕ ವಿಜ್ಞಾನದ ಕೊಡುಗೆಯು ವಿಶ್ವದಾದ್ಯಂತ ಲಕ್ಷಾಂತರ ಕಾರ್ಮಿಕರಿಗೆ ಮತ್ತು ನೌಕರರಿಗೆ ಶಾಪವಾಗಿದೆ. ಈ ವ್ಯವಸ್ಥೆಯು ಕಾರ್ಮಿಕರ ಜೀವನ ಮತ್ತು ಜೀವನೋಪಾಯವನ್ನು ಬಲಿಕೊಟ್ಟು ಕೇವಲ ಬಂಡವಾಳಶಾಹಿ ಏಕಸ್ವಾಮ್ಯಾಧಿಪತಿಗಳ ಗರಿಷ್ಠ ಲಾಭವನ್ನು ಖಾತರಿಪಡಿಸುತ್ತದೆ. ವಂಚನೆ ಮತ್ತು ಅನ್ಯಾಯದ ಪರಾಕಾಷ್ಠೆ ಇದು!

### ಬಂಡವಾಳವಾದದ ಕುರಿತಾಗಿ ಮಾರ್ಕ್ಸ್ ರವರ ಮುನ್ನೋಟ

ಸುಮಾರು 150 ವರ್ಷಗಳ ಹಿಂದೆ, ಕಾರ್ಮಿಕ ವರ್ಗದ ಮಹಾನ್ ನಾಯಕರಾದ ಕಾರ್ಲ್ ಮಾರ್ಕ್ಸ್ ಹೇಳಿದ್ದರು: "ಕನಿಷ್ಠ ಬಂಡವಾಳದಿಂದ ಗರಿಷ್ಠ ಮಿಗುತಾಯ ಮೌಲ್ಯ (Surplus value) ಅಥವಾ ಮಿಗುತಾಯ ಉತ್ಪನ್ನವನ್ನು ಸೃಷ್ಟಿಸುವುದು ಬಂಡವಾಳಶಾಹಿ ಉತ್ಪಾದನೆಯ ನಿರಂತರ ಗುರಿಯಾಗಿದೆ; ಕಾರ್ಮಿಕರನ್ನು ಅತಿಯಾಗಿ ದುಡಿಸಿಕೊಳ್ಳುವ ಮೂಲಕ ಈ ಫಲಿತಾಂಶವನ್ನು ಸಾಧಿಸಲಾಗದಿದ್ದರೆ, ಅತೀ ಕಡಿಮೆ ವೆಚ್ಚದಲ್ಲಿ ಮತ್ತು ಶ್ರಮಶಕ್ತಿ ಹಾಗೂ ವೆಚ್ಚಗಳನ್ನು ಉಳಿಸುವ ಮೂಲಕ ಉತ್ಪಾದನೆಯನ್ನು ವಿಸ್ತರಿಸುವುದು ಬಂಡವಾಳವಾದದ ಪ್ರವೃತ್ತಿಯಾಗಿದೆ." (ಮಿಗುತಾಯ ಮೌಲ್ಯದ ಸಿದ್ಧಾಂತಗಳು, ಅಧ್ಯಾಯ 18). ಈ ಬಂಡವಾಳಶಾಹಿ ವ್ಯವಸ್ಥೆಯು ಸಂಪೂರ್ಣವಾಗಿ ಪ್ರತಿಗಾಮಿಯಾಗಿ ಸಾಮಾಜಿಕ ಅಭಿವೃದ್ಧಿಗೆ ಅಡಚಣೆಯಾಗುವ ಮೊದಲು ಮಾರ್ಕ್ಸ್‌ರವರು ಇದನ್ನು ಹೇಳಿದ್ದರು. ಬಂಡವಾಳವಾದಕ್ಕೆ ಆಗಿನ್ನೂ ಪ್ರಗತಿಪರ ಪಾತ್ರವಿತ್ತು ಮತ್ತು ಅದು ಏಕಸ್ವಾಮ್ಯ ಮತ್ತು ಸಾಮ್ರಾಜ್ಯಶಾಹಿಯ ಹಂತವನ್ನು ಇನ್ನೂ ತಲುಪಿರಲಿಲ್ಲ. ಆದರೂ, ಕಾರ್ಮಿಕರ ನಿರ್ದಯ ಶೋಷಣೆಯನ್ನು ಆಧರಿಸಿದ ಬಂಡವಾಳವಾದದ ಆಂತರಿಕ ನಿಯಮವನ್ನು ಮಾರ್ಕ್ಸ್‌ರವರು ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು. ಆದ್ದರಿಂದಲೇ ಅಂತಹ ದಬ್ಬಾಳಿಕೆಯ ವ್ಯವಸ್ಥೆಯನ್ನು ಉರುಳಿಸಲು ಕರೆ ನೀಡಿದರು. ಇಂದು ಅವನತಿಗೊಂಡ ಬಂಡವಾಳಶಾಹಿ ವ್ಯವಸ್ಥೆಯ ಕೊನೆಯ ಹಂತದಲ್ಲಿ, ಕಾರ್ಮಿಕರ ಮೇಲಿನ ದಬ್ಬಾಳಿಕೆ ಮತ್ತು ನಿಗ್ರಹವು ಉತ್ತುಂಗಕ್ಕೇರಿದೆ. ಬಂಡವಾಳಶಾಹಿ ಮಾಲೀಕರ ಕೈಯಲ್ಲಿ, ಮಾನವಕುಲ ಮತ್ತು ನಾಗರಿಕತೆಯ ಅಭಿವೃದ್ಧಿಗೆ ಸಾಧನವಾಗಿದ್ದ ವಿಜ್ಞಾನವು ಇಂದು ಸಾಮಾಜಿಕ ಪ್ರಗತಿಗೆ ಅಡ್ಡಿಪಡಿಸಲು ಮತ್ತು ಲಕ್ಷಾಂತರ ಜನರನ್ನು ಮತ್ತಷ್ಟು ಬಡತನಕ್ಕೆ ನೂಕಲು ದುರುಪಯೋಗವಾಗುತ್ತಿದೆ, ಇದು ನಾಗರಿಕತೆಗೇ ಅಪಾಯವನ್ನುಂಟುಮಾಡುತ್ತಿದೆ.

### 8 ಗಂಟೆಗಳ ದುಡಿಮೆ

1880ರ ದಶಕದಲ್ಲಿ ದಿನಕ್ಕೆ 10–16 ಗಂಟೆಗಳ ಕಠಿಣ ದುಡಿಮೆಯ ವಿರುದ್ಧ ಕಾರ್ಮಿಕರ ರಕ್ತಸಿಕ್ತ ಹೋರಾಟದ ಪರಿಣಾಮವಾಗಿ ದಿನಕ್ಕೆ 8 ಗಂಟೆಗಳ ಕೆಲಸದ ಬೇಡಿಕೆಯನ್ನು ಸಾಧಿಸಲಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಮೇ 1, 1880 ರಿಂದು 8 ಗಂಟೆಗಳ ಕೆಲಸದ ದಿನವನ್ನು ಜಾರಿಗೊಳಿಸಲು ಐತಿಹಾಸಿಕ ಚಳುವಳಿಯು ಪ್ರಾರಂಭವಾಯಿತು, ಅದು ದಿನ ದಿನಕ್ಕೆ ತೀವ್ರಗೊಂಡು ಮೇ 4, 1886ರಂದು, ಶಿಕಾಗೋದ ಹೇ ಮಾರ್ಕೆಟ್ನಲ್ಲಿ ನಡೆದ ರ‍್ಯಾಲಿಯ ಸಂದರ್ಭದಲ್ಲಿ ಕಾರ್ಮಿಕರು ಮತ್ತು ಪೊಲೀಸರ ನಡುವೆ ಘರ್ಷಣೆ ಸಂಭವಿಸಿ ಅನೇಕರು ಅಸು ನೀಗಿದರು. 1889 ರಲ್ಲಿ ಕಮ್ಯುನಿಸ್ಟ್ ಪಕ್ಷಗಳ ಎರಡನೇ ಅಂತರರಾಷ್ಟ್ರೀಯ ಸಭೆಯ ನಿರ್ಧಾರದ ಪ್ರಕಾರ, ಮೇ 1 ಅನ್ನು ಐತಿಹಾಸಿಕ 'ಮೇ ದಿನ' ಅಥವಾ 'ಅಂತರರಾಷ್ಟ್ರೀಯ ಕಾರ್ಮಿಕರ ದಿನ' ಎಂದು ಆಚರಿಸಲಾಗುತ್ತದೆ. ಹೀಗಾಗಿ, 8 ಗಂಟೆಗಳ ಕೆಲಸದ ದಿನವು ಕಾರ್ಮಿಕರ ಕಠಿಣ ಹೋರಾಟದಿಂದ ಗಳಿಸಿದ ಹಕ್ಕು. ಆದರೆ ಈಗ ಬಂಡವಾಳಶಾಹಿ–ಸಾಮ್ರಾಜ್ಯಶಾಹಿಗಳು ಕಾರ್ಮಿಕರನ್ನು ಇನ್ನಷ್ಟು ಕ್ರೂರವಾಗಿ ಶೋಷಣೆ ಮಾಡುವ ಉದ್ದೇಶದಿಂದ ಆ ಹಕ್ಕನ್ನು ಬಹಿರಂಗವಾಗಿ ಮೊಟಕುಗೊಳಿಸುತ್ತಿದ್ದಾರೆ.

### ಸಮಾಜವಾದಿ ಸೋವಿಯತ್ ಒಕ್ಕೂಟದ ಸ್ಥಿತಿ

ಮಾರ್ಕ್ಸ್ ಅವರು ಬಂಡವಾಳಶಾಹಿ ಸಮಾಜವು ಸಮಾಜವಾದಿ ಸಮಾಜವಾಗಿ ಪರಿವರ್ತನೆಗೊಳ್ಳುವ ಅನಿವಾರ್ಯತೆಯನ್ನು ಬಂಡವಾಳಶಾಹಿ ಸಮಾಜದ ಆರ್ಥಿಕ ಚಲನೆಯ ನಿಯಮದ ಮೂಲಕವೇ ತೋರಿಸಿಕೊಟ್ಟರು. (ವಿ.ಐ. ಲೆನಿನ್ ಸಮಗ್ರ ಕೃತಿಯಲ್ಲಿ ಉಲ್ಲೇಖಿಸಲಾಗಿದೆ). ಅಂದರೆ ಬಂಡವಾಳವಾದದ ಪ್ರಗತಿಯ ನಿಯಮದ ಪ್ರಕಾರ ಸಮಾಜವಾದದ ಐತಿಹಾಸಿಕ ಸಾಧ್ಯತೆಯು ಅದರ ಗರ್ಭದಿಂದಲೇ ಹೊರಹೊಮ್ಮುತ್ತದೆ. ಮಾರ್ಕ್ಸ್ ಅವರ ಮುನ್ನೋಟ ನೂರಕ್ಕೆ ನೂರು ನಿಜವೆಂದು ಸಾಬೀತುಪಡಿಸುತ್ತಾ, ಮಹಾನ್ ಲೆನಿನ್ ಅವರ ನಾಯಕತ್ವದಲ್ಲಿ 1917 ರಲ್ಲಿ ಐತಿಹಾಸಿಕ ನವೆಂಬರ್ ಕ್ರಾಂತಿಯ ನಂತರ ಸಮಾಜವಾದಿ ಸೋವಿಯತ್ ಒಕ್ಕೂಟವನ್ನು ಸ್ಥಾಪಿಸಲಾಯಿತು. ಮಾನವನಿಂದ ಮಾನವನ ಎಲ್ಲ ಶೋಷಣೆಯನ್ನು ಕೊನೆಗಾಣಿಸಲು ಕಾರ್ಮಿಕ ವರ್ಗದ ರಾಜ್ಯವನ್ನು ಸ್ಥಾಪಿಸಲಾಯಿತು. ಕ್ರಾಂತಿಯ ಮೊದಲು ಝಾರನ ಶೋಷಣೆಯಡಿ ಹಾಗೂ ತದನಂತರ 1917 ಫೆಬ್ರವರಿಯಿಂದ ನವೆಂಬರ್ ವರೆಗೆ ರಷ್ಯಾದ ಬಂಡವಾಳಶಾಹಿಗಳ ಸಂಕ್ಷಿಪ್ತ ಆಳ್ವಿಕೆಯಡಿ ರಷ್ಯಾದ ಕೈಗಾರಿಕಾ ಕಾರ್ಮಿಕರು ದಿನಕ್ಕೆ 12–13 ಗಂಟೆಗಳು ಅಥವಾ ಅದಕ್ಕೂ ಹೆಚ್ಚು ದುಡಿಯಬೇಕಿತ್ತು. ಬಟ್ಟೆ ಕಾರ್ಖಾನೆಗಳಲ್ಲಿ 15–16 ಗಂಟೆಗಳವರೆಗೆ ಅತ್ಯಂತ ಅಮಾನವೀಯ ಪರಿಸ್ಥಿತಿಗಳಲ್ಲಿ ಕಾರ್ಮಿಕರ ಶೋಷಣೆ ನಡೆಯುತ್ತಿತ್ತು. ನಿಯಮಿತವಾಗಿ ದೊರಕದ, ತೀರಾ ಕಡಿಮೆ ಸಂಬಳಕ್ಕೆ ಕಾರ್ಮಿಕರು ಜೀವ ತೇಯ್ದು ದುಡಿಯಬೇಕಿತ್ತು. ಅಪೌಷ್ಟಿಕತೆಯಿಂದ ಸಾವು ಸಾಮಾನ್ಯವಾಗಿತ್ತು. ಆದರೆ ಸಮಾಜವಾದಿ ಕ್ರಾಂತಿಯ ನಂತರ ಕಾರ್ಮಿಕರ ಸ್ಥಿತಿಯು ಮೂಲಭೂತವಾಗಿ ಬದಲಾಯಿತು. ಸೋವಿಯತ್ ಒಕ್ಕೂಟದಲ್ಲಿ, ಕೆಲಸದ ಅವಧಿಯನ್ನು ದಿನಕ್ಕೆ 8 ಗಂಟೆಗಳು ಮತ್ತು ವಾರಕ್ಕೆ 6 ದಿನಗಳು ಎಂದು ನಿರ್ಧರಿಸಲಾಯಿತು. 1926 ರಲ್ಲಿ ಕೆಲಸದ ಅವಧಿಯನ್ನು 71/2 ಗಂಟೆಗಳಿಗೆ ಇಳಿಸಲಾಯಿತು ಮತ್ತು 1929 ರಲ್ಲಿ ಅದನ್ನು 7 ಗಂಟೆಗಳಿಗೆ ಮತ್ತು ವಾರಕ್ಕೆ 5 ದಿನಗಳಿಗೆ ಇಳಿಸಲಾಯಿತು. ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಸಮಾಜವಾದಿ ಸೋವಿಯತ್ ರಾಜ್ಯದ ನಿರ್ಧಾರವನ್ನು ಎತ್ತಿಹಿಡಿಯುತ್ತಾ, ಮಹಾನ್ ಸ್ಟಾಲಿನ್ 1929ರಲ್ಲಿ ಪಕ್ಷದ ಸಭೆಯಲ್ಲಿ, "ದಿನಕ್ಕೆ 7 ಗಂಟೆಗಳ ದುಡಿಮೆ. ಇದು ಇತ್ತೀಚಿನ ದಿನಗಳಲ್ಲಿ ನಮ್ಮ ಪಕ್ಷ ಕೈಗೊಂಡ ಅತ್ಯಂತ ಕ್ರಾಂತಿಕಾರಿ ಕ್ರಮ ಎಂಬುವುದರಲ್ಲಿ ಯಾವ ಸಂಶಯವೂ ಇಲ್ಲ" ಎಂದು ಘೋಷಿಸಿದರು.

### 20 ವರ್ಷಗಳಲ್ಲೇ ಅಮೆರಿಕವನ್ನು ಹಿಂದಿಕ್ಕಿದ ಸೋವಿಯತ್ ರಷ್ಯಾ

ಯೋಜಿತ ಸಮಾಜವಾದಿ ಆರ್ಥಿಕತೆಯಿಂದಾಗಿ, ಸೋವಿಯತ್ ಒಕ್ಕೂಟದಲ್ಲಿ ಕೈಗಾರಿಕೀಕರಣದ ಗತಿ ಬದಲಾಯಿತು. ಕೆಲವೇ ವರ್ಷಗಳಲ್ಲಿ, ಸೋವಿಯತ್ ಒಕ್ಕೂಟದಲ್ಲಿ ನಿರುದ್ಯೋಗವು ಸಂಪೂರ್ಣವಾಗಿ ನಿರ್ಮೂಲನೆಯಾಯಿತು. ಇಡೀ ಬಂಡವಾಳಶಾಹಿ ಜಗತ್ತು 'ಮಹಾ ಆರ್ಥಿಕ ಕುಸಿತ'ದಿಂದ ಬಳಲುತ್ತಿದ್ದಾಗ ಮತ್ತು ಉತ್ಪಾದನಾ ಸಾಮರ್ಥ್ಯವು ಬಹುಪಾಲು ನಿಷ್ಕ್ರಿಯವಾಗಿದ್ದಾಗ, ಸೋವಿಯತ್ ಒಕ್ಕೂಟ ವೇಗವಾಗಿ ಮುನ್ನಡೆಯುತ್ತಿತ್ತು. 1ನೇ ಮಹಾಯುದ್ಧದ ಆರಂಭಕ್ಕೆ ಹೋಲಿಸಿದರೆ, ಸೋವಿಯತ್ ರಷ್ಯಾದಲ್ಲಿ ಕೈಗಾರಿಕಾ ಉತ್ಪಾದನೆಯು 10 ವರ್ಷಗಳ ಅವಧಿಯಲ್ಲಿ, ಅಂದರೆ 1922 ರಿಂದ 1932 ರವರೆಗೆ 334% ರಷ್ಟು ಹೆಚ್ಚಾಗಿತ್ತು. ಸೋವಿಯತ್ ಒಕ್ಕೂಟದ ಕಾರ್ಮಿಕರ ಸಂಬಳವು 5 ವರ್ಷಗಳ ಅವಧಿಯಲ್ಲಿ (1928–1932) 4 ಪಟ್ಟು ಹೆಚ್ಚಾಯಿತು. ಉದಾತ್ತ ಸಮಾಜವಾದಿ ಸಿದ್ಧಾಂತದಿಂದ ಪ್ರೇರೇಪಿತರಾಗಿದ್ದ ಕಾರ್ಮಿಕ ವರ್ಗ ತಮ್ಮ ಪ್ರಾಮಾಣಿಕತೆ, ಸೃಜನಶೀಲತೆಯಿಂದ ಅಸಾಧ್ಯವಾದದ್ದನ್ನು ಮಾಡಿ ತೋರಿಸಿದರು.

### ಶ್ರಮ ಹಾಗೂ ವರ್ಗವಿಭಜಿತ ವ್ಯವಸ್ಥೆ

ವರ್ಗ–ವಿಭಜಿತ ಸಮಾಜವು ಶ್ರಮವನ್ನು ಕಾರ್ಮಿಕರಿಂದ ಪ್ರತ್ಯೇಕಿಸುತ್ತದೆ. ಜೀವನೋಪಾಯಕ್ಕಾಗಿ ಶ್ರಮ ಅನಿವಾರ್ಯತೆಯಾಗುತ್ತದೆ. ದಮನಕಾರಿ ವ್ಯವಸ್ಥೆಯಾದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರಮ ತನ್ನ ಘನತೆ ಕಳೆದುಕೊಳ್ಳುತ್ತದೆ.

'ದಮನಕಾರಿ ವ್ಯವಸ್ಥೆಯಲ್ಲಿ ಶ್ರಮವು ಶ್ರಮಿಕನಿಂದ ಬೇರ್ಪಟ್ಟು ಅವನು ಉತ್ಪಾದಿಸುವ ವಸ್ತುವಿನಲ್ಲಿ ಅಭಿವ್ಯಕ್ತವಾಗುತ್ತದೆ. ಹೀಗೆ ಶ್ರಮವು ಉತ್ಪಾದಿಸುವ ವಸ್ತುವಿನ ರೂಪ ಪಡೆದುಕೊಳ್ಳುತ್ತದೆ' ಎಂದು ಮಾರ್ಕ್ಸ್ ವಿವರಿಸುತ್ತಾರೆ. (1844ರ ಆರ್ಥಿಕ ಮತ್ತು ತಾತ್ವಿಕ ಹಸ್ತಪ್ರತಿಗಳು, ಪುಟ 68)

ಪರಿಣಾಮವಾಗಿ, ಶ್ರಮವನ್ನು ಶ್ರಮಿಕನ ಮೇಲೆ ಹೇರುವಂತಾಗುತ್ತದೆ. ಆದ್ದರಿಂದಲೇ ಕಾರ್ಮಿಕನಿಗೆ ಕೆಲಸದಲ್ಲಿರುವಾಗ ನೆಮ್ಮದಿ ಕಾಣುವುದಿಲ್ಲ ಬದಲಾಗಿ ಕೆಲಸವಿಲ್ಲದಿದ್ದಾಗ ನೆಮ್ಮದಿಯಾಗಿರುತ್ತಾನೆ.

ಆದರೆ, ಕಾರ್ಮಿಕನು ತನ್ನ ಶ್ರಮವನ್ನು ಪ್ರೀತಿಸುವ ಹೊಸ ಪರಿಸ್ಥಿತಿಯನ್ನು ಸಮಾಜವಾದವು ಸೃಷ್ಟಿಸುತ್ತದೆ. ಶ್ರಮವನ್ನು ಯಾರೊಬ್ಬ ಮಾಲೀಕನು ಅವನ ಲಾಭಕ್ಕಾಗಿ ಲಪಟಾಯಿಸುತ್ತಿಲ್ಲ, ಬದಲಾಗಿ ಸಮಾಜವಾದಿ ನಿರ್ಮಾಣದ ಕೇಂದ್ರ ಬಿಂದುವಾಗಿರುವುದು ಅವನಲ್ಲಿ ಸ್ಫೂರ್ತಿ ತುಂಬುತ್ತದೆ. ತನ್ನನ್ನೂ ಸೇರಿದಂತೆ ಇಡೀ ಸಮಾಜದ ಹಿತಕ್ಕಾಗಿ ಭೌತಿಕ ಸಂಪತ್ತನ್ನು ಸೃಷ್ಟಿಸುತ್ತಿದ್ದೇನೆ ಎಂದು ಕಾರ್ಮಿಕರು ಅರಿತುಕೊಳ್ಳುತ್ತಾರೆ. ಉತ್ಪಾದನೆ ಯಥೇಚ್ಛವಾದಾಗಲೇ ಶ್ರಮವನ್ನು ಈ ಸಂಕೋಲೆಯಿಂದ ಬಿಡಿಸುವುದು ಸಾಧ್ಯ. ಇದರೊಂದಿಗೆ ಸಮಾಜದ ಸಾಂಸ್ಕೃತಿಕ ಮಟ್ಟ ಹಾಗೂ ಶ್ರಮ ಕುರಿತಾದ ದೃಷ್ಟಿಕೋನ ಬದಲಾಗಬೇಕು, ದೈಹಿಕ – ಬೌದ್ಧಿಕ ಶ್ರಮ, ಉದ್ಯಮ– ಕೃಷಿ, ಪಟ್ಟಣ ಮತ್ತು ಹಳ್ಳಿ, ಇಂತಹ ಭೇದಗಳು ಸಮಾಜದಿಂದ ತೊಲಗಬೇಕು.

### ಸೋವಿಯತ್ ಸಮಾಜವಾದ ಸೃಷ್ಟಿಸಿದ ಅದ್ಭುತಗಳು

1935ರಲ್ಲಿ ಅಲೆಕ್ಸಿ ಸ್ಟಾಖಾನೋವ್ ಎಂಬ ಗಣಿ ಕಾರ್ಮಿಕ ಒಂದು ಪಾಳಿಯಲ್ಲಿ 102 ಟನ್ ಕಲ್ಲಿದ್ದಲನ್ನು, ಅಂದರೆ ಆತ ದಿನವೂ ಉತ್ಪಾದಿಸುವುದರ 14 ಪಟ್ಟು ಗಣಿಗಾರಿಕೆ ಮಾಡಿ ದಾಖಲೆ ನಿರ್ಮಿಸಿದ. ಈ ಅಸಾಧಾರಣ ಸಾಧನೆಯು ಅನೇಕ ಕಾರ್ಮಿಕರನ್ನು ಪ್ರೇರೇಪಿಸಿತು. ಈ ಚಳುವಳಿಯಿಂದ ಕಲ್ಲಿದ್ದಲು ಉತ್ಪಾದನೆಯಲ್ಲಿ ಎಂದಿಲ್ಲದ ದಾಖಲೆ ಸೃಷ್ಟಿಯಾಯಿತು. ಶ್ರಮದ ಘನತೆಯು ಗೌರವಿಸಲ್ಪಟ್ಟಾಗ ಕಾರ್ಮಿಕರು ಎಂತಹ ಸಾಧನೆ ಮಾಡಬಲ್ಲರು ಎಂಬುದಕ್ಕೆ ಇದೊಂದು

10ನೇ ಪುಟಕ್ಕೆ....

# ನುಸುಳುಕೋರರು ಭಾರತವನ್ನೇ ಬದಲಿಸುತ್ತಿದ್ದಾರೆ ಎಂಬ ಹುಸಿ ಸಂಕಥನ

ಹಿನ್ನೆಲೆ

ಪ್ರಧಾನಿ ಶ್ರೀಮಾನ್ ನರೇಂದ್ರ ಮೋದಿ, ಅಮಿತ್ ಶಾ ಸೇರಿದಂತೆ ಬಿಜೆಪಿಯ ಸ್ಥಳೀಯ ನಾಯಕರವರೆಗೆ ಈಗ ಎಲ್ಲರೂ ಮತ್ತೆ ವಿದೇಶೀ ನುಸುಳುಕೋರರ ಬಗ್ಗೆ ಮಾತನಾಡುತ್ತಿದ್ದಾರೆ. ಪ್ರಧಾನಿ ಮೋದಿಯವರು ತಮ್ಮ ಆಗಸ್ಟ್ 15ರ ಭಾಷಣದಲ್ಲಿ ಹೇಳಿದ್ದಾರೆ: "ನಾನು ಒಂದು ಆತಂಕದ, ಒಂದು ಸವಾಲಿನ ಕುರಿತು ದೇಶವನ್ನು ಎಚ್ಚರಿಸಲು ಬಯಸುತ್ತೇನೆ. ಒಂದು ಯೋಜಿತ ಪಿತೂರಿಯ ಮೂಲಕ ದೇಶದ ಜನಸಂಖ್ಯಾ ವಿತರಣೆಯನ್ನು ಬದಲಾಯಿಸಲಾಗುತ್ತಿದೆ, ಒಂದು ಹೊಸ ಬಿಕ್ಕಟ್ಟಿನ ಬೀಜಗಳನ್ನು ಬಿತ್ತಲಾಗುತ್ತಿದೆ. ನನ್ನ ದೇಶದ ಯುವಜನರ ಜೀವನಾಧಾರವನ್ನು ನುಸುಳುಕೋರರು ಕಸಿಯುತ್ತಿದ್ದಾರೆ. ನುಸುಳುಕೋರರು ನನ್ನ ದೇಶದ ಸೋದರಿಯರ ಮತ್ತು ಹೆಣ್ಣು ಮಕ್ಕಳ ಮೇಲೆ ದಾಳಿ ಮಾಡುತ್ತಿದ್ದಾರೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಈ ನುಸುಳುಕೋರರು ಮುಗ್ಧ ಆದಿವಾಸಿಗಳನ್ನು ದಿಕ್ಕುತಪ್ಪಿಸಿ ಅವರ ಭೂಮಿಯನ್ನು ಕಿತ್ತುಕೊಳ್ಳುತ್ತಿದ್ದಾರೆ.... ಗಡಿ ಪ್ರದೇಶಗಳಲ್ಲಿ ಇಂತಹ ಜನಸಂಖ್ಯಾ ಬದಲಾವಣೆ ಆದಾಗ ಅದು ದೇಶದ ಭದ್ರತೆಗೆ ಅಪಾಯ ಒಡ್ಡುತ್ತದೆ... ಆದ್ದರಿಂದ, ಒಂದು ಹೈ ಪವರ್ ಡೆಮಾಗ್ರಫಿ ಮಿಷನ್ ಆರಂಭಿಸಲು ನಾವು ನಿರ್ಧರಿಸಿದ್ದೇವೆ." ಅಂದರೆ, ಬಿಜೆಪಿ ಮತ್ತು ಕೇಂದ್ರ ಸರ್ಕಾರ ಎಷ್ಟರಮಟ್ಟಿಗೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದೆ ಎಂಬುದು ಗೊತ್ತಾಗುತ್ತದೆ.

ಆದರೆ ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷ ಇಂತಹ ಗಂಭೀರ ವಿಷಯವನ್ನು ನಿಭಾಯಿಸುವಾಗ, ಇಂತಹ ಹೇಳಿಕೆಗಳನ್ನು ಸಮರ್ಥಿಸಲು ಬೇಕಾದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇಲ್ಲವಾದಲ್ಲಿ ಇದು ಕೂಡ ಎಷ್ಟೋ ವಿವಾದಗಳಂತೆ ಒಂದು ಚುನಾವಣಾ ವಿಷಯವಷ್ಟೇ ಆಗುತ್ತದೆ. ಬಿಹಾರ, ಪಶ್ಚಿಮ ಬಂಗಾಳ, ಜಾರ್ಖಂಡ್, ಅಸ್ಸಾಂ, ಕೇರಳ ಮುಂತಾದ ರಾಜ್ಯಗಳಲ್ಲಿ ಚುನಾವಣೆಗಳು ಬಂದಾಗ ಈ ವಿವಾದ ಮತ್ತೆ ಮತ್ತೆ ಮುನ್ನೆಲೆಗೆ ತರುತ್ತಿರುವುದನ್ನು ನೋಡಿದರೆ ಈ ಸಂಶಯ ಮತ್ತಷ್ಟು ಗಟ್ಟಿಯಾಗುತ್ತದೆ.

### ಗಂಟೆಗೊಂದು ಗಳಿಗೆಗೊಂದು ಮಾತೇಕೆ?

ದಶಕಗಳಿಂದಲೂ ಸಂಘ ಪರಿವಾರ ಮತ್ತು ಬಿಜೆಪಿ ಈ ವಿಷಯದಲ್ಲಿ ಏನನ್ನು ಹೇಳುತ್ತಾ ಬಂದಿದೆ ಎಂಬುದನ್ನು ಸ್ವಲ್ಪ ಪರಿಶೀಲಿಸೋಣ. 2002ರಲ್ಲಿ ಅಂದಿನ ಉಪ ಪ್ರಧಾನಿ ಮತ್ತು ಬಿಜೆಪಿಯ ಹಿರಿಯ ನಾಯಕ ಶ್ರೀ ಎಲ್.ಕೆ.ಅಡ್ವಾಣಿಯವರು, ಪಶ್ಚಿಮ ಬಂಗಾಳ ಒಂದರಲ್ಲೇ 2 ಕೋಟಿ ನುಸುಳುಕೋರರು ಇದ್ದಾರೆ ಎಂದು ಹೇಳಿದ್ದರು. 2001ರ ಜನಗಣತಿ ಪ್ರಕಾರ ಪ.ಬಂಗಾಳದ ಜನಸಂಖ್ಯೆ 8.01 ಕೋಟಿ. ಅಂದರೆ ರಾಜ್ಯದ ಶೇ. 25ರಷ್ಟು ಮಂದಿ ನುಸುಳುಕೋರರು ಎಂದು ಅವರು ಹೇಳಿದರೆ ಇದು ಕಟ್ಟುಕಥೆಯಲ್ಲವೇ? ಹೀಗೆ ಬಿಜೆಪಿ ನಾಯಕರು ಅಕ್ರಮ ವಲಸಿಗರ ಕುರಿತು ದಶಕಗಳಿಂದ ವಿರೋಧಾಭಾಸದ ಸಂಖ್ಯೆಗಳನ್ನು ಕೊಡುತ್ತಲೇ ಬಂದಿದ್ದಾರೆ. ಇದೇ ಆಗಸ್ಟ್ 22ರಂದು, ಕೊಲ್ಕತ್ತಾದಲ್ಲಿ ಮಾತನಾಡುತ್ತಾ, ನುಸುಳುಕೋರರು ದೇಶಕ್ಕೇ ಅಪಾಯ ಎಂದು ಹೇಳಿದ್ದರು. ಅದೃಷ್ಟವಶಾತ್ ಅವರು ಯಾವುದೇ ಸಂಖ್ಯೆಯನ್ನು ಹೇಳಲಿಲ್ಲ! ಬಿಜೆಪಿ ಶಾಸಕ ಮತ್ತು ಪ.ಬಂಗಾಳದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರು ರಾಜ್ಯದಲ್ಲಿ 70 ಲಕ್ಷ ರೊಹಿಂಗ್ಯಾ ನಿರಾಶ್ರಿತರಿದ್ದಾರೆ ಎಂದು ಹೇಳಿದ್ದರು. ಮ್ಯಾನ್ಮಾರ್ ದೇಶದಲ್ಲಿ ಅಲ್ಲಿನ ಆಳುವ ಪ್ರಭುತ್ವದಿಂದ ದೌರ್ಜನ್ಯಕ್ಕೆ ಒಳಗಾದ, ಬಲವಂತವಾಗಿ ಹೊರಗೆ ತಳ್ಳಲ್ಪಟ್ಟು ನಿರಾಶ್ರಿತರಾದ ರೊಹಿಂಗ್ಯಾ ಜನಗಳ ಒಟ್ಟು ಸಂಖ್ಯೆಯೇ 10 ಲಕ್ಷ ಮಾತ್ರ. ಯಾವುದೇ ದೇಶವೆಂಬುದು ಇಲ್ಲದೆ ಉಳಿವಿಗಾಗಿ ಹೋರಾಡುತ್ತಿರುವ ಇವರಿಗಾಗಿ ಮಾನವೀಯತೆ ಇರುವವರ ಮನಸ್ಸು ಮಿಡಿಯುತ್ತದೆ. ಇವರು ತಮ್ಮ ಮೇಲಿನ ದೌರ್ಜನ್ಯ ಎದುರಿಸಲಾಗದೆ ಬಾಂಗ್ಲಾದೇಶ, ಮಲೇಶಿಯಾ, ಥೈಲ್ಯಾಂಡ್, ಇಂಡೋನೇಷ್ಯಾ, ಭಾರತ ಮೊದಲಾದ ದೇಶಗಳಿಗೆ ಪಲಾಯನ ಮಾಡಿದ್ದಾರೆ. ಅಧಿಕೃತ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ ಸುಮಾರು 40,000 ರೊಹಿಂಗ್ಯಾ ನಿರಾಶ್ರಿತರಿದ್ದು, ಅವರಲ್ಲಿ 1,000 ದಿಂದ 1,200ರಷ್ಟು ಪ.ಬಂಗಾಳದಲ್ಲಿದ್ದಾರೆ. ಹಾಗಾದರೆ 70 ಲಕ್ಷ ಎಲ್ಲಿಂದ ಬಂತು?

ಗೃಹ ಸಚಿವ ಅಮಿತ್ ಶಾ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಕೂಡ ಪದೇ ಪದೇ ನುಸುಳುಕೋರರೆಂಬ ಗುಮ್ಮನ ಬಗ್ಗೆ ಹೇಳುತ್ತಾ ಬಂದಿದ್ದಾರೆ. ಆದರೆ ಬಿಜೆಪಿ ಸರ್ಕಾರದ ಅಧಿಕೃತ ಅಂಕಿ ಅಂಶಗಳು ಬೇರೆಯದೇ ಹೇಳುತ್ತವೆ. 2024ರಲ್ಲಿ ಜಾರ್ಖಂಡ್ ಉಚ್ಚ ನ್ಯಾಯಾಲಯಕ್ಕೆ ಕೇಂದ್ರ ಗೃಹ ಸಚಿವಾಲಯ ಸಲ್ಲಿಸಿದ ಅಫಿಡವಿತ್ ನಲ್ಲಿ, ಬಾಂಗ್ಲಾದೇಶಿ ನುಸುಳುಕೋರರಿಂದ ರಾಜ್ಯದ ಜನಸಂಖ್ಯಾ ವಿತರಣೆಯಲ್ಲಿ ಭಾರಿ ಅಸಮತೋಲನ ಬಂದಿದೆ ಎಂಬ ಬಿಜೆಪಿ ನಾಯಕರ ವಾದಕ್ಕೆ ವಿರುದ್ಧವಾದ ವಿವರಣೆ ಇದೆ. ರಾಜ್ಯದ ಜನರ ವಲಸೆ ಇದಕ್ಕೆ ಕಾರಣವೇ ಎಂದು ಅಧ್ಯಯನ ನಡೆಯುತ್ತಿದೆ ಎಂದು ಅದರಲ್ಲಿ ಹೇಳಲಾಗಿತ್ತು. ನವೆಂಬರ್ 2024ರಲ್ಲಿ ಜಾರ್ಖಂಡ್ ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ನುಸುಳುಕೋರರ ಸಮಸ್ಯೆಯೇ ಬಿಜೆಪಿಗೆ ಮುಖ್ಯ ಚುನಾವಣಾ ವಿಷಯವಾಗಿತ್ತು. ವಿಪರ್ಯಾಸವೆಂದರೆ 2000ನೇ ಇಸವಿಯಲ್ಲಿ ಜಾರ್ಖಂಡ್ ರಾಜ್ಯ ರಚನೆಯಾದ ನಂತರ 17 ವರ್ಷಗಳ ಕಾಲ ಅಲ್ಲಿ ಬಿಜೆಪಿಯೇ ಆಳ್ವಿಕೆ ನಡೆಸಿತ್ತು. ಆಗ ಬಿಜೆಪಿ ಈ ವಿಷಯವನ್ನು ಎತ್ತಲೇ ಇಲ್ಲ ! ಆದರೆ ಜೆಎಂಎಂ ಅಧಿಕಾರಕ್ಕೆ ಬರುತ್ತಿದ್ದಂತೆ, ಬಾಂಗ್ಲಾದೇಶದ ಅಕ್ರಮ ವಲಸಿಗರು ಜಾರ್ಖಂಡ್‌ನಲ್ಲಿ ನೆಲೆಸಿ, ಅಲ್ಲಿನ ಸಂತಾಲಿ ಮಹಿಳೆಯರನ್ನು ಮದುವೆಯಾಗುತ್ತಿದ್ದಾರೆ ಎಂದು ಅರಚಾಡಲು ಆರಂಭಿಸಿತು.

ಜುಲೈ 2025ರಲ್ಲಿ ಸುವೇಂದು ಅಧಿಕಾರಿ ಅವರು, ತಮ್ಮ ರಾಜ್ಯದ ಮತದಾರರ ಪಟ್ಟಿಯಲ್ಲಿ 1.25 ಕೋಟಿ ರೊಹಿಂಗ್ಯಾ ನಿರಾಶ್ರಿತರು ಸೇರ್ಪಡೆಯಾಗಿದ್ದಾರೆ, ಹಾಗಾಗಿ ಇದರ ಪರಿಹಾರಕ್ಕೆ ಮತದಾರರ ಪಟ್ಟಿಯ ಎಸ್‌ಐಆರ್ (ವಿಶೇಷ ಸಮಗ್ರ ಪರಿಷ್ಕರಣೆ) ಬೇಕು ಎಂದು ಒತ್ತಾಯಿಸಿದ್ದರು. 2023ರ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಪ್ರಕಾರ ವಿದೇಶೀಯರ ಕಾಯಿದೆಯಡಿಯಲ್ಲಿ 2290 ಪ್ರಕರಣಗಳು ದಾಖಲಾಗಿವೆ. ಇದರ ಒಂದು ಭಾಗ ಪ.ಬಂಗಾಳದಲ್ಲಿ ದಾಖಲಾಗಿವೆ. ಬಿಜೆಪಿ ನಾಯಕರು ಹೇಳುವ ಕೋಟಿಗಟ್ಟಲೆ ನುಸುಳುಕೋರರ ಸಂ–ಖ್ಯೆಗೂ ಇದಕ್ಕೂ ತಾಳಮೇಳ ಎಲ್ಲಿದೆ?

### ಬಿಹಾರದಲ್ಲಿ ಚುನಾವಣಾ ಆಯೋಗಕ್ಕೆ ಸಿಕ್ಕ ವಿದೇಶಿಯರೆಷ್ಟು?

ಇತ್ತೀಚೆಗೆ ನಡೆದ ಬಿಹಾರ ಚುನಾವಣೆಗೆ ಮುನ್ನ ಅಲ್ಲಿ ಮತದಾರರ ಪಟ್ಟಿಯ ಎಸ್‌ಐಆರ್ ನಡೆಸಲಾಯಿತು. ದೊಡ್ಡ ಸಂಖ್ಯೆಯ ವಿದೇಶೀ ನುಸುಳುಕೋರರು ಮತದಾರರ ಪಟ್ಟಿಯಲ್ಲಿ ಸೇರಿ–ಕೊಂಡಿದ್ದಾರೆ, ಹಾಗಾಗಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು ಪೌರತ್ವ ದಾಖಲೆ ನೀಡಬೇಕು ಎಂದು ಷರತ್ತು ವಿಧಿಸಲಾಯಿತು. ಚುನಾವಣಾ ಆಯೋಗಕ್ಕೆ ಪೌರತ್ವ ನಿರ್ಣಯಿಸುವ ಅಧಿಕಾರ ಇದೆಯೇ ಎಂಬ ಪ್ರಶ್ನೆ ಈಗ ಸರ್ವೋಚ್ಚ ನ್ಯಾಯಾಲಯದ ಮುಂದಿದೆ. ಆದರೆ ಅಷ್ಟೆಲ್ಲಾ ನಿಯಮಾವಳಿ ರೂಪಿಸಿ, ತಾನು ಭಾರೀ ದಕ್ಷತೆಯಿಂದ ಪರಿಷ್ಕರಣೆ ಮಾಡಿದ್ದೇನೆ ಎಂದು ಕೊಚ್ಚಿಕೊಂಡಿರುವ ಚುನಾವಣಾ ಆಯೋಗವು ಪೌರತ್ವದ ಕಾರಣಕ್ಕೆ ತೆಗೆದುಹಾಕಿರುವುದು ಕೇವಲ 6000 ಮತದಾರರನ್ನು ಮಾತ್ರ. (ಆಧಾರ – ದಿ ಇಕಾನಾಮಿಕ್ ಟೈಮ್ಸ್ 2.10.2025) ಇವರಲ್ಲಿ ಕೂಡ ನೈಜ ವಿದೇಶಿಯರೆಷ್ಟು, ದಾಖಲೆಗಳಿಲ್ಲದ ಅಮಾಯಕ ಬಡ ಭಾರತೀಯರೆಷ್ಟು ಎಂಬುದು ವಿಚಾರಣೆಯ ನಂತರ ಸಾಬೀತಾಗಬೇಕು.

### ಗಡಿಗಳಲ್ಲಿ ಕಾವಲಿರುವಾಗ ನುಸುಳುವಿಕೆ ಹೇಗೆ ಸಾಧ್ಯ?

ಭಾರತದ ಗಡಿಗಳನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಕಾಯುತ್ತದೆ. ಬಾಂಗ್ಲಾದೇಶದಿಂದ ಬಿಜೆಪಿ ಹೇಳುವಂತೆ ಗುಂಪುಗುಂಪಾಗಿ ವಲಸೆ ಬರುತ್ತಾರೆ ಎಂದಾದರೆ ಬಿಎಸ್‌ಎಫ್ ನಿಷ್ಕ್ರಿಯವಾಗಿದೆಯೇ, ಅಥವಾ ನುಸುಳುಕೋರರೊಂದಿಗೆ ಶಾಮೀಲಾಗಿದೆಯೇ? ಭಾರತ – ಬಾಂಗ್ಲಾ ನಡುವೆ ಸುಮಾರು 860 ಕಿ.ಮೀ.ನಷ್ಟು ಬೇಲಿರಹಿತ ಗಡಿಯಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದು 11 ವರ್ಷಗಳಾದರೂ ಇದನ್ನು ಮುಚ್ಚುವ ಪ್ರಯತ್ನ ಏಕೆ ಮಾಡಿಲ್ಲ? ಗಡಿಗಳನ್ನು ಕಾಯುವ ಜವಾಬ್ದಾರಿ ಗೃಹ ಸಚಿವಾಲಯದ್ದು, ಅಂದರೆ ಕೇಂದ್ರ ಸರ್ಕಾರ–ಕ್ಕೆ ಸೇರಿದ್ದು. ಹಾಗಾದರೆ ಇದು ಬಿಜೆಪಿ ಸರ್ಕಾರದ ವೈಫಲ್ಯವಲ್ಲವೇ? ಚುನಾವಣೆಗಳಲ್ಲಿ ವೇದಿಕೆಗಳ ಭಾಷಣಗಳಿಂದ ಗಡಿ ರಕ್ಷಣೆ ಸಾಧ್ಯವೇ?

### ಈ ಅಪಪ್ರಚಾರದ ಉದ್ದೇಶವೇನು?

ಬಿಜೆಪಿಯು ಬಾಂಗ್ಲಾದೇಶಿ ಮತ್ತು ರೊಹಿಂಗ್ಯಾ ನುಸುಳುಕೋರರ ಬಗ್ಗೆಯೇ ಏಕೆ ಮಾತನಾಡುತ್ತದೆ? ನಮ್ಮ ದೇಶದಲ್ಲಿ ಸುಮಾರು 1 ಲಕ್ಷದಷ್ಟು ಟಿಬೆಟಿಯನ್ ನಿರಾಶ್ರಿತರು ಕೂಡ ಇದ್ದಾರೆ. ಅವರ ವಿರುದ್ಧ ಎಂದಾದರೂ ಬಿಜೆಪಿ ಮಾತನಾಡಿದೆಯೇ? ಏಕೆಂದರೆ ಬಾಂಗ್ಲಾದೇಶ ಮತ್ತು ರೊಹಿಂಗ್ಯಾ ಜನತೆ ಬಹುತೇಕ ಮುಸ್ಲಿಮರು. ಬಾಂಗ್ಲಾದೇಶದ ಅಕ್ರಮ ವಲಸೆಯ ವಿವಾದವನ್ನೇ ಮುಂದಿಟ್ಟುಕೊಂಡು ಅಸ್ಸಾಮಿನಲ್ಲಿ ಬಿಜೆಪಿ ಎನ್‌ಆರ್‌ಸಿ ಮಾಡಿಸಿ, ಬಂಗಾಳಿ ಮಾತೃಭಾಷೆಯ ಪ್ರತಿಯೊಬ್ಬ ಮುಸ್ಲಿಮನಿಗೆ ವಿದೇಶೀಯನೆಂಬ ಹಣೆಪಟ್ಟಿ ನೀಡಿದೆ. ಅವರ ಬದುಕನ್ನು ಮೂರಾಬಟ್ಟೆ ಮಾಡಿದೆ. ಅಸ್ಸಾಮಿ ಮತ್ತು ಬಂಗಾಳಿ ಜನರ ನಡುವೆ ತೀವ್ರ ಒಡಕನ್ನು ತಂದಿದೆ. ಇದೇ ರೀತಿ ದೇಶದ ಬೇರೆ ಬೇರೆ ರಾಜ್ಯಗಳಲ್ಲಿ ಕೂಡ ಹಿಂದೂ– ಮುಸ್ಲಿಂ ವಿಭಜನೆಗೆ ಬೇಕಾದ ವಿವಾದಗಳನ್ನು ಸೃಷ್ಟಿಸಲು ಬಿಜೆಪಿ– ಸಂಘ ಪರಿವಾರ ನಿರಂತರವಾಗಿ ಪ್ರಯತ್ನಿಸುತ್ತಲೇ ಇವೆ. ಇದರಿಂದ ಜನರ ಜೀವನದ ನೈಜ ಸಮಸ್ಯೆಗಳಾದ ನಿರುದ್ಯೋಗ, ಬೆಲೆ ಏರಿಕೆ, ಬಡತನ, ಶಿಕ್ಷಣ ಮತ್ತು ಆರೋಗ್ಯ ಸೇವೆಗಳ ಕೊರತೆ ಮೊದಲಾದ ವಿಷಯಗಳು ಹಿಂದೆ ಸರಿಯುತ್ತವೆ. ಜೊತೆಗೆ ಇಂತಹ ಸಮಸ್ಯೆಗಳಿಗೆ ಅಕ್ರಮ ನುಸುಳುಕೋರರೇ ಕಾರಣ ಎಂಬ ಹುಸಿ ಗುಮ್ಮನನ್ನೂ ಜನರ ಮುಂದೆ ಇಟ್ಟಂತಾಗುತ್ತದೆ. ನಮ್ಮ ದೇಶದ ಬಂಡವಾಳಶಾಹಿ ವ್ಯವಸ್ಥೆ ತೀವ್ರವಾದ ಬಿಕ್ಕಟ್ಟಿನಲ್ಲಿ ಇರುವ ಈ ಸಂದರ್ಭದಲ್ಲಿ ಅದರ ಸೇವೆಗೈಯಲು ಟೊಂಕಕಟ್ಟಿ ನಿಂತಿರುವ ಬಿಜೆಪಿ ಪಕ್ಷ, ಜನರ ಆಕ್ರೋಶವನ್ನು ಬೇ–ರೆಡೆಗೆ ತಿರುಗಿಸಲು ಇಂತಹ ಪಿತೂರಿ ಮಾಡುತ್ತಿದೆ ಎಂಬುದು ಅರ್ಥ ಮಾಡಿಕೊಳ್ಳಲು ಕಷ್ಟವೇನಲ್ಲ. ದೇಶದ ಜನತೆ ಇಂತಹ ಭ್ರಾತೃಹಂತಕ ಕುತಂತ್ರವನ್ನು ಸೋಲಿಸಬೇಕು, ದುಡಿಯುವ ಜನರೆಲ್ಲ ಒಂದೇ ಎಂದು ಅರಿತುಕೊಂಡು ತಮ್ಮ ನೈಜ ಸಮಸ್ಯೆಗಳ ವಿರುದ್ಧ ಹೋರಾಡಲು ಸಜ್ಜಾಗಬೇಕು. ■

# ಟ್ರಂಪ್ ಹಾಗೂ ನೆತಾನ್ಯಾಹು ಇಬ್ಬರನ್ನೂ ಹಾಡಿ ಹೊಗಳಿದ ನಮ್ಮ ದೇಶದ ಪ್ರಧಾನಿ

ಪ್ರಧಾನಿ ಮೋದಿ ಅಕ್ಟೋಬರ್ 9ರಂದು ಒಂದೇ ದಿನ ಬರೊಬ್ಬರಿ 4 ಬಾರಿ ಟ್ರಂಪ್ ಗೆ ಬೆಂಬಲ ವ್ಯಕ್ತಪಡಿಸಿದರು. ಇಸ್ರೇಲ್ ಹಾಗೂ ಹಮಾಸ್ ನಡುವೆ ಮೊದಲ ಹಂತದ ಶಾಂತಿ ಮಾತುಕತೆ ಕೊನೆಗೊಂಡ ನಂತರ ಬೆಳಗ್ಗಿನ ಜಾವ ಟ್ವೀಟ್ ಮಾಡುವುದರೊಂದಿಗೆ ಪ್ರಾರಂಭವಾದದ್ದು ರಾತ್ರಿ ಅಭಿನಂದನಾ ಕರೆಯೊಂದಿಗೆ ಮುಕ್ತಾಯವಾಯಿತು. ಸಂಜೆ ಮೋದಿರವರು X ನಲ್ಲಿ "ನನ್ನ ಸ್ನೇಹಿತ ಟ್ರಂಪ್" ಅವರೊಂದಿಗೆ ಮಾತುಕತೆ ನಡೆಸಿ, "ಐತಿಹಾಸಿಕ ಗಾಜಾ ಶಾಂತಿ ಯೋಜನೆಯ ಯಶಸ್ಸಿಗೆ ಅಭಿನಂದನೆ ತಿಳಿಸಿದ್ದೇನೆ" ಎಂದು ಬರೆದುಕೊಂಡರು. "ಟ್ರಂಪ್ ಅವರ ಮುಂದಾಳತ್ವಕ್ಕೆ ಎಲ್ಲರೂ ಬೆಂಬಲ ನೀಡಲಿದ್ದಾರೆ ಹಾಗೂ ಈ ಸಂಘರ್ಷ ನಿಲ್ಲಿಸಿ ಶಾಂತಿ ಖಾತ್ರಿಪಡಿಸುವಲ್ಲಿ ಅವರನ್ನು ಎಲ್ಲರೂ ಬೆಂಬಲಿಸಲಿದ್ದಾರೆ" ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಈ ಹಿಂದೆ ಸೆಪ್ಟೆಂಬರ್ 30ರಂದು ಟ್ರಂಪ್ ಅವರ ಯೋಜನೆಯ ಆರಂಭಿಕ ಘೋಷಣೆಯನ್ನು ಸ್ವಾಗತಿಸಿದ್ದಲ್ಲದೇ ಪಶ್ಚಿಮ ಏಷ್ಯಾದ ದೀರ್ಘಕಾಲೀನ ಶಾಂತಿಗೆ 'ಕಾರ್ಯಸಾಧ್ಯ ಮಾರ್ಗ' ಎಂದು ಶ್ಲಾಘಿಸಿದ್ದರು. ಅಕ್ಟೋಬರ್ 4 ರಂದು ಟ್ರಂಪ್ ರವರ ಶಾಂತಿ ಪ್ರಯತ್ನಗಳು ಮತ್ತೊಮ್ಮೆ ಗಾಜಾದಲ್ಲಿ "ನಿರ್ಣಾಯಕ ಪ್ರಗತಿ" ಸಾಧಿಸುತ್ತಿರುವ ಸಂದರ್ಭದಲ್ಲಿ "ಟ್ರಂಪ್ ಅವರ ನಾಯಕತ್ವವನ್ನು ಸ್ವಾಗತಿಸುತ್ತೇನೆ" ಎಂದು ಮತ್ತೆ ಹೇಳಿದರು.

ಟ್ರಂಪ್ ಅವರನ್ನು ಕೊಂಡಾಡುತ್ತಿರುವ ಪ್ರಧಾನ ಮಂತ್ರಿ ಮೋದಿ ಅವರ ಈ ವರ್ತನೆ ವಿಚಿತ್ರವೇ ಸರಿ. ಕೆಲವೇ ದಿನಗಳ ಹಿಂದೆ ಭಾರತೀಯ ಸರಕುಗಳ ಮೇಲೆ ಶೇ 50% ಸುಂಕ ವಿಧಿಸಿ ಟ್ರಂಪ್ ಭಾರತದ ಆರ್ಥಿಕತೆಯ ಮೇಲೆ ಭಾರಿ ಪ್ರಹಾರ ಮಾಡಿದ್ದಾರೆ. ಅಲ್ಲದೇ ಪಹಲ್ಗಾಮ್ ದಾಳಿಯ ನಂತರ ಭಾರತ–ಪಾಕಿಸ್ತಾನ ಗಡಿಯಲ್ಲಿ ಶಾಂತಿ ಒಪ್ಪಂದಕ್ಕೆ ಮಧ್ಯಸ್ಥಿಕೆ ವಹಿಸಿದ್ದೇನೆ ಎಂದು ಟ್ರಂಪ್ ಪದೇ ಪದೇ ಹೇಳಿದರೂ, ಅದನ್ನು ಭಾರತ ಒಪ್ಪಿಕೊಳ್ಳುತ್ತಿಲ್ಲವೆಂಬ ಬಗ್ಗೆ ಅಸಮಧಾನವನ್ನೂ ಮೋದಿಯವರು ವ್ಯಕ್ತಪಡಿಸಿದ್ದರು. ಇಷ್ಟೂ ಸಾಲದ್ದಕ್ಕೆ ಸೆಪ್ಟೆಂಬರ್ 25ರಂದು H-1B ವೀಸಾ ಶುಲ್ಕವನ್ನು 2,000–5,000 ಡಾಲರ್‌ನಿಂದ ಏಕಾಏಕಿ ವಾರ್ಷಿಕ 1,00,000 ಡಾಲರ್‌ಗೆ (ರೂ. 90 ಲಕ್ಷಕ್ಕೆ) ಟ್ರಂಪ್ ಅವರು ಏರಿಸಿದ್ದಾರೆ. ಇದು ಅಮೇರಿಕಾದಲ್ಲಿ ಕೆಲಸ ಮಾಡುತ್ತಿರುವ ಭಾರತೀಯರಿಗೆ ಬಹಳ ದೊಡ್ಡ ಪೆಟ್ಟು ಕೊಟ್ಟಿದೆ.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೋಡಿದಾಗ, ಅಮೇರಿಕಾ ಭಾರತದ ವಿರುದ್ಧ ಎಷ್ಟೇ ಕಠಿಣ ಕ್ರಮ ಕೈಗೊಂಡರೂ, ಮೋದಿ ಸರ್ಕಾರ ಈ ಬಗ್ಗೆ ಏಕೆ ಸೊಲ್ಲೆತ್ತುತ್ತಿಲ್ಲ? – ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಇದಕ್ಕೆ ಉತ್ತರ ನಮ್ಮ ಮುಂದೆ ಸ್ಪಷ್ಟವಾಗಿದೆ : ತಮ್ಮ ಮಾಲೀಕರಾದ ಭಾರತದ ಏಕಸ್ವಾಮ್ಯಾಧಿಪತಿಗಳು ಜಾಗತಿಕ ಶಕ್ತಿಗಳಾಗುವಲ್ಲಿ ಯಾವುದೇ ತಡೆಯೊಡ್ಡಬಾರದೆಂಬ ಅವರ ಮಹದಾಸೆಗಳಿಗೆ ಅಡ್ಡಿ ಬಾರದಂತೆ ಬಿಜೆಪಿ ತನ್ನ ಸ್ವಾಮಿನಿಷ್ಠೆ ಪಾಲಿಸುತ್ತಿದೆ. ಶಾಂತಿ ಪ್ರಿಯ ಭಾರತೀಯರ ಅಭಿಪ್ರಾಯಗಳನ್ನು ಗಾಳಿಗೆ ತೂರಿ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಪರಂಪರೆಯನ್ನೂ ತೊರೆದು, ಗಾಜಾದಲ್ಲಿ ಜನಾಂಗೀಯ ಹತ್ಯೆ ನಡೆಸುತ್ತಿರುವ ಜಿಯೋನಿಸ್ಟ್ ಇಸ್ರೇಲ್‌ಗೆ ಸೈನ್ಯ ಬೆಂಬಲ ನೀಡುತ್ತಿರುವ ಅಮೇರಿಕಾದ ಅಧ್ಯಕ್ಷ ಟ್ರಂಪ್‌ನನ್ನು ಹಾಡಿ ಹೊಗಳುತ್ತಿರುವುದು ಅಸಹ್ಯ ಹುಟ್ಟಿಸುತ್ತದೆ. ಪಾತಕೀ ಟ್ರಂಪ್ ಶಾಂತಿದೂತನಂತೆ! ಹೀಗೆನ್ನುತ್ತಾರೆ ನಮ್ಮ ಪ್ರಧಾನಿ ಮೋದಿ!

ಟ್ರಂಪ್‌ನನ್ನು ಹೊಗಳಿದ್ದಷ್ಟಕ್ಕೇ ಇದು ಮುಗಿಯಲಿಲ್ಲ. ಯುದ್ಧ ಪಿಪಾಸು, ಕ್ರೂರಿ ಇಸ್ರೇಲ್ ನ ಪ್ರಧಾನಿ ನೆತನ್ಯಾಹುನನ್ನು, ಆತನ "ದೃಢ ನಾಯಕತ್ವ" ವನ್ನು ನಮ್ಮ ಪ್ರಧಾನಿ ಶ್ಲಾಘಿಸಿದ್ದಾರೆ. X ನಲ್ಲಿ, "ಅಧ್ಯಕ್ಷ ಟ್ರಂಪ್ ಅವರ ಶಾಂತಿ ಯೋಜನೆಯ ಮೊದಲ ಹಂತದ ಒಪ್ಪಂದವನ್ನು ಸ್ವಾಗತಿಸುತ್ತೇವೆ; ಇದಕ್ಕೆ ನೆತನ್ಯಾಹು ಅವರ ಬಲಿಷ್ಠ ನಾಯಕತ್ವವೂ ಕಾರಣ" ಎಂದು ಬರೆದುಕೊಂಡಿದ್ದಾರೆ.

ಇಂಗ್ಲೆಂಡ್, ಫ್ರಾನ್ಸ್, ಪೋರ್ಚುಗಲ್, ಐರ್ಲೆಂಡ್, ಸ್ಪೇನ್, ನಾರ್ವೆ, ಆಸ್ಟ್ರೇಲಿಯಾ, ಕೆನಡಾ ಸೇರಿದಂತೆ ಅನೇಕ ಪಾಶ್ಚಾತ್ಯ ದೇಶಗಳು ಪ್ಯಾಲೆಸ್ತೀನ್ ಗೆ ಬೆಂಬಲ ನೀಡುತ್ತಿರುವ ಸಂದರ್ಭದಲ್ಲಿ ಮಾನ್ಯ ಮೋದಿ ಯವರು ಪಾತಕೀ ನೆತನ್ಯಾಹು ನನ್ನು ಹೊಗಳುತ್ತಿರುವುದು ಖೇದಕರ.

"ಭಯೋತ್ಪಾದನೆ ಯಾವ ರೂಪದಲ್ಲಿ ಅಭಿವ್ಯಕ್ತಗೊಂಡರೂ, ಜಗತ್ತಿನ ಯಾವ ಭಾಗದಲ್ಲೇ ನಡೆದರೂ ಅದನ್ನು ಒಪ್ಪಲು ಸಾಧ್ಯವಿಲ್ಲ" ಎಂದು ಪಾತಕೀ ಇಸ್ರೇಲ್ ಪ್ರಧಾನಿಯನ್ನು ಮತ್ತೊಮ್ಮೆ ಹೊಗಳುತ್ತಾ ಮೋದಿ ಈ ಮಾತುಗಳನ್ನು ಉಚ್ಚರಿಸಿದರು. ಸಾವಿರಾರು ನಿರಪರಾಧಿ, ನಿರಾಯುಧ, ಹಸಿದ ಜನರ, ಅದರಲ್ಲೂ ಪುಟ್ಟ ಕಂದಮ್ಮಗಳ ನರಮೇಧ ನಡೆಸುತ್ತಿರುವ ನೆತನ್ಯಾಹು ಹಾಗೂ ಟ್ರಂಪ್‌ಗಿಂತಲೂ ದೊಡ್ಡ ಭಯೋತ್ಪಾದಕರು ಯಾರಾದರೂ ಇರುವುದು ಸಾಧ್ಯವೇ? ಊಟ, ನೀರಿಗಾಗಿ ನೆರವು ಕೇಂದ್ರಗಳತ್ತ ಹೋದ ಹಸಿದ ಜನರ ಮೇಲೂ ಗುಂಡಿನ ಮಳೆ ಸುರಿಸಿದ ನರಭಕ್ಷಕರು ಇವರು! ಇಂತಹವರನ್ನು ಬೆಂಬಲಿಸುವ ಪ್ರಧಾನಿ, ಬಿಜೆಪಿ ಹಾಗೂ ಬಿಜೆಪಿ ನಾಯಕರು ಈ ಕಟುಕರಿಗಿಂತ ಭಿನ್ನವೇ? ■

# 38 ದಶಲಕ್ಷ ಜನರ ಮಾರಣ ಹೋಮಕ್ಕೆ ಕಾರಣವಾದ ಆರ್ಥಿಕ ದಿಗ್ಬಂಧನಗಳು

ಇಲ್ಲಿ ಸತ್ತವರ ಸುದ್ದಿಗಳು ರಾತ್ರಿ ಬಿತ್ತರಗೊಳ್ಳುವ ಸುದ್ದಿವಾಹಿನಿಗಳಲ್ಲಿ ಕಾಣಿಸುವುದಿಲ್ಲ. ಇವರ ಹೆಸರುಗಳನ್ನು ಸ್ಮಾರಕದ ಗೋಡೆಗಳಲ್ಲಿ ಕೆತ್ತಿರುವುದಿಲ್ಲ. ಯುದ್ಧಗಳಲ್ಲಿ ಮಡಿದ ಸೈನಿಕರ ತಲೆಗಳನ್ನು ಎಣಿಸುವಂತೆ ಇಲ್ಲಿ ಸತ್ತವರ ಹೆಸರುಗಳನ್ನು ಲೆಕ್ಕ ಹಾಕಿ ನೋಡುವುದಿಲ್ಲ. ಅವರು ನಿಧಾನವಾದ, ಮೆಲ್ಲಗೆ ಸಾಗುವ ಮತ್ತು ಸಾಮ್ರಾಜ್ಯಶಾಹಿ ಶಿಬಿರದಿಂದ ನಿರ್ದೇಶಿತಗೊಂಡ ಅಧಿಕಾರಶಾಹಿಯು ಸೃಷ್ಟಿಸಿದ ಬಲಿಪಶುಗಳು.

ಲಕ್ಷಾಂತರ ಜನರು ಸತ್ತಿದ್ದು ಬಾಂಬ್ ದಾಳಿ, ಕ್ಷಿಪಣಿ ಅಥವಾ ಗುಂಡಿನ ದಾಳಿಯಿಂದಲ್ಲ. ಬದಲಾಗಿ ವ್ಯವಸ್ಥೆ ಸೃಷ್ಟಿಸಿದ ಹಸಿವು, ತಡೆಯಬಹುದಾದ ಕಾಯಿಲೆ, ವ್ಯವಸ್ಥಿತವಾಗಿ, ಉದ್ದೇಶಪೂರ್ವಕವಾಗಿ ಹಾಳುಗೆಡವಿದ ಆರೋಗ್ಯ ವ್ಯವಸ್ಥೆಯಿಂದಾಗಿ. ಸುಮಾರು ಅರ್ಧ ಶತಮಾನಗಳ ಕಾಲ ಅಮೆರಿಕ ಮತ್ತು ಇತರೆ ಯೂರೋಪಿಯನ್ ರಾಷ್ಟ್ರಗಳು ತಮ್ಮ ಎದುರು ಮಂಡಿಯೂರಲು ನಿರಾಕರಿಸಿದ ದೇಶಗಳ ಮೇಲೆ ಆರ್ಥಿಕ ದಿಗ್ಬಂಧನಗಳನ್ನು ವಿಧಿಸಿವೆ.

ಈ ದೇಶಗಳು ವಿಧಿಸಿರುವ ಅತಾರ್ಕಿಕ ಆರ್ಥಿಕ ದಿಗ್ಬಂಧನವು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿ ಯುದ್ಧ ಮಾಡಿ ಜನರನ್ನು ಸಾಯಿಸಿದ್ದಕ್ಕಿಂತಲೂ ಹೆಚ್ಚಿನ ಜನರ ಸಾವಿಗೆ ಕಾರಣವಾಗಿದೆ. ಇದು ಬಹುತೇಕ ಜನರಿಗೆ ಗೊತ್ತೇ ಆಗದ, ನಮ್ಮ ಕಾಲದ ಅತ್ಯಂತ ಅಮಾನವೀಯ ಅಪರಾಧ.

ಅಮೆರಿಕ ಮತ್ತು ಇತರ ಯುರೋಪಿಯನ್ ರಾಷ್ಟ್ರಗಳು ದಶಕಗಳ ಕಾಲದಿಂದಲೂ ರಾಜತಾಂತ್ರಿಕ ಕ್ರಮ ಹಾಗೂ ಮಾನವ ಹಕ್ಕುಗಳ ಹೆಸರಿನಲ್ಲಿ ಅಮಾನವೀಯ ಆರ್ಥಿಕ ದಿಗ್ಬಂಧನಗಳನ್ನು ವಿಧಿಸುತ್ತಾ ಬಂದಿವೆ. ಇವುಗಳನ್ನು ಮಿಲಿಟರಿ ದಾಳಿಗೆ ಪರ್ಯಾಯವಾದ ಕ್ರಮಗಳು ಎಂದೂ ಬಿಂಬಿಸುತ್ತಾ ಬಂದಿವೆ. ಇದು ಒಂದು ಅತ್ಯಂತ ಕೆಡಕುಂಟು ಮಾಡುವ ಸಂಕಥನ. ವಾಸ್ತವವಾಗಿ ಇದೊಂದು ಸಾಮ್ರಾಜ್ಯಶಾಹಿ ವ್ಯವಸ್ಥೆ ಸೃಷ್ಟಿಸಿದ ಸುಧಾರಿತ ಅಸ್ತ್ರ, ಇವು ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ 'ಅವಿಧೇಯರಾದ', ಸಾಮ್ರಾಜ್ಯಶಾಹಿ ಶಕ್ತಿಯನ್ನು ಪ್ರಶ್ನಿಸುವ 'ಪುಂಡಾಟಿಕೆ' ಪ್ರವೃತ್ತಿಯ ದೇಶಗಳನ್ನು ಹದ್ದುಬಸ್ತಿನಲ್ಲಿಡಲು ಕೈಗೊಂಡ ಕ್ರಮ.

ಇಂತಹ ಆರ್ಥಿಕ ದಿಗ್ಬಂಧನ ವಿಧಿಸುವ ನೀಲಿನಕ್ಷೆ ತಯಾರಾಗಿದ್ದು ದಶಕಗಳ ಹಿಂದೆ. 1970ರಲ್ಲಿ ಚಿಲಿಯ ಸಮಾಜವಾದಿ ನಾಯಕ ಸಾಲ್ವಡೊರ್ ಅಲೆಂಡೆ ಅವರು ಪ್ರಜಾತಾಂತ್ರಿಕವಾಗಿ ಅಧ್ಯಕ್ಷರಾಗಿ ಆಯ್ಕೆಯಾದರು. ಇದರಿಂದ ಮುಖಭಂಗಕ್ಕೊಳಗಾದ ಅಮೆರಿಕಾದ ಆಡಳಿತಗಾರರು, ವಿಶೇಷವಾಗಿ ಅಂದಿನ ಅಧ್ಯಕ್ಷ ರಿಚರ್ಡ್ ನಿಕ್ಸನ್ ತನ್ನ ಅಧಿಕಾರಿಗಳಿಗೆ ಚಿಲಿಯ ಆರ್ಥಿಕ ಶಕ್ತಿಯನ್ನು ಕುಂದಿಸುವ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು. ಆ ದೇಶದೊಂದಿಗೆ ವ್ಯಾಪಾರ ವಹಿವಾಟು ನಡೆಸುವುದನ್ನು ನಿಷೇಧಿಸುವ ಹಾಗೂ ಆಸ್ತಿಗಳನ್ನು ಮುಟ್ಟುಗೋಲು ಹಾಕುವ ಯತ್ನಗಳು ನಡೆದವು. ಇಂತಹ ಆರ್ಥಿಕ ನಿರ್ಬಂಧದ ಮೂಲಕ ಆ ದೇಶದ ನೀತಿಗಳನ್ನು ಬದಲಾಯಿಸುವಂತೆ ಒತ್ತಾಯಿಸುವ ರೂಢಿ ಬೆಳೆದು ಬಂತು. ಇದರ ಪರಿಣಾಮ ಅತ್ಯಂತ ಕ್ರೂರವಾಗಿತ್ತು. ಪರಿಸ್ಥಿತಿಯ ದುರ್ಬಳಕೆ ಮಾಡಿಕೊಂಡು ಅಮೆರಿಕ ಬೆಂಬಲಿತ ಮಿಲಿಟರಿ ಸರ್ವಾಧಿಕಾರಿ ಅಗಸ್ಟೊ ಪಿನೋಷೆ ಸರ್ಕಾರವನ್ನು ಬುಡಮೇಲುಗೊಳಿಸಿ ಅಲೆಂಡೆಯವರನ್ನು ಹತ್ಯೆ ಮಾಡಿ 1974ರಲ್ಲಿ ಚಿಲಿಯ ಅಧ್ಯಕ್ಷನಾದ. ಇದಕ್ಕೆ ಅಮೆರಿಕದ ಸಾಮ್ರಾಜ್ಯಶಾಹಿಗಳ ಸಂಪೂರ್ಣ ಬೆಂಬಲವಿತ್ತು. ಈ ಮಾದರಿ ಅತ್ಯಂತ ಪರಿಣಾಮಕಾರಿ ಎನಿಸಿತು. ಜನರನ್ನು ಹಸಿವಿನಿಂದ ನರಳಲು ಬಿಟ್ಟು ಸರ್ಕಾರವನ್ನು ಬುಡಮೇಲು ಮಾಡಿದ ಚಿಲಿಯ ಕ್ರಮವನ್ನು ಇತರ ದೇಶಗಳಲ್ಲಿಯೂ ಅನುಸರಿಸಲಾಯಿತು.

1970ರಲ್ಲಿಯೇ ಸುಮಾರು 15 ದೇಶಗಳಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು ಆರ್ಥಿಕ ದಿಗ್ಬಂಧನ ವಿಧಿಸಿ, ಜನರನ್ನು ಹಸಿವಿನಿಂದ ನರಳುವಂತೆ ಮಾಡಿ ಅಲ್ಲಿ ತಮ್ಮ ಕೈಗೊಂಬೆ ಸರ್ಕಾರಗಳನ್ನು ಪ್ರತಿಷ್ಠಾಪನೆ ಮಾಡಿದ್ದವು. ಕ್ರಮೇಣ ಈ ದುಷ್ಟ ಕ್ರಮ ಜಗತ್ತಿನ ಇತರೆ ರಾಷ್ಟ್ರಗಳಿಗೂ ಹರಡಿತು. 1990, 2000ನೇ ಇಸ್ವಿ ವೇಳೆಗೆ ಈ ಸಂಖ್ಯೆ 30ಕ್ಕೆ ಏರಿತು. 2025ರ ವೇಳೆಗೆ ಹೀಗೆ ಆರ್ಥಿಕ ದಿಗ್ಬಂಧನಕ್ಕೆ ಒಳಗಾದ ದೇಶಗಳ ಸಂಖ್ಯೆ 60ಕ್ಕೆ ಏರಿದೆ. ತನ್ನ ಮಾತು ಕೇಳದ ದೇಶಗಳಿಗೆ ದಿಗ್ಬಂಧನ ಎಂಬುದನ್ನು ಒಂದು ನೀತಿಯಂತೆಯೇ ಅಳವಡಿಸಿಕೊಂಡು ಆ ಮೂಲಕ ಅಲ್ಲಿನ ಜನತೆ ತೀವ್ರ ಹಸಿವು, ಅನಾರೋಗ್ಯ, ಮೂಲಸೌಕರ್ಯಗಳ ಕೊರತೆಯಿಂದ ನರಳುವಂತೆ ಮಾಡಿದೆ.

ಕೆಲ ವಿಶಿಷ್ಟ ಪ್ರಕರಣಗಳಲ್ಲಿ ನಾಗರಿಕರ ಸಾವುಗಳನ್ನು ಸುವ್ಯವಸ್ಥಿತವಾಗಿ ದಾಖಲಿಸಲಾಗಿದೆ. ಮತ್ತೆ ಕೆಲ ಪ್ರಕರಣಗಳಲ್ಲಿ ಉದ್ದೇಶಪೂರ್ವಕವಾಗಿ ಮರೆ ಮಾಚಲಾಗಿದೆ. 1990ರ ದಶಕದಲ್ಲಿ ಅಮೆರಿಕ ಮತ್ತು ಇಂಗ್ಲೆಂಡ್‌ನ ಒತ್ತಾಸೆಯ ಮೇರೆಗೆ ವಿಶ್ವಸಂಸ್ಥೆ ವಿಧಿಸಿದ ಆರ್ಥಿಕ ದಿಗ್ಬಂಧನದಿಂದಾಗಿ ಇರಾಕ್‌ನಲ್ಲಿ ಮಾನವ ನಿರ್ಮಿತ ಬಹುದೊಡ್ಡ ಹತ್ಯಾಕಾಂಡವೇ ನಡೆದು ಹೋಯಿತು. ಇತ್ತೀಚಿನ ಪ್ರಕರಣವಾದ ಅಮೆರಿಕ ಬೆಂಬಲಿತ ವೆನೆಜುವೆಲಾ ಮೇಲಿನ ಆರ್ಥಿಕ ದಿಗ್ಬಂಧನವನ್ನು 'ಸಾಮೂಹಿಕ ಶಿಕ್ಷೆ' ಎಂದು ಬಣ್ಣಿಸಲಾಗಿದೆ. ಸೆಂಟರ್ ಫಾರ್ ಎಕನಾಮಿಕ್ ಅಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯು 2017–18ರ ಅವಧಿಯೊಂದರಲ್ಲೇ ಆ ದೇಶದಲ್ಲಿ ಸಾಮಾನ್ಯ ಪ್ರಮಾಣಕ್ಕಿಂತ 40 ಸಾವಿರ ಹೆಚ್ಚು ಸಾವುಗಳು ಸಂಭವಿಸಿವೆ ಎಂದು ಅಂದಾಜಿಸಿದೆ. ಇದಕ್ಕೆ ವೆನೆಜುವೆಲಾ ಎದುರಿಸುತ್ತಿದ್ದ ಆರ್ಥಿಕ ದಿಗ್ಬಂಧನದ ಪರಿಣಾಮವಾಗಿ ಅಗತ್ಯವಾದಷ್ಟು ಆಹಾರ ಮತ್ತು ಔಷಧಿಗಳನ್ನು ಆಮದು ಮಾಡಿಕೊಳ್ಳಲು ಸಾಧ್ಯವಾಗದಿರುವುದೇ ಕಾರಣ ಎಂದು ಅಧ್ಯಯನಗಳು ತಿಳಿಸಿವೆ.

ಅಲ್ಲಿಯವರೆಗೂ ಜಾಗತಿಕವಾಗಿ ಇಂತಹ ಸಾವುಗಳ ಅಧ್ಯಯನ ನೇಪಥ್ಯದಲ್ಲೇ ಉಳಿದು ಹೋಗಿದ್ದವು. ಇದರಿಂದಾಗಿ ಈ ಕುರಿತು ನೀತಿ ನಿರೂಪಕರು ಹೆಚ್ಚುತ್ತಿರುವ ಸಾವುಗಳ ಬಗ್ಗೆ ಹೆಚ್ಚಿನ ಗಮನ ಹರಿಸುತ್ತಿರಲಿಲ್ಲ. ಆದರೆ, ಇತ್ತೀಚೆಗೆ 'ದಿ ಲ್ಯಾನ್ಸೆಟ್ ಗ್ಲೋಬಲ್ ಹೆಲ್ತ್'ನಲ್ಲಿ ಪ್ರಕಟವಾದ ಒಂದು ಗುರುತರವಾದ ವರದಿಯು, 1970ರಿಂದ 2021ರವರೆಗೆ ವಿವಿಧ ದೇಶಗಳಲ್ಲಿ ನಡೆದ ಸಾವುಗಳಿಗೆ ಆರ್ಥಿಕ ದಿಗ್ಬಂಧನಗಳೇ ಕಾರಣವೆಂಬುದನ್ನು ಯಾವುದೇ ಸಂದೇಹವಿಲ್ಲದಂತೆ ಸ್ಪಷ್ಟವಾಗಿ ಸಾರಿ ಹೇಳಿತು. ಸಾವಿಗೆ ಕಾರಣವನ್ನು ಹುಡುಕಲು ನೆರವಾಗುವ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಗಳು ಸಹ ಇದೇ ಮಾಹಿತಿಯನ್ನು ನೀಡಿದವು. ಐದು ದಶಕಗಳ ಅವಧಿಯಲ್ಲಿ 38 ದಶಲಕ್ಷ ಸಾವುಗಳು ಸಂಭವಿಸಿದವು. ಇದಕ್ಕೆ ಕಾರಣ ಯಾವುದೇ ಭಯೋತ್ಪಾದಕ ಸ್ಫೋಟಗಳಲ್ಲ. ಬದಲಾಗಿ ಆ ದೇಶದ ಆರ್ಥಿಕತೆಯ ಕತ್ತು ಹಿಸುಕುವ ಮೂಲಕ ಜನರಿಗೆ ಅಪೌಷ್ಟಿಕ ಆಹಾರ ವಿತರಣೆ, ನೀರು ಮತ್ತು ನೈರ್ಮಲ್ಯ ವ್ಯವಸ್ಥೆಗಳನ್ನು ಬುಡಮೇಲು ಮಾಡುವುದು ಮತ್ತು ಆರೋಗ್ಯ ಮೂಲಸೌಕರ್ಯಗಳ ವೈಫಲ್ಯವು ಈ ಸಾವುಗಳಿಗೆ ನೇರ ಕಾರಣವಾಗಿದೆ. ಆರ್ಥಿಕ ದಿಗ್ಬಂಧನ ವಿಧಿಸುವುದು ಎಂದರೆ ವ್ಯವಸ್ಥಿತವಾಗಿ ಆ ದೇಶದಲ್ಲಿ ಅಭಾವವನ್ನು ಸೃಷ್ಟಿಸುವುದೇ ಆಗಿದೆ. 1960ರ ಏಪ್ರಿಲ್‌ನಲ್ಲಿ ಅಮೆರಿಕದ ಸ್ಟೇಟ್ ಡಿಪಾರ್ಟ್‌ಮೆಂಟ್‌ನ ವರ್ಗೀಕರಿಸಲಾದ ಮೆಮೊದಲ್ಲಿ ಕ್ಯೂಬಾದ ಫಿಡೆಲ್ ಕ್ಯಾಸ್ಟ್ರೋ ಅವರನ್ನು ಹಣಿಯಲು ಇಂತಹ ವಿಧಾನವನ್ನು ಬಳಸಿ ಅತ್ಯಂತ ಕ್ರೂರವಾಗಿ ಆ ದೇಶದ ಜನತೆಯನ್ನು ಹಣಿಯುವ ಮಾಹಿತಿಯನ್ನು ಹಂಚಿಕೊಳ್ಳಲಾಗಿತ್ತು.

ಹಣ ಮತ್ತು ಮೂಲಸೌಕರ್ಯಗಳ ರಫ್ತನ್ನು ತಡೆಯುವುದರಿಂದ ಜನರು ಹಸಿವಿನಿಂದ ಬಳಲುತ್ತಾರೆ. ನಂತರ ಹತಾಶರಾಗಿ ಅಲ್ಲಿನ ಸರ್ಕಾರವನ್ನು ಕಿತ್ತೊಗೆಯಬಹುದು ಎಂಬುದು ಅಮೆರಿಕದ ಊಹೆಯಾಗಿತ್ತು. ಅದಕ್ಕೆ ತಕ್ಕಂತೆ ಇರಾಕ್, ಇರಾನ್ ಮತ್ತು ಪ್ಯಾಲೆಸ್ತೀನ್ ದೇಶಗಳಲ್ಲಿ ಇಂತಹ ಪ್ರಯೋಗಗಳು ನಡೆದವು.

ಹಸಿವು ಎಂಬುದು ಆಕಸ್ಮಾತ್ ಘಟಿಸಬಹುದಾದ ವಿದ್ಯಮಾನವಲ್ಲ. ಅದು ನಿರ್ದಿಷ್ಟ ತಂತ್ರಗಾರಿಕೆಯ ಭಾಗ. ಅಮೆರಿಕದ ಡಾಲರ್ ಮತ್ತು ಯೂರೋಪಿಯನ್ ದೇಶಗಳು ಬಳಸುವ ಯೂರೊ ಜಾಗತಿಕವಾಗಿ ಪ್ರಬಲವಾಗಿದ್ದು, ಸ್ವಿಫ್ಟ್ (ಸೊಸೈಟಿ ಫಾರ್ ವರ್ಲ್ಡ್ ವೈಡ್ ಇಂಟರ್ ಬ್ಯಾಂಕ್ ಫೈನಾನ್ಸಿಯನಲ್ ಟೆಲಿಕಮ್ಯುನಿಕೇಶನ್) ಎಂಬ ಮೆಸೇಜಿಂಗ್ ನೆಟ್ವರ್ಕ್ ರೂಪಿಸಿಕೊಂಡಿವೆ. ಆ ಮೂಲಕ ಹಣಕಾಸು ವಹಿವಾಟಿನ ಸಂದೇಶವನ್ನು ಹಂಚಿಕೊಳ್ಳುತ್ತವೆ. ಇದರ ಸಂಪೂರ್ಣ ನಿಯಂತ್ರಣವನ್ನು ಅಮೆರಿಕ ಮತ್ತು ಯೂರೋಪಿಯನ್ ಸಾಮ್ರಾಜ್ಯಶಾಹಿಗಳು ಮಾಡುತ್ತಾರೆ. ಹೀಗಾಗಿ, ಅವರು ಮನಸ್ಸು ಮಾಡಿದರೆ ತಮ್ಮ ವಿರೋಧಿ ದೇಶಗಳ ಸೆಂಟ್ರಲ್ ಬ್ಯಾಂಕುಗಳ ವಹಿವಾಟನ್ನು ಹದಗೆಡಿಸಬಹುದು. ದೇಶದ ಆಸ್ತಿಗಳನ್ನು ವಶಕ್ಕೆ ಪಡೆಯಬಹುದು. ವ್ಯಾಪಾರವನ್ನು ನಿರ್ಬಂಧಿಸಬಹುದು. ಇದರಿಂದ ಹಣದುಬ್ಬರ ತೀವ್ರವಾಗಿ ಜನರ ಖರೀದಿ ಶಕ್ತಿ ಕುಸಿಯುತ್ತದೆ. ಜೊತೆಗೆ ಸಾರ್ವಜನಿಕ ಸೇವೆಗಳು ಮತ್ತು ಖಾಸಗಿ ಮಾರುಕಟ್ಟೆಗಳು ಸ್ತಬ್ಧಗೊಳ್ಳುತ್ತವೆ. ಒಬ್ಬ ತಾಯಿ ತನ್ನ ಮಗುವಿಗೆ ಆಹಾರ ಕೊಡಲಾಗದಷ್ಟು, ಕಾಯಿಲೆಗೆ ಔಷಧಿ ಪಡೆಯಲಾಗದಷ್ಟು ಕೆಟ್ಟ ಪರಿಸ್ಥಿತಿಗೆ ಹೋಗುವುದು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸೃಷ್ಟಿಸಿದ ಒಂದು ವಿಪರೀತದ ಹಂತ.

ಈ ಪದ್ಧತಿಯು ಆಧುನಿಕ ಸಾಮ್ರಾಜ್ಯಶಾಹಿ ವ್ಯವಸ್ಥೆ ಕೆಲಸ ಮಾಡುವ ವಿಧಾನಕ್ರಮವಾಗಿದೆ. ತನಗಾಗದ ದೇಶಗಳನ್ನು ತನ್ನ ಹದ್ದುಬಸ್ತಿನಲ್ಲಿಡಲು ಅದು ತನ್ನ ಸೈನ್ಯವನ್ನು ಆ ದೇಶದಲ್ಲಿ ನಿಯೋಜಿಸಬೇಕಿಲ್ಲ. ಬದಲಾಗಿ ಆರ್ಥಿಕ ದಿಗ್ಬಂಧನವು ವಿವಿಧ ದೇಶಗಳನ್ನು ಹೈರಾಣು ಮಾಡುವ ಮೂಲಕ ಬಿಕ್ಕಟ್ಟು ಸೃಷ್ಟಿಸುತ್ತದೆ. ಸಾಮ್ರಾಜ್ಯಶಾಹಿ ಅಧಿನಾಯಕತ್ವದಡಿಯಲ್ಲಿ ಪ್ರತಿ ವರ್ಷ ಐದು ಲಕ್ಷ ಜನರು ತಮ್ಮ ಜೀವವನ್ನು ಕಳೆದುಕೊಳ್ಳುತ್ತಾರೆ. ಇದೊಂದು ಕ್ರಿಮಿನಲ್ ವ್ಯವಹಾರವಾಗಿದ್ದು, ಜಾಗತಿಕವಾಗಿ ಪ್ರಜ್ಞಾವಂತ ಜನರು ಇಂತಹ ಅನ್ಯಾಯದ ಸಾವುಗಳ ವಿರುದ್ಧ ಧ್ವನಿ ಮೊಳಗಿಸಬೇಕು. ಆ ಮೂಲಕ ಸಾಮ್ರಾಜ್ಯಶಾಹಿಗಳು ಆರ್ಥಿಕ ದಿಗ್ಬಂಧನಗಳಿಂದ ಜನರ ಸಾವಿಗೆ ಕಾರಣವಾಗುವ ನಿರ್ಧಾರ ಹಿಂದಕ್ಕೆ ಪಡೆಯುವ ನಿಟ್ಟಿನಲ್ಲಿ ಒತ್ತಡ ತರಬೇಕಾಗಿದೆ. ■

## 350 ವರ್ಷದ ಬಂಡವಾಳವಾದ V/s 30 ವರ್ಷದ ಸಮಾಜವಾದ

...8ನೇ ಪುಟದಿಂದ

ಉದಾಹರಣೆ. ಶ್ರಮದಿಂದ ವಿಮುಖಗೊಳ್ಳುವ ಬದಲು, ಮೊಟ್ಟ ಮೊದಲ ಬಾರಿಗೆ ಕಾರ್ಮಿಕರು ಸಮಾಜವಾದಿ ಆರ್ಥಿಕತೆಯನ್ನು ಬಲಪಡಿಸಲು ಹಾಗೂ ತಮ್ಮ ಕಾರ್ಯದಕ್ಷತೆಯನ್ನು ಹೆಚ್ಚಿಸಿಕೊಳ್ಳಲು ಸಂತೋಷವಾಗಿ ಸ್ವಯಂಪ್ರೇರಿತರಾಗಿ ಕೆಲಸಮಾಡಲು ಮುಂದಾದರು.

ಎರಡನೇ ಮಹಾಯುದ್ಧದ ನಂತರ ಸೋವಿಯತ್ ಸಮಾಜದ ಬೃಹತ್ ಪುನರ್ನಿರ್ಮಾಣ ಕಾರ್ಯಗಳು ನಡೆಯುತ್ತಿದ್ದಾಗ ಮಹಾನ್ ಸ್ಟಾಲಿನ್ ಅವರು ಬಹುಮುಖ್ಯ ಪರಿಪಾಠ ನೀಡಿದರು: 'ಶ್ರಮದ ಕುರಿತಾಗಿ ನಮ್ಮ ಧೋರಣೆಯಲ್ಲಿ ಬದಲಾವಣೆ ಬರದ ಹೊರತು ಸಮಾಜದ ಸಾಂಸ್ಕೃತಿಕ ಮಟ್ಟವನ್ನು ಹೆಚ್ಚಿವುದು ಹಾಗೂ ಸಮಾಜದ ಪ್ರತಿಯೊಬ್ಬರ ದೈಹಿಕ–ಮಾನಸಿಕ ಬೆಳವಣಿಗೆಯನ್ನು ಖಾತ್ರಿಪಡಿಸುವುದು ಸಾಧ್ಯವಿಲ್ಲ. ಅದಕ್ಕಾಗಿ ಮೊಟ್ಟಮೊದಲು ದುಡಿಮೆಯ ಸಮಯವನ್ನು ದಿನಕ್ಕೆ 6 ಗಂಟೆಗಳಿಗೆ ಇಳಿಸಬೇಕು. ಇನ್ನು ಕೆಲವು ದಿನಗಳಲ್ಲಿ ಅದನ್ನು 5 ಗಂಟೆಗಳಿಗೆ ಇಳಿಸಬೇಕು. ಆ ಮೂಲಕ ಸಮಾಜದ ಸದಸ್ಯರಿಗೆ ಸರ್ವತೋಮುಖ ಶಿಕ್ಷಣವನ್ನು ಪಡೆಯಲು ಅಗತ್ಯವಿರುವ ಸಮಯ ದೊರಕುವಂತಾಗಬೇಕು' (ಯುಎಸ್‌ಎಸ್‌ಆರ್‌ನಲ್ಲಿ ಸಮಾಜವಾದದ ಆರ್ಥಿಕ ಸಮಸ್ಯೆಗಳು 1951) ಈ ಕ್ರಮಗಳನ್ನು ಅಳವಡಿಸಿಕೊಂಡಾಗ ಮಾತ್ರವೇ ಸಮಾಜವಾದದ ಉನ್ನತ ಹಂತವನ್ನು ತಲುಪಲು ಸಾಧ್ಯ ಎಂದಿದ್ದರು.

ಬಂಡವಾಳವಾದವು 350 ವರ್ಷಗಳಲ್ಲಿ ಸಾಧಿಸಲಾಗದ್ದನ್ನು, ಸೋವಿಯತ್ ಸಮಾಜವಾದವು ಕೇವಲ 30 ವರ್ಷಗಳ ಸಾಧಿಸಿದ್ದು ಮಹಾನ್ ಸ್ಟಾಲಿನ್‌ರ ಈ ಬಹುಮುಖ್ಯ ಪಾಠದಿಂದಲೇ.

ಆದ್ದರಿಂದ, ಕಾರ್ಮಿಕ ವರ್ಗವು ಬಂಡವಾಳಶಾಹಿ ದಬ್ಬಾಳಿಕೆಯಿಂದ ಮುಕ್ತವಾಗಬೇಕೆಂದರೆ, ಕೆಲಸದ ಅವಧಿ ಹೆಚ್ಚಿಸುವ ಬಂಡವಾಳವಾದದ ಶೋಷಣೆಯ ವಿರುದ್ಧ, ಸರಿಯಾದ ಕ್ರಾಂತಿಕಾರಿ ನಾಯಕತ್ವದ ಅಡಿಯಲ್ಲಿ ಬಂಡವಾಳಶಾಹಿ–ವಿರೋಧಿ ಸಮಾಜವಾದಿ ಕ್ರಾಂತಿಗೆ ಮುನ್ನುಗ್ಗುವಂತಹ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸಬೇಕು. ಈ ಮೂಲಕ ದಬ್ಬಾಳಿಕೆಯ ಬಂಡವಾಳಶಾಹಿ ವ್ಯವಸ್ಥೆಯನ್ನು ಉರುಳಿಸಿ, ಕಾರ್ಮಿಕರ ನಿರ್ದಯ ಶೋಷಣೆಯ ನೊಗದಿಂದ ಕಾರ್ಮಿಕರು ತಮ್ಮನ್ನು ವಿಮುಕ್ತಿಗೊಳಿಸಿಕೊಳ್ಳಬೇಕು. ■




ಮೈಸೂರಿನ ಕುವೆಂಪು ನಗರ ಸಾರ್ವಜನಿಕ ಗ್ರಂಥಾಲಯದಲ್ಲಿ ಕುಡಿಯುವ ನೀರು, ಸ್ವಚ್ಛತೆ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳಿಗೆ ಆಗ್ರಹಿಸಿ ಎಐಡಿವೈಓ ಮತ್ತು ಸಾರ್ವಜನಿಕ ಗ್ರಂಥಾಲಯದ ಓದುಗರ ಬಳಗದ ನೇತೃತ್ವದಲ್ಲಿ ಪ್ರತಿಭಟನೆ ಮಾಡಲಾಯಿತು. ಪ್ರತಿಭಟನೆಯ ನಂತರ ಸ್ವಚ್ಛತೆ ಮತ್ತು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗಿದೆ.




ಎಐಯುಟಿಯುಸಿ: ಚಾಲ್ತಿಯಲ್ಲಿದ್ದ ಕಾರ್ಮಿಕ ಕಾಯಿದೆಗಳನ್ನು ರದ್ದುಗೊಳಿಸಿ, ಬಂಡವಾಳಶಾಹಿ ಪರವಾದ 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ನವೆಂಬರ್ 22ರಂದು ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಪ್ರತಿಭಟನೆ.

# ಜಿಮ್ಮರ್‌ವಾಲ್ಡ್ ಸಮ್ಮೇಳನದಲ್ಲಿ ಎಸ್‌ಯುಸಿಐ(ಸಿ) ಭಾಗಿ

1914ರಲ್ಲಿ ಸಾಮ್ರಾಜ್ಯಶಾಹಿಗಳ ಮೊದಲನೆಯ ಮಹಾಯುದ್ಧ ಪ್ರಾರಂಭವಾದಾಗ ಎರಡನೇ ಇಂಟರ್‌ನ್ಯಾಷನಲ್ (ಕಮ್ಯುನಿಸ್ಟ್ ಪಕ್ಷಗಳ ಅಂತರರಾಷ್ಟ್ರೀಯ ವೇದಿಕೆ) ನಾಯಕರು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ತತ್ವವನ್ನು ಧಿಕ್ಕರಿಸಿ ಯುದ್ಧ ಪಿಪಾಸುಗಳ ಪರವಾಗಿ ಮತ ಚಲಾಯಿಸುವ ಮೂಲಕ ತಮ್ಮ ತಮ್ಮ ದೇಶಗಳ ಆಳುವ ಸಾಮ್ರಾಜ್ಯಶಾಹಿ ಬಂಡವಾಳಶಾಹಿಗಳನ್ನು ಬೆಂಬಲಿಸಿದರು. ಹಾಗಾಗಿ ಅವರು 'ದೇಶದ್ರೋಹಿಗಳು, ಕಾರ್ಮಿಕ ವರ್ಗದ ವಂಚಕರು ಮತ್ತು ಬಂಡವಾಳಶಾಹಿಗಳ ಸೇವಕರು' ಎಂದು ಸಾಬೀತಾಯಿತು. ಇವರ ವಿರುದ್ಧ ಕ್ರಮ ಕೈಗೊಳ್ಳಲು 1915ರಲ್ಲಿ ಯುದ್ಧವಿರೋಧಿ ಅಂತರರಾಷ್ಟ್ರೀಯ ಸಮಾಜವಾದಿಗಳು ಸ್ವಿಟ್ಜರ್‌ಲ್ಯಾಂಡ್‌ನ ಜಿಮ್ಮರ್‌ವಾಲ್ಡ್‌ನಲ್ಲಿ ಸಮ್ಮೇಳನವನ್ನು ಆಯೋಜಿಸಿದರು. ಈ ಸಂದರ್ಭದಲ್ಲಿ ಮಹಾನ್ ನಾಯಕ ಲೆನಿನ್, ಸಮಾಜವಾದಿ ಪಕ್ಷಗಳ ಅವಕಾಶವಾದಿತನವನ್ನು ತೀವ್ರವಾಗಿ ಟೀಕಿಸುತ್ತಾ, ಸಮಾಜವಾದಿಗಳು ಯುದ್ಧಪಿಪಾಸುಗಳ ವಿರುದ್ಧ ಮತ ಚಲಾಯಿಸಬೇಕೆಂದು ಒತ್ತಾಯಿಸಿದರು. ಜೊತೆಗೆ ಸಮಾಜವಾದಕ್ಕಾಗಿ ಸಾಮ್ರಾಜ್ಯಶಾಹಿ ಯುದ್ಧವನ್ನು ಅಂತರ್ಯುದ್ಧವನ್ನಾಗಿ ಪರಿವರ್ತಿಸಲು ಕೆಲಸ ಮಾಡಬೇಕು ಮತ್ತು ಅಸ್ತಿತ್ವದಲ್ಲಿರುವ ಎರಡನೇ ಇಂಟರ್‌ನ್ಯಾಷನಲ್‌ನ್ನು ವಿಸರ್ಜಿಸಿ ಮೂರನೇ ಇಂಟರ್‌ನ್ಯಾಷನಲ್ ರಚನೆ ಮಾಡಬೇಕೆಂದು ಕರೆ ನೀಡಿದರು.

ಲೆನಿನ್ ಪ್ರತಿಪಾದಿಸಿದ ಕ್ರಾಂತಿಕಾರಿ ಮಾರ್ಗದ ಸಂಸ್ಮರಣೆಯಲ್ಲಿ, ಜರ್ಮನಿಯಲ್ಲಿ ತನ್ನ ಪ್ರಧಾನ ಕಚೇರಿಯನ್ನು ಹೊಂದಿರುವ 'ಫ್ಯಾಸೀವಾದ, ಯುದ್ಧ ಮತ್ತು ಪರಿಸರ ವಿನಾಶದ ವಿರುದ್ಧದ ಅಂತರರಾಷ್ಟ್ರೀಯ ಸಾಮ್ರಾಜ್ಯಶಾಹಿ ವಿರೋಧಿ ಯುನೈಟೆಡ್ ಫ್ರಂಟ್' ಸಂಘಟನೆಯು ಸೆಪ್ಟೆಂಬರ್ 6–7, 2025 ರಂದು ಜ್ಯುರಿಚ್‌ನಲ್ಲಿ ಜಿಮ್ಮರವಾಲ್ಡ್ ಸಮ್ಮೇಳನ 2.0 ಅನ್ನು ಆಯೋಜಿಸಿತು. ಒಟ್ಟು 32 ದೇಶಗಳಿಂದ 403 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಇದರಲ್ಲಿ 95 ಜನ ನೇರವಾಗಿ, 308 ಜನ ಆನ್‌ಲೈನ್ ಮೂಲಕ ಸೇರಿದ್ದರು. ಆಹ್ವಾನದ ಮೇರೆಗೆ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಪಕ್ಷದ ವತಿಯಿಂದ ಪ್ರೊ. (ಡಾ.) ಧ್ರುವ ಮುಖರ್ಜಿಯವರನ್ನು ಈ ಸಮ್ಮೇಳನದಲ್ಲಿ ಭಾಗವಹಿಸಲು ಕಳುಹಿಸಲಾಯಿತು.

ಪೀಟರ್ ನೋವಾಕ್ (ಸ್ವತಂತ್ರ ಪತ್ರಕರ್ತ ಮತ್ತು ಕಮ್ಯುನಿಸ್ಟ್ ಕೌನ್ಸಿಲ್) ತಮ್ಮ ಸ್ವಾಗತ ಭಾಷಣದಲ್ಲಿ ಲೆನಿನ್ ಮತ್ತು ಬೋಲ್ಶೆವಿಕ್ ನೇತೃತ್ವದ ಜಿಮ್ಮರ್‌ವಾಲ್ಡ್ ಎಡಪಂಥೀಯ ಗುಂಪಿನ ಪಾತ್ರದ ಬಗ್ಗೆ ಮಾತನಾಡಿದರು. ಸಾಮ್ರಾಜ್ಯಶಾಹಿ ಯುದ್ಧದಲ್ಲಿ ಕಾರ್ಮಿಕ ವರ್ಗವು ತನ್ನದೇ ಸಾಮ್ರಾಜ್ಯಶಾಹಿ ದೇಶದ ಸೋಲಿಗೆ ಕೆಲಸ ಮಾಡಬೇಕು, ಯುದ್ಧವನ್ನು ಕ್ರಾಂತಿಕಾರಿ ಅಂತರ್‌ಯುದ್ಧವನ್ನಾಗಿ ಪರಿವರ್ತಿಸಬೇಕು ಮತ್ತು ಬಂಡವಾಳಶಾಹಿ ಸರ್ಕಾರವನ್ನು ಉರುಳಿಸಬೇಕು ಎಂಬ ಲೆನಿನ್ನರ ವಾದವನ್ನು ಬೆಂಬಲಿಸಿದರು. ಈ ತತ್ವವನ್ನು ನವೆಂಬರ್ ಕ್ರಾಂತಿಯಲ್ಲಿ ಸಾಕಾರಗೊಳಿಸಲಾಯಿತು. ಇದು ಹಂಗೇರಿ, ಜರ್ಮನಿ ಮತ್ತು ಇತರೆ ಹಲವು ದೇಶಗಳಲ್ಲಿ ಕ್ರಾಂತಿಕಾರಿ ಕಾರ್ಮಿಕ ವರ್ಗದ ಚಳುವಳಿಗೆ ಕಾರಣವಾಯಿತು. ಜಿಮ್ಮರ್‌ವಾಲ್ಡ್ ನಿಂದ ಕಲಿತ ಪಾಠವೆಂದರೆ ಇಂದು ಬಂಡವಾಳಶಾಹಿಗಳು ನಡೆಸುವ ಯುದ್ಧದಲ್ಲಿ ಕಾರ್ಮಿಕರು ಯಾರ ಪರವೂ ವಹಿಸಲಾಗದು. ಬದಲಿಗೆ, ಬಂಡವಾಳಶಾಹಿ ಯುದ್ಧಗಳ ವಿರುದ್ಧ ಅಂತರರಾಷ್ಟ್ರೀಯ ವರ್ಗ ಹೋರಾಟಗಳನ್ನು ಬೆಳೆಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

ಜರ್ಮನಿಯ ಎಂಎಲ್‌ಪಿಡಿ ಪಕ್ಷದ ಅಧ್ಯಕ್ಷೆ ಗ್ಯಾಬಿ ಫೆಕ್ಟ್‌ನರ್ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಇದು ಮೂರನೇ ವಿಶ್ವಯುದ್ಧದ ವಿರುದ್ಧ ದೃಢ ನಿಶ್ಚಯದಿಂದ ಹೋರಾಡುವ ಶಕ್ತಿಗಳ ಸಮ್ಮೇಳನವಾಗಿದೆ ಮತ್ತು ಜಿಮ್ಮರ್‌ವಾಲ್ಡ್ ಸ್ಫೂರ್ತಿಯನ್ನು ಎತ್ತಿ ಹಿಡಿಯುತ್ತದೆ. ಆದ್ದರಿಂದ ಬೇರೆ ಬೇರೆ ಲೆನಿನ್‌ವಾದಿ ಸಂಘಟನೆಗಳ ದೃಷ್ಟಿಕೋನ ಮತ್ತು ಅಭಿಪ್ರಾಯಗಳ ವಿನಿಮಯದ ಅಗತ್ಯವಿದೆ ಎಂದು ಎಲ್ಲರಿಗೂ ಅನಿಸಿದೆ ಎಂದು ಹೇಳಿದರು.

'ಸಾಮ್ರಾಜ್ಯಶಾಹಿ, ಫ್ಯಾಸೀವಾದ ಮತ್ತು ಜನರ ಪ್ರತಿರೋಧ' ಎಂಬ ವಿಷಯದ ಕುರಿತು ಮುಖ್ಯ ಭಾಷಣಕಾರರಲ್ಲಿ ಒಬ್ಬರಾದ ಪ್ರೊ. ಮುಖರ್ಜಿಯವರು ಮಾತನಾಡುತ್ತಾ, ಎರಡನೇ ಮಹಾಯುದ್ಧದಲ್ಲಿ ಫ್ಯಾಸೀವಾದಿ ಶಕ್ತಿಗಳನ್ನು ಸೋಲಿಸಿದ ಕೀರ್ತಿ ಮಹಾನ್ ಸ್ಟಾಲಿನ್ ನೇತೃತ್ವದ ಸಮಾಜವಾದಿ ಸೋವಿಯತ್ ರಾಜ್ಯಕ್ಕೆ ಸಲ್ಲುತ್ತದೆ; ಆದರೆ ಫ್ಯಾಸೀವಾದವು ಮುಂದುವರೆದ ಅಥವಾ ಅಭಿವೃದ್ಧಿಶೀಲ ಸಾಮ್ರಾಜ್ಯಶಾಹಿ ಬಂಡವಾಳಶಾಹಿ ದೇಶಗಳ ರಾಜಕೀಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಒಂದು ಸಾಮಾನ್ಯ ಗುಣಲಕ್ಷಣವಾಗಿ ಉಳಿದುಕೊಂಡಿದೆ ಎಂದು ಎಸ್‌ಯುಸಿಐ(ಸಿ)ನ ಸಂಸ್ಥಾಪಕರು, ಈ ಯುಗದ ಅಪ್ರತಿಮ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ರವರು 60 ವರ್ಷಗಳ ಹಿಂದೆಯೇ ಎಚ್ಚರಿಸಿದ್ದರು. ಫ್ಯಾಸೀವಾದ ಎಂಬುದು ಐತಿಹಾಸಿಕವಾಗಿ ಹದಗೊಂಡ ಪ್ರತಿ–ಕ್ರಾಂತಿಯ ಸ್ವರೂಪ, ಇದರಲ್ಲಿ ಬಂಡವಾಳಶಾಹಿಯು ಎಚ್ಚರಿಕೆಯ ನಡೆಯ ಮೂಲಕ ಕ್ರಾಂತಿಯನ್ನು ತಡೆಯಲು ಪ್ರಯತ್ನಿಸುತ್ತದೆ ಎಂದು ಅವರು ಸ್ಪಷ್ಟವಾಗಿ ತೋರಿಸಿದ್ದರು. ಆರ್ಥಿಕತೆಯ ಕೇಂದ್ರೀಕರಣ, ಪ್ರಭುತ್ವದಲ್ಲಿ ರಾಜಕೀಯ ಅಧಿಕಾರದ ಗರಿಷ್ಠ ಕ್ರೋಢೀಕರಣ ಮತ್ತು ಆಧ್ಯಾತ್ಮಿಕ ಹಾಗೂ ವಿಜ್ಞಾನದ ತಾಂತ್ರಿಕ ಅಂಶಗಳ ವಿಶಿಷ್ಟ ಮಿಶ್ರಣದ ಮೂಲಕ ಸಂಸ್ಕೃತಿಯ ಏಕರೂಪೀಕರಣ (cultural regimentation) ಸಾಧಿಸುವುದು ಫ್ಯಾಸೀವಾದದ ವಿಶಿಷ್ಟ ಗುಣಲಕ್ಷಣಗಳಾಗಿವೆ.

ಫ್ಯಾಸಿವಾದವು ಸಂಸದೀಯ ಪ್ರಜಾಪ್ರಭುತ್ವದ ಮುಖವಾಡವನ್ನಿಟ್ಟುಕೊಂಡು 'ಪ್ರಜಾಪ್ರಭುತ್ವದ ರೂಪ'ದಲ್ಲಿ ಕಾಣಿಸಿಕೊಳ್ಳುವುದು ಅತ್ಯಂತ ವಂಚಕವಾಗಿದೆ ಎಂದು ಕಾಮ್ರೇಡ್ ಶಿವದಾಸ್ ಘೋಷ್ ಹೇಳಿದ್ದರು. ಪ್ರಸ್ತುತ ಜಗತ್ತಿನಲ್ಲಿ, ಉದಾಹರಣೆಗೆ ಅಮೆರಿಕ, ಯುರೋಪ್, ಜಿಯೋನಿಸ್ಟ್ ಇಸ್ರೇಲ್, ಭಾರತ, ಬಾಂಗ್ಲಾದೇಶ ಮತ್ತು ಇತರ ಹಲವು ದೇಶಗಳಲ್ಲಿ ಉಗ್ರ ಬಲಪಂಥೀಯ ಫ್ಯಾಸೀವಾದಿ ಶಕ್ತಿಗಳು ಅಧಿಕಾರದಲ್ಲಿವೆ ಎಂದು ಪ್ರೊ. ಮುಖರ್ಜಿಯವರು ಒತ್ತಿ ಹೇಳಿದರು. ಜನರ ಒಗ್ಗಟ್ಟಿನ ಪ್ರತಿರೋಧವು ಬೆಳ್ಳಿರೇಖೆಯಂತೆ ಆಶಾದಾಯಕವಾಗಿದೆ. ಉದಾಹರಣೆಗೆ ಭಾರತದಲ್ಲಿ ಒಂದು ವರ್ಷಕ್ಕೂ ಹೆಚ್ಚು ಕಾಲ ನಡೆದ ಬಲಿಷ್ಠ ಒಗ್ಗಟ್ಟಿನ ರೈತ ಚಳುವಳಿಯು ರೈತ ವಿರೋಧಿ ಕಾನೂನುಗಳನ್ನು ಸರ್ಕಾರ ಹಿಂತೆಗೆದುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಬಂಡವಾಳಶಾಹಿ ಶೋಷಣೆ, ಸಾಮ್ರಾಜ್ಯಶಾಹಿ ಯುದ್ಧ ತಂತ್ರಗಾರಿಕೆ, ಫ್ಯಾಸಿಸ್ಟ್ ಸಂಸ್ಕೃತಿ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಫ್ಯಾಸಿಸ್ಟ್ ದಾಳಿಯ ವಿರುದ್ಧ ಎಲ್ಲಾ ದೇಶಗಳಲ್ಲಿ ಕಮ್ಯುನಿಸ್ಟರನ್ನು ಕೇಂದ್ರವಾಗಿಟ್ಟುಕೊಂಡು ಸಾಮ್ರಾಜ್ಯಶಾಹಿ ವಿರೋಧಿ, ಫ್ಯಾಸಿಸ್ಟ್ ವಿರೋಧಿ ಶಕ್ತಿಗಳ ವಿಶಾಲ ವೇದಿಕೆಗಳನ್ನು ನಿರ್ಮಿಸಿ ಬಲಿಷ್ಠ ಸಮೂಹ ಚಳುವಳಿಗಳನ್ನು ಕಟ್ಟುವುದು ಈ ಘಳಿಗೆಯ ಅವಶ್ಯಕತೆಯಾಗಿದೆ ಎಂದು ಹೇಳಿದರು.

ಪ್ರತಿಯೊಂದು ಅಧಿವೇಶನದ ನಂತರ ಸ್ಫೂರ್ತಿದಾಯಕ ಚರ್ಚೆಗಳು ನಡೆದವು. ಪ್ರಪಂಚದ ಪುನರ್ವಿಂಗಡನೆ ಬಗ್ಗೆ ಸಾಮ್ರಾಜ್ಯಶಾಹಿ ದೇಶಗಳ ನಡುವೆ ಸಂಘರ್ಷಗಳು ತೀಕ್ಷ್ಣವಾಗುತ್ತಿವೆ ಎಂದು ಒತ್ತಿ ಹೇಳಲಾಯಿತು. ಚೀನಾ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ – ಲೆನಿನ್‌ವಾದಿ –ಮಾವೋವಾದಿ)ದ ಪ್ರತಿನಿಧಿ, ಚೀನಾ ಒಂದು ಸಾಮ್ರಾಜ್ಯಶಾಹಿ ದೇಶವಾಗಿದ್ದು, ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ಬಣಕ್ಕೆ ವಿರುದ್ಧವಾಗಿ ರಷ್ಯಾದೊಂದಿಗೆ ಒಂದು ಬಣವನ್ನು ರಚಿಸುತ್ತಿದೆ ಎಂದು ವಿಶ್ಲೇಷಿಸಿದರು. ಅದೇ ರೀತಿ ರಷ್ಯಾದ ಪ್ರತಿನಿಧಿಯು ರಷ್ಯಾದ ಸಾಮ್ರಾಜ್ಯಶಾಹಿ ಆಕ್ರಮಣಶೀಲತೆಯನ್ನು ಟೀಕಿಸಿದರು. ಈಗ ಆಸ್ಟ್ರಿಯಾದಲ್ಲಿ ವಾಸಿಸುತ್ತಿರುವ ಕಾರ್ಲ್ ಲೆಬ್ನೆಕ್ಟ್ (ಕಾರ್ಲ್ ಮಾರ್ಕ್ಸ್ ಅವರ ಸಮಕಾಲೀನ ಕಾಮ್ರೇಡ್) ಅವರ ಮೊಮ್ಮಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಹಲವಾರು ಹಂತಗಳ ಚರ್ಚೆಯ ನಂತರ ಬಹುಮತದ ಮತದಾನದ ಮೂಲಕ 20 ಅಂಶಗಳ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಪ್ರೊ. ಮುಖರ್ಜಿಯವರು ಒತ್ತುಕೊಟ್ಟು ಕಾಮ್ರೇಡ್ ಶಿವದಾಸ್ ಘೋಷ್‌ರವರ ಬೋಧನೆಯನ್ನಾಧರಿಸಿದ ಮೂರು ಪ್ರಮುಖ ಅಂಶಗಳನ್ನು ಗೊತ್ತುವಳಿಯಲ್ಲಿ ಸೇರಿಸಿಕೊಂಡಿರುವುದು ಹರ್ಷದಾಯಿಕವಾಗಿದೆ. ಮಹಾನ್ ಸ್ಟಾಲಿನ್ ಅವರ ಪಾತ್ರದ ಕುರಿತು ನಮ್ಮ ವಿಶ್ಲೇಷಣೆಯ ಬಗ್ಗೆ ಪ್ರತಿನಿಧಿಗಳು ಹೆಚ್ಚಿನ ಆಸಕ್ತಿ ತೋರಿಸಿದರು. 'ಕ್ರುಶ್ಚೇವ್‌ಗೆ ಬಹಿರಂಗ ಪತ್ರ' ಎಂಬ ಕಾಮ್ರೇಡ್ ಶಿವದಾಸ್ ಘೋಷ್‌ರವರ ಕಿರು ಪುಸ್ತಕ ಮತ್ತು ಸ್ಟಾಲಿನ್ ಕುರಿತು ಕಾಮ್ರೇಡ್ ಪ್ರವಾಶ್ ಘೋಷ್ ರವರ ಪುಸ್ತಕದ ಲಭ್ಯವಿರುವ ಎಲ್ಲಾ ಪ್ರತಿಗಳು ಖಾಲಿಯಾದವು. ಇಟಲಿಯ ಒಬ್ಬ ಕಾಮ್ರೇಡರು, ತಾವು ಹೊಸ ಪಕ್ಷವನ್ನು ರಚಿಸುತ್ತಿರುವುದಾಗಿ ಹೇಳಿದರು ಮತ್ತು ಅವರು 'ಎಸ್‌ಯುಸಿಐ(ಸಿ) ಭಾರತದ ಏಕೈಕ ನೈಜ ಕಮ್ಯುನಿಸ್ಟ್ ಪಕ್ಷ ಏಕೆ?' ಎಂಬ ನಮ್ಮ ಪ್ರಕಟಣೆಯನ್ನು ಓದಲು ಉತ್ಸುಕರಾಗಿದ್ದರು. ಎಂಎಲ್‌ಪಿಡಿ ಯ ಸಂಘಟನಾಕಾರರು ನಿರ್ದಿಷ್ಟವಾಗಿ ಕಾಮ್ರೇಡ ಪ್ರವಾಶ್ ಘೋಷ್ ಅವರ ಸ್ಟಾಲಿನ್ ಕುರಿತ ಕಿರು ಪುಸ್ತಕ ಮತ್ತು ಜೆಕೋಸ್ಲೊವಾಕೀಯಾ ಕುರಿತಾದ ಕಾಮ್ರೇಡ್ ಶಿವದಾಸ್ ಘೋಷ್ ಅವರ ಪುಸ್ತಕವನ್ನು ಪಡೆಯಲು ಉತ್ಸುಕರಾಗಿದ್ದರು. ■

## ಕಬ್ಬು ಬೆಳೆಗಾರರ ಹೋರಾಟ

...7ನೇ ಪುಟದಿಂದ

ಮೇಲಿನ ಕೋಷ್ಟಕದಿಂದ ನಮಗೆ ಕಂಡುಬರುವುದೇನೆಂದರೆ ಒಂದು ಟನ್ ಕಬ್ಬಿನಿಂದ ಕನಿಷ್ಠ 15 ರಿಂದ 16 ಸಾವಿರ ರೂಪಾಯಿಗಳ ಆದಾಯವನ್ನು ಫ್ಯಾಕ್ಟರಿ ಮಾಲೀಕರು ಗಳಿಸುತ್ತಾರೆ. ಅದರಲ್ಲಿ ಕನಿಷ್ಠ ಅರ್ಧದಷ್ಟಾದರೂ ರೈತರಿಗೆ ದೊರೆಯಬೇಕಲ್ಲವೇ? ಆದರೆ ಎಂತಹ ದುರಂತ!! ಮಾಲಿಕರು ಯಃಕಶ್ಚಿತ್ 3000ರೂ.ಗಳನ್ನು ಮಾತ್ರ ಕೊಡುತ್ತೇವೆ ಎನ್ನುತ್ತಾರೆ. ಅಂದರೆ ಆದಾಯದ ಶೇ. 20–25ರಷ್ಟು ಮಾತ್ರ; ಉಳಿದ ಎಲ್ಲವನ್ನು ತಮ್ಮ ಲಾಭ ಎಂದು ಗುಳುಂ ಮಾಡುತ್ತಾರೆ.

ಈ ಮೋಸದಲ್ಲಿ ಸರ್ಕಾರಗಳು ಶಾಮೀಲಾಗಿವೆ. ಎಫ್ ಆರ್ ಪಿ ನಿಗದಿ ಮಾಡುವಾಗ ಕೇಂದ್ರ ಸರ್ಕಾರ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು–ಕೊಂಡು ಒಂದು ಟನ್ ಕಬ್ಬಿನಿಂದ ದೊರೆಯುವ ಆದಾಯದಲ್ಲಿ ಕನಿಷ್ಠ ಅರ್ಧದಷ್ಟಾದರೂ ರೈತರಿಗೆ ಸಂದಾಯ ಮಾಡುವಂತೆ ಬೆಲೆ ನಿಗದಿ ಮಾಡಬೇಕಲ್ಲವೇ? ಅಂದರೆ ಕನಿಷ್ಠ 6 ರಿಂದ 7 ಸಾವಿರ ಎಫ್‌ಆರ್‌ಪಿ ನಿಗದಿ ಮಾಡಬೇಕು. ಅದು ಬಿಟ್ಟು ಸರ್ಕಾರ ನ್ಯಾಯಯುತ ಬೆಲೆಯ ಹೆಸರಿನಲ್ಲಿ 20% ನಿಗದಿ ಮಾಡಿದೆ! ಎಂತಹ ಮೋಸ! ಬೇಲಿಯೇ ಎದ್ದು ಹೊಲ ಮೇಯುತ್ತಿದೆ! ಅಂದರೆ ಸರ್ಕಾರವೇ ಫ್ಯಾಕ್ಟರಿ ಮಾಲಿಕರ ಪರವಾಗಿ ಕೆಲಸ ಮಾಡುತ್ತಿದೆ. ರೈತರ ಹಿತವನ್ನು ಬಲಿ ಕೊಟ್ಟಿದೆ.

ಆದಾಗ್ಯೂ ಮಾಲೀಕರು ಈ ಅಲ್ಪ ಮೊತ್ತವನ್ನು ಸಂದಾಯ ಮಾಡಲು ತಯಾರಿಲ್ಲ. ರೈತರು ಆಗ್ರಹಿಸುತ್ತಿರುವುದು ಕೂಡ ಎಫ್‌ಆರ್‌ಪಿ ಬೆಲೆಗಿಂತ ಕಡಿಮೆಯಿದೆ. ಆದರೂ ಮಾಲೀಕರು ರೂ.3000 ಮಾತ್ರ ಕೊಡುತ್ತೇವೆ ಎಂದು ನಿಲುವು ತೆಗೆದು–ಕೊಂಡರು. ಅದನ್ನು ವಿರೋಧಿಸಿ ರೈತರು ರೂ.3500 ಕೊಡಬೇಕೆಂದು ಹೋರಾಟಕ್ಕೆ ಇಳಿದರು. ರೈತರು ತಮ್ಮ ನಿಲುವನ್ನು ವಿಷದವಾಗಿ ಜನತೆಗೆ ವಿವರಿಸಿ ಫ್ಯಾಕ್ಟರಿ ಮಾಲೀಕರ ಮೋಸವನ್ನು ಬಯಲಿಗೆಳೆಯಬೇಕಿತ್ತು. ಆದರೆ ಹೋರಾಟನಿರತ ರೈತರು ಬದುಕಿನ ಒತ್ತಡದಲ್ಲಿ ಸರಿಯಾದ ಹೋರಾಟದ ದಿಕ್ಕು ಕಾಣದೆ ನಾಯಕರುಗಳ ಹೊಂದಾಣಿಕೆ ನೀತಿ, ಇನ್ನಿತರ ಕಾರಣಗಳಿಂದ ಚಳುವಳಿಯನ್ನು ಮುಂದುವರಿಸಲಾಗದೆ ಬಲವಂತಕ್ಕೊಳಗಾಗಿ ವಿಧಿಯಿಲ್ಲದೆ ರೂ.3200–3300ಕ್ಕೆ ಒಪ್ಪಿಕೊಂಡು ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ. ಆದರೆ ಒಡಲೊಳಗಿನ ಕಿಚ್ಚು ಆರಿಲ್ಲ. ಹೋರಾಟಕ್ಕೆ ಅಗತ್ಯವಿರುವ ಸರಿಯಾದ ಸೈದ್ಧಾಂತಿಕ ಬದ್ಧತೆ ಸಂಧಾನ ರಹಿತ ಹೋರಾಟ ಮಾಡುವ ದಿಟ್ಟ ನಾಯಕತ್ವವನ್ನು ಎದುರು ನೋಡುತ್ತಿದ್ದಾ–ರೆ. ಆಗ ಮತ್ತೊಂದು ವೀರೋಚಿತ ಹೋರಾಟಕ್ಕೆ ಸನ್ನದ್ಧರಾಗುತ್ತಾರೆ.

ಅಲ್ಲದೆ ಇನ್ನೊಂದು ಅಂಶ ನಾವು ಗಮನಿಸಬೇಕು. ಅದೇನೆಂದರೆ, ರಾಜ್ಯ ಸರ್ಕಾರವು ಫ್ಯಾಕ್ಟರಿ ಮಾಲೀಕರಿಗೆ ಎಫ್‌ಆರ್‌ಪಿ ನಿಗದಿತ ಬೆಲೆಯನ್ನು ಕೊಡುವಂತೆ ತಾಕೀತು ಮಾಡಬೇಕಿತ್ತು. ಬದಲಿಗೆ ಸರ್ಕಾರವು ರೈತರಿಗೆ ನ್ಯಾಯ ಕೊಡಿಸಬೇಕಾದ್ದು ತನ್ನ ಜವಾಬ್ದಾರಿಯೇ ಅಲ್ಲವೇನೋ ಎಂಬಂತೆ ಅದು ಕೇವಲ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡುತ್ತ, ಕ್ಷುಲ್ಲಕ ರಾಜಕೀಯದಲ್ಲಿ ತೊಡಗಿತು. ಇನ್ನು ರಾಜ್ಯ ವಿರೋಧ ಪಕ್ಷ ಬಿಜೆಪಿಯು ತಮ್ಮದೇ ಪಕ್ಷ ಕೇಂದ್ರದಲ್ಲಿ ಅಧಿಕಾರದಲ್ಲಿದ್ದು ನ್ಯಾಯೋಚಿತವಾಗಿ ಎಫ್ ಆರ್ ಪಿ ನಿಗದಿ ಮಾಡದೆ ರೈತರಿಗೆ ಮೋಸ ಮಾಡಿರುವುದನ್ನು ತರಾಟೆಗೆ ತೆಗೆದುಕೊಳ್ಳಲಿಲ್ಲ. ಫ್ಯಾಕ್ಟರಿ ಮಾಲೀಕರ ವಿರುದ್ಧ ಧ್ವನಿ ಎತ್ತಲಿಲ್ಲ. ಬದಲಿಗೆ. ರಾಜ್ಯ ಸರ್ಕಾರವನ್ನು ಖಂಡಿಸುತ್ತಾ ರಾಜಕೀಯ ಮಾಡಿದರು. ಇಬ್ಬರೂ ಸೇರಿಕೊಂಡು ರೈತರನ್ನು ಬಲಿಕೊಟ್ಟರು.

ಇದರಲ್ಲಿ ಆಶ್ಚರ್ಯಕರವಾದುದು ಏನೂ ಇಲ್ಲ! ಯಾಕೆಂದರೆ ಈ ಸಕ್ಕರೆ ಕಾರ್ಖಾನೆಗಳ ಮಾಲೀಕರು ಬಹುತೇಕ ಈ ಎರಡೂ ಪಕ್ಷಗಳ ಸಚಿವರು, ಸಂಸದರು, ಶಾಸಕರು ಮತ್ತಿತರ ಮುಖಂಡರೇ ಆಗಿದ್ದಾರೆ. ಅವರ ಲಾಭದ ಬಯಕೆಯನ್ನು ಮೀರಿ, ಅವರನ್ನು ಎದುರು ಹಾಕಿಕೊಂಡು ಇವರು ಏನನ್ನೂ ನಿರ್ಧರಿಸಲಾರರು. ಇವರು ಕಾರ್ಖಾನೆ ಮಾಲೀಕರ ನಿಷ್ಠಾವಂತ ಸೇವಕರು. ಆದ್ದರಿಂದ ಅವರ ಹಿತದೃಷ್ಟಿಯಿಂದ ಆಡಳಿತ ನಡೆಸುತ್ತಿದ್ದಾರೆ. ಅಂತೆಯೇ ದುಡಿಯುವ ರೈತರನ್ನು ಬಲಿಕೊಡುತ್ತಿದ್ದಾರೆ. ಆದ್ದ–ರಿಂದ ರೈತರು ಅಲ್ಲದೆ ಸಮಸ್ತ ದುಡಿಯುವ ಜನತೆ ಈ ಬಗ್ಗೆ ಜಾಗೃತರಾಗಬೇಕು. ಇಂತಹ ವ್ಯವಸ್ಥೆಯ ವಿರುದ್ಧ ಸಿಡಿದೇಳಬೇಕು. ಪ್ರಬಲ ಹೋರಾಟಗಳನ್ನು ಸಂಘಟಿಸಬೇಕು. ಹಾಗೂ ಅದೇ ಪ್ರಕ್ರಿಯೆಯಲ್ಲಿ ಎಲ್ಲೆಡೆ ಹಳ್ಳಿ ಹಳ್ಳಿಗಳಲ್ಲಿ ಜನತೆಯ ಹೋರಾಟ ಸಮಿತಿಗಳನ್ನು ಕಟ್ಟಬೇಕು. ತನ್ಮೂಲಕ ರಾಜಿರಹಿತ ಸಮರಶೀಲ ಹೋರಾಟಗಳನ್ನು ಸಂಘಟಿಸಬೇಕು. ಆಗ ಮಾತ್ರವೇ ತಮ್ಮ ಸಮಸ್ಯೆಗಳ ಪರಿಹಾರದ ನಿಟ್ಟಿನಲ್ಲಿ ಅವರು ಮೊದಲ ಹೆಜ್ಜೆ ಇಟ್ಟಂತಾಗುತ್ತದೆ. ಇದೊಂದೆ ಅವರ ಮುಂದಿರುವ ದಾರಿ.

ಈ ಹೋರಾಟಕ್ಕೆ ಎಐಕೆಕೆಎಂಎಸ್ ರಾಜ್ಯ ಸಮಿತಿ ಸಂಪೂರ್ಣ ಬೆಂಬಲ ನೀಡಿ ರಾಜ್ಯಾಧ್ಯಕ್ಷರಾದ ಎಂ ಶಶಿಧರ್ ಮಾತನಾಡಿ ಮಹಾರಾಷ್ಟ್ರದಲ್ಲಿ ಪ್ರತಿಟನ್ನಿಗೆ ರೂ.3700 ಉತ್ತರ ಪ್ರದೇಶದಲ್ಲಿ ರೂ.4000, ಪಂಜಾಬ್‌ನಲ್ಲಿ ರೂ.4010, ಹರಿಯಾಣದಲ್ಲಿ ರೂ. 4020 ಈಗ ನಿಡಲಾಗುತ್ತಿದೆ ಆದ್ದರಿಂದ ರೈತರ ನ್ಯಾಯಯುತ ಬೇಡಿಕೆಯನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಅಲ್ಲದೆ ಕನಿಷ್ಠ 4800 ರೂ.ಗಳನ್ನು ನಿಗದಿಮಾಡಿ ಕಬ್ಬು ಬೆಳೆಗಾರರಿಗೆ ಕೊಡಬೇಕಾದ್ದು ನ್ಯಾಯೋಚಿತ ಎಂದು ಹೇಳಿದರು. ಬೆಳಗಾವಿ, ಯರಗಟ್ಟಿ ಇನ್ನಿತರ ಸ್ಥಳಗಳಲ್ಲಿ ರಾಜ್ಯ ಸಮಿತಿ ನಾಯಕರಾದ ಕಾ. ಲಕ್ಷಮಣ್ ಜಡಗಣ್ಣನವರ್ ಹಾಗೂ ಸದಸ್ಯರಾದ ಕಾ. ಲಕ್ಕಪ್ಪನವರು ಹೋರಾಟವನ್ನು ಬೆಂಬಲಿಸಿ ಹೋರಾಟದಲ್ಲಿ ಪಾಲ್ಗೊಂಡರು. ■

Registered Newspaper
Karmika Drushtikona PGRI/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

**...ಕೆಪಿಎಸ್ ಮ್ಯಾಗ್ನೆಟ್ ಶಾಲೆ**

1ನೇ ಪುಟದಿಂದ

ಕ್ರಾಂತಿಕಾರಿಗಳಾದ ನೇತಾಜಿ–ಭಗತ್ ಸಿಂಗ್ ಅವರ ಆಶಯಗಳಿಗೆ ವಿರುದ್ಧವಾಗಿ ಸರ್ಕಾರವು ತಳಮಟ್ಟದ ಶಾಲೆಗಳನ್ನು ಮುಚ್ಚುತ್ತಿದೆ. ಇದನ್ನು ವಿರೋಧಿಸಿ ರಾಜ್ಯದಲ್ಲಿ ಬಲಿಷ್ಠ ಹೋರಾಟ ಕಟ್ಟುವುದು, ವಿದ್ಯಾರ್ಥಿಗಳು, ಪಾಲಕರು ಹಾಗೂ ಶಿಕ್ಷಣ–ಪ್ರೇಮಿ ಜನತೆಯ ಜವಾಬ್ದಾರಿ. ಈ ನಿಟ್ಟಿನಲ್ಲಿ ಶಿಕ್ಷಣವನ್ನು ರಕ್ಷಿಸಲು ಮತ್ತೊಂದು ನವೋದಯ ಚಳುವಳಿ ಕಟ್ಟಬೇಕು" ಎಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ರಾಜ್ಯ ಉಪಾಧ್ಯಕ್ಷರುಗಳಾದ ಕಾ. ಅಭಯಾ ದಿವಾಕರ್, ಕಾ.ಚಂದ್ರಕಲಾ, ರಾಜ್ಯ ಕಚೇರಿ ಕಾರ್ಯದರ್ಶಿ ಕಾ.ಮಹಾಂತೇಶ್, ರಾಜ್ಯ ಖಜಾಂಚಿ ಕಾ.ಸುಭಾಷ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾ.ಕಲ್ಯಾಣ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ.ವಿನಯ್ ಚಂದ್ರ ಭಾಗವಹಿಸಿದ್ದು, ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ■




ಮಡಿಕೇರಿ




## ಭುವನೇಶ್ವರದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ




ಜನರ ಜ್ವಲಂತ ಸಮಸ್ಯೆಗಳ ವಿರುದ್ಧ ಒಡಿಸ್ಸಾದ ಭುವನೇಶ್ವರದಲ್ಲಿ ನವೆಂಬರ್ 25ರಂದು ಎಸ್‌ಯುಸಿಐ(ಸಿ) ಸಂಘಟಿಸಿದ್ದ ಬೃಹತ್ ಮೆರವಣಿಗೆ.

ಹಾಸನ




'ಕೆಪಿಎಸ್–ಮ್ಯಾಗ್ನೆಟ್' ಹೆಸರಿನಲ್ಲಿ 40 ಸಾವಿರಕ್ಕೂ ಹೆಚ್ಚು ಅಧಿಕ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ರಾಜ್ಯಾದ್ಯಂತ ವಿವಿಧ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

## ಸಂಡೂರು: ಎಐಯುಟಿಯುಸಿ ನೇತೃತ್ವದಲ್ಲಿ ಗಣಿ ಕಾರ್ಮಿಕರ ಧೀರೋದಾತ್ತ ಹೋರಾಟಕ್ಕೆ ಸಂದ ಜಯ




ಎನ್.ಎಂ.ಡಿ.ಸಿ (National Mining Development Corporation) ಕೇಂದ್ರ ಸರ್ಕಾರದ ಗಣಿಗಾರಿಕೆ ಸಂಸ್ಥೆಯಾಗಿದೆ. ಬಳ್ಳಾರಿಯ ಸಂಡೂರು ತಾಲ್ಲೂಕಿನಲ್ಲಿ ಈ ಸಂಸ್ಥೆ, ಕಬ್ಬಿಣ ಅದಿರಿನ ಗಣಿಗಾರಿಕೆ ನಡೆಸುತ್ತಿದೆ. ಇದರ ಅಡಿಯಲ್ಲಿ ಪೆಲೆಟ್ ಹಾಗೂ ಬಿನಿಫಿಕೇಷನ್ ಪ್ಲಾಂಟ್ ಗಳು ಕಾರ್ಯನಿರ್ವಹಿಸುತ್ತಿವೆ. ಈ ಎರಡೂ ಪ್ಲಾಂಟ್‌ನ ನೂರಾರು ಹೊರಗುತ್ತಿಗೆ ಕಾರ್ಮಿಕರು ಎಐಯುಟಿಯುಸಿಗೆ ಸಂಯೋಜನೆಗೊಂಡ ಸಂಯುಕ್ತ ಗಣಿ ಕಾರ್ಮಿಕ ಸಂಘದ ಸದಸ್ಯರಾಗಿದ್ದಾರೆ. ನವೆಂಬರ್ 18, ರಂದು ಟೆಂಡರ್ ಮುಗಿದ ಹಿನ್ನೆಲೆಯಲ್ಲಿ, ಎನ್.ಎಂ.ಡಿ.ಸಿ. ಪೆಲೆಟ್ ಪ್ಲಾಂಟ್ ಹಾಗೂ ಬೆನಿಫಿಕೇಷನ್ ಪ್ಲಾಂಟ್‌ನ ಗುತ್ತಿಗೆ ಕಾರ್ಮಿಕರನ್ನು ವಜಾಗೊಳಿಸಲಾಗಿತ್ತು. ಈ ಎರಡೂ ಪ್ಲಾಂಟ್‌ಗಳನ್ನು ಬೇರೊಂದು ಕಂಪನಿಗೆ ಲೀಸ್‌ಗೆ ನೀಡಲಾಗಿದೆ, ಅವರು ಬರುವವರೆಗೂ ಕಾಯಬೇಕು, ಈ ರೀತಿ ಹಾರಿಕೆ ಉತ್ತರವನ್ನು ಎನ್.ಎಂ.ಡಿ.ಸಿ. ಮುಖ್ಯಸ್ಥರು ನೀಡುತ್ತಿದ್ದರು. ಕೇಂದ್ರ ಸರ್ಕಾರದ ಮೈನಿಂಗ್ ಸಂಸ್ಥೆಯಾಗಿದ್ದರೂ, ಮೂಲ ಮಾಲೀಕರಾಗಿದ್ದರೂ, ಸ್ವಲ್ಪವೂ ಜವಾಬ್ದಾರಿ ತೆಗೆದುಕೊಳ್ಳದೆ, ಗುತ್ತಿಗೆದಾರರ ಮೇಲೆ ಜವಾಬ್ದಾರಿಯನ್ನು ಹೊರೆಸಿ, ಎನ್.ಎಂ.ಡಿ.ಸಿ. ಕೈ ತೊಳೆದುಕೊಂಡಿತ್ತು. ಯೂನಿಯನ್ ವತಿಯಿಂದ ಮನವಿ ಪತ್ರ, ಇ–ಮೇಲ್ ಕಳುಹಿಸಿದರೂ, ಯಾವುದೇ ರೀತಿಯಲ್ಲಿ ಚರ್ಚೆಗೆ ಆಹ್ವಾನಿಸಲಿಲ್ಲ. ಇದರಿಂದ ಆಕ್ರೋಶಿತರಾದ ಗುತ್ತಿಗೆ ಕಾರ್ಮಿಕರು ಎಐಯುಟಿಯುಸಿಗೆ ಸಂಯೋಜನೆಗೊಂಡ ಸಂಯುಕ್ತ ಗಣಿ ಕಾರ್ಮಿಕ ಸಂಘದ ನೇತೃತ್ವದಲ್ಲಿ ಹೋರಾಟಕ್ಕೆ ಸಜ್ಜಾದರು.

ನವೆಂಬರ್ 20ರಂದು ನಡೆದ ಗಣಿ ಕಾರ್ಮಿಕರ ಸಮ್ಮೇಳನ ಇನ್ನಷ್ಟು ಅವರಲ್ಲಿ ದೃಢತೆ ಹಾಗೂ ಸ್ಫೂರ್ತಿಯನ್ನು ತುಂಬಿತು. ಈ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ಹೋರಾಟದ ರೂಪುರೇಷೆ ನಿರ್ಧರಿಸಲಾಯಿತು.

ನವೆಂಬರ್ 24ರಂದು ಸುಮಾರು 500 ಕಾರ್ಮಿಕರು ಎನ್.ಎಂ.ಡಿ.ಸಿ. ಮುಖ್ಯದ್ವಾರದ ಮುಂದೆ ಪ್ರತಿಭಟನೆ ಆರಂಭಿಸಿದರು. ಎನ್.ಎಂ.ಡಿ.ಸಿ.ಯ ಕಳೆದ 50 ವರ್ಷಗಳ ಇತಿಹಾಸದಲ್ಲಿ ಈ ರೀತಿ ಯಾರೂ ಮಾಡಿರಲಿಲ್ಲ. ಇದು ಐತಿಹಾಸಿಕ ಎಂದೇ ಇಲ್ಲಿನ ಸ್ಥಳೀಯ ಜನರ ಅಭಿಪ್ರಾಯ. ಸಂಯುಕ್ತ ಗಣಿ ಕಾರ್ಮಿಕ ಸಂಘದ ಅಧ್ಯಕ್ಷರು ಹಾಗೂ ಎಐಯುಟಿ–ಯುಸಿ ರಾಜ್ಯ ಅಧ್ಯಕ್ಷರಾದ ಕಾ. ಕೆ. ಸೋಮಶೇಖರ್, ರಾಜ್ಯ ಉಪಾಧ್ಯಕ್ಷರಾದ ಕಾ.ಚಂದ್ರಶೇಖರ್ ಮೇಟಿ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಂಯುಕ್ತ ಗಣಿ ಕಾರ್ಮಿಕ ಸಂಘದ ಮುಖಂಡರಾದ ಕಾ.ಎ.ದೇವದಾಸ್, ಕಾ.ಸೋಮಶೇಖರ ಗೌಡ, ಡಾ.ಪ್ರಮೋದ್ ನೇತೃತ್ವ ವಹಿಸಿದ್ದರು.

ಪ್ರತಿಭಟನೆ ಸಂದರ್ಭದಲ್ಲಿ ಎನ್.ಎಂ.ಡಿ.ಸಿ. ಉನ್ನತ ಅಧಿಕಾರಿಗಳನ್ನು ಭೇಟಿ ಮಾಡಲಾಯಿತು. ನವೆಂಬರ್ 28ಕ್ಕೆ ಗುತ್ತಿಗೆದಾರರೊಂದಿಗೆ ಸಭೆ ನಡೆಸಿ, ಸಮಸ್ಯೆ ಇತ್ಯರ್ಥಪಡಿಸುವುದಾಗಿ, ಅಧಿಕಾರಿಗಳು ಭರವಸೆ ನೀಡಿದರು.

ಪ್ರತಿಭಟನೆಯನ್ನು ತೀವ್ರಗೊಳಿಸಿದ ಕಾರ್ಮಿಕರು ನವೆಂಬರ್ 27 ರಂದು ಮುಖ್ಯ ದ್ವಾರ, ಲಾರಿ, ಗೂಡ್ಸ್ ರೈಲು ಸಂಚಾರ ಎಲ್ಲವನ್ನೂ ಬಂದ್ ಮಾಡಿದರು. ಖಾಯಂ ಉದ್ಯೋಗಿಗಳು ಪ್ಲಾಂಟ್ ಒಳಗೆ ಹೋಗದಂತೆ ಮನವೊಲಿಸಿದರು. ಇಡೀ ಎನ್.ಎಂ.ಡಿ.ಸಿ. ಆಡಳಿತ ವರ್ಗದಲ್ಲಿ ನಡುಕ ಪ್ರಾರಂಭವಾಯಿತು. ಇಡೀ ದಿನ ಈ ರೀತಿ ನಡೆದು ಆಡಳಿತ ಮಂಡಳಿಯ ಮೇಲೆ ಸಾಕಷ್ಟು ಒತ್ತಡ ಉಂಟಾಗಿತ್ತು. ಸ್ಥಳೀಯ ಸಂಸದರು ಕೂಡ ಭಾಗವಹಿಸಿ ಹೋರಾಟವನ್ನು ಬೆಂಬಲಿಸಿ ಮಾತನಾಡಿದರು.

ಹೋರಾಟದ ಒತ್ತಡದ ಫಲವಾಗಿ, ಸಮಸ್ಯೆಗೆ ಪರಿಹಾರ ಒದಗಿಸಲು ಡಿಸೆಂಬರ್ 6ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ, ಸಂಸದರು, ಕಾರ್ಮಿಕ ಆಯುಕ್ತರು, ಜಿಲ್ಲಾ ಪಂಚಾಯತ್ ಸಿಇಓ, ಎನ್.ಎಂ.ಡಿ.ಸಿ. ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಯೂನಿಯನ್ ಮುಖಂಡರ ಉಪಸ್ಥಿತಿಯಲ್ಲಿ ಸಭೆ ನಡೆಯಿತು. ಡಿಸೆಂಬರ್ 10 ರಂದು ಪ್ರಾದೇಶಿಕ ಕಾರ್ಮಿಕ ಆಯುಕ್ತರು ನಡೆಸಿದ ಸಂಧಾನ ಸಭೆಯಲ್ಲಿ ಕಾರ್ಮಿಕರು ಎತ್ತಿದ ಎಲ್ಲ ಬೇಡಿಕೆಗಳನ್ನು ಒಪ್ಪಿ ತ್ರಿಪಕ್ಷೀಯ ಲಿಖಿತ ಒಪ್ಪಂದ ಮಾಡಲಾಗಿದೆ. ಮುಂದಿನ ಮಾರ್ಚ್ ವೇಳೆಗೆ ಹೋರಾಟ ನಿರತ ಎಲ್ಲ ಹೊರಗುತ್ತಿಗೆ ಕಾರ್ಮಿಕರನ್ನು ಹಂತಹಂತವಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗುವುದು ಎಂಬ ಖಚಿತ ಭರವಸೆ ಲಭಿಸಿದಂತಾಗಿದೆ. ಒಂದು ಕ್ರಾಂತಿಕಾರಿ ಕಾರ್ಮಿಕ ಸಂಘಟನೆಯ ನೇತೃತ್ವದಲ್ಲಿ ಹೋರಾಟ ನಡೆದರೆ ಹೇಗೆ ಜಯ ಸಾಧಿಸಬಹುದು ಎಂಬುದಕ್ಕೆ ಇದು ಇನ್ನೊಂದು ನಿದರ್ಶನ. ■

## ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳ ಬಂಧನಕ್ಕೆ ಎಸ್‌ಯುಸಿಐ(ಸಿ) ಖಂಡನೆ

**ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಶ್ರೀಮತಿ ಕೆ.ಉಮಾ ಅವರು ದಿ. 10.12.2025 ರಂದು ನೀಡಿದ ಪತ್ರಿಕಾ ಹೇಳಿಕೆ**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ತುಂಬಬೇಕು, ವಯೋಮಿತಿಯನ್ನು ಐದು ವರ್ಷ ಹೆಚ್ಚಿಸಬೇಕು, ನೇಮಕಾತಿ ಪರೀಕ್ಷೆಗಳ ಶುಲ್ಕ ಕಡಿತ ಮಾಡಬೇಕು, ನೇಮಕಾತಿಯಲ್ಲಿ ಭ್ರಷ್ಟಾಚಾರ ತಡೆಗಟ್ಟಬೇಕು, ನೇಮಕಾತಿ ಪರೀಕ್ಷೆಗಳಿಗೆ ಪ್ರಯಾಣಿಸುವವರಿಗೆ ಉಚಿತ ಸಾರಿಗೆ ಸೌಲಭ್ಯ ನೀಡಬೇಕು ಇತ್ಯಾದಿ ಹಕ್ಕೊತ್ತಾಯಗಳಿಗಾಗಿ ಧಾರವಾಡದಲ್ಲಿ ಉದ್ಯೋಗಾಂಕ್ಷಿಗಳ ಹೋರಾಟ ಸಮಿತಿ ಸಂಘಟಿಸಿದ್ದ ಶಾಂತಿಯುತ ಧರಣಿಯನ್ನು ಪೊಲೀಸ್ ಬಲದ ಮೂಲಕ ಹತ್ತಿಕ್ಕಿದ ರಾಜ್ಯ ಸರ್ಕಾರದ ಕ್ರಮವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ.

ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನವಾದ ಡಿಸೆಂಬರ್ 10ರಂದೇ ರಾಜ್ಯದ ಯುವಜನರ ಪ್ರತಿಭಟನಾ ದನಿಯನ್ನು ಅಡಗಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ವಿರೋಧಾಭಾಸ. ಉದ್ಯೋಗ ಎಂಬ ತಮ್ಮ ಬದುಕುವ ಹಕ್ಕಿಗಾಗಿ ರಾಜ್ಯದ ಯುವ ಉದ್ಯೋಗಾಂಕ್ಷಿಗಳು ಹಲವಾರು ಬಾರಿ ಪ್ರತಿಭಟನೆ, ಮನವಿ ಪತ್ರ ಸಲ್ಲಿಕೆ ಯಂತಹ ವಿಧಾನಗಳನ್ನು ಅನುಸರಿಸಿದ್ದಾರೆ.

ಪೊಲೀಸರ ಗೊಡ್ಡು ಬೆದರಿಕೆಗಳಿಗೆ ಮಣಿಯದೆ ಸಂಘಟಿತ ಸಮರಶೀಲ ಹೋರಾಟಕ್ಕೆ ಮುಂದಾದ ಉದ್ಯೋಗಾಕಾಂಕ್ಷಿಗಳಿಗೆ ನಮ್ಮ ಪಕ್ಷವು ಹೃತ್ಪೂರ್ವಕ ಕ್ರಾಂತಿಕಾರಿ ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಬಿಜೆಪಿಗೆ ತಾನು ಪರ್ಯಾಯ ಎಂದು ಬಿಂಬಿಸುತ್ತಾ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಇಂತಹ ದಮನಕಾರಿ ಕ್ರಮಕ್ಕೆ ಮುಂದಾಗಿರುವುದು ಶೋಚನೀಯ ಸಂಗತಿ. ದಿನನಿತ್ಯ ಸಂವಿಧಾನದ ಪೀಠಿಕೆಯನ್ನು ಪಠಿಸುವ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಶಾಂತಿಯುತ ಪ್ರತಿಭಟನೆ ಎಂಬುದು ಮೂಲಭೂತ ಹಕ್ಕು ಎಂಬುದನ್ನು ರಾಜ್ಯದ ಯುವಜನರು ಪಾಠ ಮಾಡಬೇಕಾದ ಕಾಲ ಬಂದಿದೆ. ಬಂಧಿಸಿದ ಎಲ್ಲ ಹೋರಾಟಗಾರರನ್ನು ಬೇಷರತ್ ಬಿಡುಗಡೆ ಮಾಡಬೇಕು, ಉದ್ಯೋಗಾಕಾಂಕ್ಷಿಗಳು ಸರ್ಕಾರದ ಇಂತಹ ದೌರ್ಜನ್ಯಗಳಿಗೆ ಮಣಿಯದೆ ತಮ್ಮ ಹೋರಾಟವನ್ನು ತೀವ್ರಗೊಳಿಸಬೇಕು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹೋರಾಟ ನಿರತರೊಂದಿಗೆ ಮಾತುಕತೆ ನಡೆಸಿ, ಅವರ ನ್ಯಾಯಯುತ ಆಗ್ರಹಗಳನ್ನು ಈಡೇರಿಸಲು ಮುಂದಾಗಬೇಕು ಎಂದು ಎಸ್‌ಯುಸಿಐ(ಸಿ) ಒತ್ತಾಯಿಸುತ್ತದೆ.

Published by: K.Uma on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at: MNS Printers Private Limited, 345/4, Bhattarahalli, Old Madras Road, Bengaluru, Karnataka-560049. Website: www.sucic.org & www.sucic-karnataka.org EDITOR: K.Uma